ಸಾಹಿತ್ಯ ದಾಸೋಹ – ೨೨೨

ಸಂಚಿಕೆ 53 – ಅಕ್ಟೋಬರ್ 2024

14.09.2024ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ . . .

ನಮ್ಮ ಮಾತು

ಆತ್ಮೀಯರೆ,

ಕಳೆದ ತಿಂಗಳು ಅಂದರೆ 14.09.2024ರಂದು ನಡೆದ ಸಾಹಿತ್ಯ ದಾಸೋಹ-229ರಲ್ಲಿ ಪ್ರಸ್ತುತಪಡಿಸಲಾದ ಬರಹಗಳ ಸಂಕಲನವನ್ನು ತಮಗೆ ಅರ್ಪಿಸುತ್ತಿದ್ದೇವೆ. ದಾಸೋಹದ ಅಧ್ಯಕ್ಷತೆ ವಹಿಸಿ ಎಲ್ಲ ಪ್ರಸ್ತುತಿಗಳನ್ನೂ ವಿಶ್ಲೇಷಿಸಿ ತಮ್ಮ ಅನಿಸಿಕೆಗಳನ್ನು ದಾಖಲಿಸಿದ ಶ್ರೀ ಹು.ವಾ.ಶ್ರೀಪ್ರಕಾಶ್ ಅವರಿಗೆ ಹಾಗೂ ದಾಸೋಹದಲ್ಲಿ ತಮ್ಮ ಬರಹಗಳನ್ನು ಓದಿದ ಸದಸ್ಯರಿಗೆ ಮತ್ತು ಪ್ರೇಕ್ಷಕರಾಗಿ ಭಾಗವಹಿಸಿದ ಎಲ್ಲರಿಗೂ ವಂದನೆಗಳು.

ಕ್ರೋಧಿ ನಾಮ ಸಂವತ್ಸರದ ಶ್ರಾವಣ ಮಾಸದಲ್ಲಿ ಅಂದರೆ 05.08.2024ರಿಂದ 02.09.2024ರ ನಡುವೆ ನಮ್ಮ ವೇದಿಕೆಯು ನಡೆಸಿದ 'ಪುಟ್ಟ ಕಥಾ ಶ್ರಾವಣ ಅಭಿಯಾನ'ದ ಯಶೋಗಾಥೆ ತಮ್ಮೆಲ್ಲರಿಗೂ ತಿಳಿದಿದೆ. ಈ ಅಭಿಯಾನದಲ್ಲಿ ಪ್ರಸ್ತುತಪಡಿಸಲಾದ ವಿಭಿನ್ನ ಕತೆಗಳ ಅವಲೋಕನವನ್ನು 29.09.2024ರಂದು ನಡೆದ ಈ ಬಾರಿಯ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕತೆಗಳನ್ನು ಅವಲೋಕಿಸಿದ ಶ್ರೀ ಕೆ.ಎನ್.ಮಹಾಬಲ ಮತ್ತು ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಎಲ್. ಗಿರಿಜಾ ರಾಜ್ ಅವರು ತಮ್ಮ ಅಭಿಪ್ರಾಯಗಳನ್ನು ಲಿಖಿತ ರೂಪದಲ್ಲಿ ನೀಡಿದ್ದು, ಅವುಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಈ ಇಬ್ಬರಿಗೂ ನಮ್ಮ ವಂದನೆಗಳು.

ಈ ಬಾರಿ ನಮ್ಮ 'ಸಾಹಿತ್ಯ ದಾಸೋಹ' ಆರಂಭವಾದ 25ನೆಯ ವರ್ಷ. ಈ ವೇದಿಕೆ ಮೂಲಕ ಬೆಳಕಿಗೆ ಬಂದ ಅನೇಕ ಬರಹಗಾರರು ತಮ್ಮ ಹಲವಾರು ಕೃತಿಗಳನ್ನು ಪ್ರಕಟಿಸಿರುವುದು ಹೆಮ್ಮೆಯ ಸಂಗತಿ. ಮುಂಬರುವ ದಾಸೋಹಗಳಲ್ಲಿ ವೇದಿಕೆಯ ಸದಸ್ಯರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂಬುದೇ ನಮ್ಮ ಆಶಯ.

ಪ್ರತಿ ತಿಂಗಳೂ ನಡೆಯುವ ಸಾಹಿತ್ಯ ದಾಸೋಹ ಮತ್ತು ತಿಂಗಳ ಬೆಳಕು ಕಾರ್ಯಕ್ರಮಗಳ ಯಶಸ್ಸಿಗೆ ಸಹಕರಿಸುತ್ತಿರುವ ಎಲ್ಲ ಬರಹಗಾರರಿಗೆ, ತಾಂತ್ರಿಕ ತಂಡದವರಿಗೆ ಮತ್ತು ವೀಕ್ಷಕರಿಗೆ ನಮ್ಮ ಧನ್ಯವಾದಗಳು.

ಸಂಚಾಲಕ ಸಮಿತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ *20.10.2024*

ದಾಸೋಹದ ಪುಟಗಳಲ್ಲಿ . . .

ಮುಖಚಿತ್ರ: ನವರಾತ್ರಿ ಮನೆ ಮನೆಯಲ್ಲೂ ಬೊಂಬೆ ಹಬ್ಬ – ಡಾ.ಶುಭಶ್ರೀ ಪ್ರಸಾದ್ ಅವರ ನಿವಾಸ, ಮಂಡ್ಯ.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ


ಸಾಹಿತ್ಯ ದಾಸೋಹ – 229

ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

14ನೆಯ ಸೆಪ್ಟೆಂಬರ್ 2024ರ ಶನಿವಾರದಂದು ಇಳಿ ಮಧ್ಯಾಹ್ನ 3.30ಕ್ಕೆ ಸರಿಯಾಗಿ 229ನೆಯ ಸಾಹಿತ್ಯ ದಾಸೋಹ ಕಾರ್ಯಕ್ರಮವು ಅಂತರ್ಜಾಲ ವೇದಿಕೆಯಲ್ಲಿ (ಗೂಗಲ್‌ಮೀಟ್) ಶ್ರೀ ಹು.ವಾ.ಶ್ರೀಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ಶ್ರೀ ಕೆ.ಎನ್.ಮಹಾಬಲ ಅವರು ಸಭೆಯ ನಿರ್ವಹಣೆ ಹೊತ್ತು ಎಲ್ಲರನ್ನೂ ಆತ್ಮೀಯವಾಗಿ ಬರಮಾಡಿಕೊಂಡರು. ಶ್ರೀಮತಿ ಸಿ.ಆರ್.ಕಮಲಾಕ್ಷಿ ಅವರು 229ನೇ ಸಾಹಿತ್ಯ ದಾಸೋಹದ ಅಧ್ಯಕ್ಷತರಾದ ಶ್ರೀ.ಹು.ವಾ. ಶ್ರೀಪ್ರಕಾಶ್ ಅವರನ್ನು ಪರಿಚಯಿಸಿ, ಎಲ್ಲರನ್ನೂ ಸ್ವಾಗತಿಸಿದರು.

ಸಂಚಾಲಕ ಸಮಿತಿಯ ಪರವಾಗಿ ಶ್ರೀ ಬೆಂ.ಶ್ರೀ.ರವೀಂದ್ರ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ದಾಸೋಹದ ಅಧ್ಯಕ್ಷತೆ ವಹಿಸಿರುವ ಶ್ರೀ. ಹು.ವಾ.ಶ್ರೀಪ್ರಕಾಶ್ ಅವರು ಕಳೆದ ಹತ್ತು ವರ್ಷಗಳಿಂದ 'ಕವಿಮನ' ಅಂಕಣವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಅವರ ಬದ್ಧತೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಅವರ ಪ್ರಯತ್ನದ ಫಲವಾಗಿ ಅಂಕಣಕ್ಕೆ ಬರುತ್ತಿರುವ ಕವನಗಳು ಹಾಗೂ ಕವನದ ಪ್ರತಿಕ್ರಿಯೆಗಳು ವಾರದಿಂದ ವಾರಕ್ಕೆ ಉತ್ಕೃಷ್ಟಗೊಳ್ಳುತ್ತಿರುವ ಕುರಿತು ಹೆಮ್ಮೆಪಟ್ಟರು.



ಶ್ರಾವಣ ಮಾಸದಲ್ಲಿ ನಡೆದ ಪುಟ್ಟ ಕಥೆಗಳ ಅಭಿಯಾನವು ಅತ್ಯಂತ ಯಶಸ್ವಿಯಾಗಿ ಸಂಪನ್ನವಾಗಿದ್ದು, ಅಭಿಯಾನಕ್ಕೆ ಒಂದು ಸವಿನೆನೆಪಿನ ಸಮಾರೋಪವನ್ನು ನೀಡುವ ಉದ್ದೇಶ ಹೊಂದಿದ್ದು, ಅದಕ್ಕಾಗಿ ಅಕ್ಟೋಬರ್ ಮೂರನೆಯ ವಾರದಲ್ಲಿ, ನಮ್ಮ ವೇದಿಕೆಯ ಸದಸ್ಯರಾದ ಶ್ರೀ.ಎಸ್.ಎನ್.ರಮೇಶ ಅವರಿಗೆ ಸಂಬಂಧಿಸಿದ ಗುಹಾಂತರ ರೆಸಾರ್ಟಿನಲ್ಲಿ ಒಂದು ವಿಶಿಷ್ಟ ಸಮಾರಂಭ ಹಮ್ಮಿಕೊಳ್ಳುವ ಬಗ್ಗೆ ಹಾಗೂ ಎಲ್ಲಾ ಎಪ್ಪತ್ತೆರಡು ಕಥೆಗಾರರ ಆಯ್ದ ಕತೆಗಳ ಸಂಕಲನವನ್ನು ಹೊರತರುವುದರ ಬಗ್ಗೆ ಯೋಚಿಸಲಾಗುತ್ತಿದೆ. ಈ ಕುರಿತ ಹೆಚ್ಚಿನ ವಿವರಗಳನ್ನು ಸದ್ಯದಲ್ಲಿಯೇ ವೇದಿಕೆಯಲ್ಲಿ ಹಂಚಿಕೊಳ್ಳಲಾಗುವುದು ಎಂದು ಶ್ರೀ ರವೀಂದ್ರ ಅವರು ತಿಳಿಸಿದರು.

ನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ನೋಂದಾಯಿಸಿದ್ದ ವೇದಿಕೆಯ ಸದಸ್ಯರಿಂದ ಲೇಖನಗಳ ವಾಚನವು ಆರಂಭವಾಯಿತು. ಹತ್ತೊಂಬತ್ತು ಸದಸ್ಯರು ನೋಂದಾಯಿಸಿದ್ದು, ಹದಿನೆಂಟು ಲೇಖಕರು ತಮ್ಮ ಪ್ರಸ್ತುತಿಗಳನ್ನು ವಾಚಿಸಿದರು.

ಎಲ್ಲಾ ಬರಹಗಳ ಪ್ರಸ್ತುತಿಯು ಮುಗಿದ ನಂತರ ದಾಸೋಹದ ಅಧ್ಯಕ್ಷರಾದ ಶ್ರೀ. ಹು.ವಾ.ಶ್ರೀಪ್ರಕಾಶ್ ಅವರು ಪ್ರಸ್ತುತಿಗಳ ಕುರಿತು ತಮ್ಮ ಅಧ್ಯಕ್ಷೀಯ ಅನಿಸಿಕೆಗಳನ್ನು ದಾಖಲಿಸಿದರು. ಸ್ವತಃ ಸಾಹಿತ್ಯದ ಅತ್ಯುತ್ತಮ ಅಭಿರುಚಿ ಹೊಂದಿರುವ ಇವರು

ಎಲ್ಲ ಪ್ರಸ್ತುತಿಗಳನ್ನೂ ಸಮರ್ಪಕವಾಗಿ ವಿಶ್ಲೇಷಿಸಿ, ಅವುಗಳ ಸಾರವನ್ನು ಎತ್ತಿ ಹಿಡಿದು ಪ್ರಸ್ತುತಿಕಾರರ ಹಾಗೂ ಸಭೆಯ ಎಲ್ಲರ ಮನಗೆದ್ದರು.

ಕೊನೆಯಲ್ಲಿ ಶ್ರೀ.ಕೆ.ಎನ್.ಮಹಾಬಲ ಅವರಿಂದ ವಂದನಾರ್ಪಣೆಯೊಂದಿಗೆ ಸೆಪ್ಟೆಂಬರ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಮುಕ್ತಾಯವಾಯಿತು.

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ ಕೆ.ಎನ್. ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀ ಗುರುರಾಜ ಶಾಸ್ತ್ರಿ
ವಿಡಿಯೋ ಮುದ್ರಣ : ಶ್ರೀ ಗುರುಪ್ರಸಾದ್ ಹಾಲ್ಕುರಿಕೆ
ಪಿಡಿಎಫ್ ಸಂಚಿಕೆ ವಿನ್ಯಾಸ: ಶ್ರೀ ಶೃಂಗೇಶ್ವರ ಶರ್ಮ

ಈ ದಾಸೋಹದ ಪೂರ್ಣ ಕಾರ್ಯಕ್ರಮವು ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಟ್ಯೂಬ್‌ನಲ್ಲಿ ಲಭ್ಯವಿದೆ.

***

ತಿಂಗಳ ಬೆಳಕು - 7

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

"ಶ್ರಾವಣ ಪುಟ್ಟ ಕತೆಗಳ ಅಭಿಯಾನ"

ಮಂಥನ



ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

ಕ್ರೋಧಿ ನಾಮ ಸಂವತ್ಸರದ ಶ್ರಾವಣ ಮಾಸದಲ್ಲಿ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯು 05.08.2024ರಿಂದ 02.09.2024ರವರೆಗೆ ಏರ್ಪಡಿಸಿದ್ದ 'ಶ್ರಾವಣ ಪುಟ್ಟ ಕತೆಗಳ ಅಭಿಯಾನ'ದಲ್ಲಿ ವೇದಿಕೆಯ 72 ಸದಸ್ಯರು ಪಾಲ್ಗೊಂಡು ಒಟ್ಟು 1070 ಪುಟ್ಟ ಕತೆಗಳನ್ನು ರಚಿಸುವುದರ ಮೂಲಕ ಕನ್ನಡ ಕಥಾಲೋಕದಲ್ಲಿ ಒಂದು ದಾಖಲೆಯನ್ನೇ ನಿರ್ಮಿಸಿದರು. ಈ ಪೈಕಿ 25 ಕತೆಗಾರರು ಎಲ್ಲ 29 ದಿನಗಳೂ ದಿನಕ್ಕೊಂದರಂತೆ ಒಟ್ಟು 725 ಕತೆಗಳನ್ನು ಬರೆದಿದ್ದು ಮಹತ್ವದ ಸಂಗತಿ.

ಅಭಿಯಾನದಲ್ಲಿ ಮೂಡಿಬಂದ ವಿಭಿನ್ನ ಬಗೆಯ ಆಯ್ದ ಪುಟ್ಟ ಕತೆಗಳನ್ನು ಅವಲೋಕಿಸುವ 'ಶ್ರಾವಣ ಪುಟ್ಟ ಕತೆಗಳ ಅಭಿಯಾನದ ಕಥಾ ಮಂಥನ' ಕಾರ್ಯಕ್ರಮವು 'ತಿಂಗಳ ಬೆಳಕು' ವೇದಿಕೆಯಲ್ಲಿ ದಿನಾಂಕ 29.09.2024ರಂದು ಸಂಜೆ 5.30ಕ್ಕೆ ಅಂತರ್ಜಾಲ ಮುಖೇನ ನಡೆಯಿತು.

'ತಿಂಗಳ ಬೆಳಕು' ಕಾರ್ಯಕ್ರಮದ ಸಂಚಾಲಕರಾದ ಶ್ರೀ ರವಿ ಕುಸುಬಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿ, ಅಭಿಯಾನದಲ್ಲಿ ಪ್ರಸ್ತುತಪಡಿಸಲಾದ ವಿವಿಧ ಪುಟ್ಟ ಕತೆಗಳ ಅವಲೋಕನ ಮಾಡಲಿರುವ ಶ್ರೀ ಕೆ.ಎನ್.ಮಹಾಬಲರವರನ್ನೂ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿರುವ ಶ್ರೀಮತಿ ಎಲ್.ಗಿರಿಜಾ ರಾಜ್ ರವರನ್ನೂ ಪರಿಚಯಿಸಿ ಎಲ್ಲರನ್ನೂ ಸ್ವಾಗತಿಸಿದರು.

ಶ್ರೀ ಕೆ.ಎನ್. ಮಹಾಬಲ ಅವರು ಮಾತನಾಡಿ, ಜಗತ್ತಿನಾದ್ಯಂತ ವಿವಿಧ ಭಾಷೆಗಳಲ್ಲಿ ಹಾಗೂ ಕನ್ನಡದಲ್ಲಿ ಸಣ್ಣ ಕತೆಗಳ ಉಗಮ ಮತ್ತು ವಿಸ್ತಾರದ ಬಗ್ಗೆ ವಿವರಿಸಿದರಲ್ಲದೆ, ಶ್ರಾವಣ ಪುಟ್ಟ ಕಥಾ ಅಭಿಯಾನದಲ್ಲಿ ಪ್ರಸ್ತುತವಾದ ವಿವಿಧ ಕತೆಗಳ ಗುಣಾತ್ಮಕ ಅಂಶಗಳನ್ನು ವಿಶ್ಲೇಷಿಸಿ ಅವಲೋಕಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಎಲ್.ಗಿರಿಜಾರಾಜ್ ಅವರು ಮಾತನಾಡಿ ಸಣ್ಣ ಕತೆಗಳ ವಿವಿಧ ಆಯಾಮಗಳ ಬಗ್ಗೆ ವಿವರಿಸಿ, ಅಭಿಯಾನದಲ್ಲಿ ಮೂಡಿಬಂದ ಕೆಲವು ಆಯ್ದ ಕತೆಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ದಾಖಲಿಸಿದರು.

ಅಭಿಯಾನದಲ್ಲಿ ಪಾಲ್ಗೊಂಡ ವೇದಿಕೆಯ ಕೆಲವು ಸದಸ್ಯರು, ಅಭಿಯಾನದ ಅವಧಿಯಲ್ಲಿ ತಮ್ಮ ಕತೆಗಳು ರೂಪುಗೊಂಡ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಕೊನೆಯಲ್ಲಿ ಶ್ರೀರಂಗರಾಜನ್ ಎಲ್ಲರಿಗೂ ವಂದಿಸಿದರು.

'ಮಂಥನ' ದಲ್ಲಿ ಶ್ರೀ ಕೆ.ಎನ್. ಮಹಾಬಲರ ಅವಲೋಕನ ಹಾಗೂ ಶ್ರೀಮತಿ ಗಿರಿಜಾರಾಜ್ ಅವರ ಅಧ್ಯಕ್ಷೀಯ ಅನಿಸಿಕೆಗಳ ಪೂರ್ಣ ಪಾಠವನ್ನು ಲೇಖನ ರೂಪದಲ್ಲಿ ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಅದಲ್ಲದೆ, ಇಡೀ ಕಾರ್ಯಕ್ರಮವನ್ನು ನಮ್ಮ ವೇದಿಕೆಯ ಯೂಟ್ಯೂಬ್ ನಲ್ಲಿಯೂ ವೀಕ್ಷಿಸಬಹುದು.

***

ತಿಂಗಳ ಬೆಳಕು - 7



ಕ್ರೋಧಿ ಸಂವತ್ಸರದ ಪುಟ್ಟಕತೆಗಳ ಶ್ರಾವಣ ಅಭಿಯಾನ

ಪುಟ್ಟ ಕತೆಗಳ ಅವಲೋಕನ

– ಮಹಾಬಲ ಕೆ.ಎನ್.

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಆಶ್ರಯದಲ್ಲಿ 'ಪುಟ್ಟ ಕತೆಗಳ ಅಭಿಯಾನ'ವು ಕ್ರೋಧಿ ಸಂವತ್ಸರದ ಶ್ರಾವಣ ಮಾಸದಾದ್ಯಂತ ೨೯ ದಿನಗಳ ಕಾಲ ವಿಜೃಭಣೆಯಿಂದ ನೆರವೇರಿ ಯಶಸ್ವಿಯಾಯಿತು.

ಒಟ್ಟು ೭೨ ಕಥೆಗಾರರು ೧೦೭೦ ಕತೆಗಳನ್ನು ಸೃಜಿಸಿ ವೇದಿಕೆಯಲ್ಲಿ ದಾಖಲಿಸಿದರು. ಅವರಲ್ಲಿ ೨೯ ದಿನಗಳೂ ಕತೆಗಳನ್ನು ಬರೆದ ಸಾಹಸಿದಳ ಸಂಖ್ಯೆ ೨೫. ಕೆಲವರು ೨೫ ಕತೆಗಳ ಗಡಿ ತಲುಪಿದರು. ಹತ್ತಕ್ಕಿಂತ ಕಡಿಮೆ ಕತೆ ಬರೆದವರೂ ಇದ್ದರು. ನಮ್ಮ ವೇದಿಕೆಯ ಕತೆಗಾರರ ಇಂಥ ಸಾಧನೆ ಖಂಡಿತಾ ಅನ್ಯತ್ರ ದುರ್ಲಭ ಎಂಬುದು ನಿಸ್ಸಂಶಯ.

ಸಣ್ಣ ಕತೆಗಳು ಯೂರೋಪಿಯನ್ ಸಾಹಿತ್ಯದ ಪ್ರೇರಣೆಯಿಂದ ಕನ್ನಡಕ್ಕೆ ದಕ್ಕಿದವೆಂದು ಅಭಿಪ್ರಾಯ ವ್ಯಕ್ತಪಡಿಸುವ ವಿದ್ವಾಂಸರಿದ್ದಾರೆ. ಟಾಲ್ಸ್ ಟಾಯ್, ಓ ಹೆನ್ರಿ, ಮೊಪಾಸಾರಂಥವರ ಹಲವಾದರೂ ಕತೆಗಳನ್ನು ಓದದವರುಂಟೆ?

ನಮ್ಮ ಹಳಗನ್ನಡ ಸಾಹಿತ್ಯದಲ್ಲೂ ಕತೆಯ ಶೈಲಿಗೆ ಒಲಿದ ವಡ್ಡಾರಾಧನೆ, ಧರ್ಮಾಮೃತಸಾರ ಮುಂತಾದ ಉದಾಹರಣೆಗಳಿವೆ.

ಹಿಂದಿಯಲ್ಲಿ ಪ್ರೇಮ್ ಚಂದ್, ಬಂಗಾಳಿಯಲ್ಲಿ ಟಾಗೋರ್ ಮುಂತಾದ ಭಾರತೀಯ ಸಾಹಿತಿಗಳೂ ತಮ್ಮ ಕಥಾಕೌಶಲ್ಯದಿಂದ ಸಣ್ಣಕತೆಗಳ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ನಿದರ್ಶನಗಳಿವೆ.

ಕನ್ನಡದ ಸಂದರ್ಭದಲ್ಲಂತೂ ಸಣ್ಣಕತೆಗಳ ರಚನೆಯಲ್ಲಿ ಸಿದ್ಧಹಸ್ತರಾದ ಸಾಹಿತಿಗಳ ಗಡಣವೇ ನಮ್ಮ ಮುಂದಿದೆ. ಮಾಸ್ತಿ, ನಿರಂಜನ, ವೈದೇಹಿ, ಸದಾಶಿವ, ಬೆಸಗರಹಳ್ಳಿ, ರಾಮಣ್ಣ, ಬಾಗಲೋಡಿ ದೇವರಾಯ, ಅಶ್ವತ್ಥ, ಆನಂದ(ಅಜ್ಜಂಪುರ ಸೀತಾರಾಂ) ಹೀಗೆ ಹಲವಾರು ಕತೆಗಾರರು.

ಆರಂಭದಲ್ಲಿ ಸಣ್ಣಕತೆಗಳೆಂದರೆ ಕಾದಂಬರಿ ಬರೆಯಲಾರದವರು ಆಶ್ರಯಿಸುವ ಮಾರ್ಗ ಎಂಬ ಕುಹಕವಿತ್ತು. ಆದರೆ ಅಂಥ ಟೀಕೆಗಳನ್ನು ಮೆಟ್ಟಿ ನಿಂತು ಸಣ್ಣಕತೆ ಇಂದು ಒಂದು ಪ್ರಬಲ ಸಾಹಿತ್ಯ ಪ್ರಕಾರವಾಗಿ ಬೆಳಗುತ್ತಿದೆ. ಮಯೂರ, ತುಷಾರದಂಥ ಪತ್ರಿಕೆಗಳು ಸಣ್ಣಕತೆಗಳನ್ನು ಪ್ರಧಾನವಾಗಿ ಪ್ರಕಟಿಸುತ್ತಿವೆ. ಜತೆಗೆ ಸುರಹೊನ್ನೆ, ಅವಧಿ ಮುಂತಾದ ಬ್ಲಾಗುಗಳೂ ಉದಯೋನ್ಮುಖರ ಕತೆಗಳ ಪ್ರಕಟಣೆಗೆ ಆದ್ಯತೆ ನೀಡುತ್ತಿವೆ.

ಈ ಅಭಿಯಾನದ ಕತೆಗಳ ಅವಲೋಕನಕ್ಕೆ ಮರಳುವುದಾದರೆ ಇಲ್ಲಿ ಕಂಡುಬಂದಿರುವ ವಸ್ತು ವೈವಿಧ್ಯ ಬೆರಗುಗೊಳಿವಂಥದ್ದು. ನಿತ್ಯಜೀವನದಲ್ಲಿ ತಾವು ಕಂಡ ಘಟನೆಗಳು, ಕೇಳಿದ ಪ್ರಸಂಗಗಳು ಕತೆಯ ರೂಪ ಪಡೆದು ನಿಂತಿವೆ. ಅಂತರ್ಜಾಲದಲ್ಲಿ ವರದಿಯಾದ ಕೆಲವು ಸ್ವಾರಸ್ಯಕರ ಹಾಗೂ ಚಿಂತನೆಗೆ ಹಚ್ಚುವ ವಿದ್ಯಮಾನಗಳೂ ಇಲ್ಲಿ ಕತೆಗಳಾಗಿ ಅವತಾರವೆತ್ತಿವೆ. ಕೆಲವು ಪುನರುಚ್ಚರಿತ ಹಾಸ್ಯ ಪ್ರಸಂಗಗಳನ್ನೂ ಕತೆಯನ್ನಾಗಿಸುವ ಪ್ರಯತ್ನವಿದೆ. ಪೌರಾಣಿಕ ಹಾಗೂ ಚಾರಿತ್ರಿಕ ಪ್ರಸಂಗಾಧಾರಿತ ಕತೆಗಳು ಬೇಡವೆಂದು ಮೊದಲೇ ವಿಧಿಸಿದ್ದರಿಂದ ಅವುಗಳ ಹಾಜರಿ ಇಲ್ಲ.

ಸಂಪೂರ್ಣ ಕಲ್ಪನೆಯ ವಿಸ್ತಾರದಲ್ಲೂ ರಚಿಸಲಾದ ಕತೆಗಳಿವೆ. ಮಕ್ಕಳ ಕತೆಗಳು, ಪತ್ತೇದಾರಿ ಕತೆಗಳು, ವೈಜ್ಞಾನಿಕ ಕತೆಗಳು, ಅಸಂಗತ ಕತೆಗಳು ಈ ಅಭಿಯಾನದಲ್ಲಿ ಕಂಡುಬಂದಿಲ್ಲ. ಮುಂದಿನ ದಿನಗಳಲ್ಲಿ ನಮ್ಮ ಕತೆಗಾರರು ಆ ವಲಯದತ್ತಲೂ ಗಮನಹರಿಸಲು ಅನಂತ ಅವಕಾಶಗಳಿವೆ.

ಇಲ್ಲಿನ ಬಹುಪಾಲು ಕತೆಗಳು ಘಟನೆಗಳು ನಡೆದ ಕ್ರಮಾನುಗತ ಶೈಲಿಯನ್ನು ಹೊಂದಿವೆ. ಫ್ಲಾಶ್ ಬ್ಯಾಕ್ ತಂತ್ರವನ್ನು ಬಳಸಿದ್ದಲ್ಲಿ ಕತೆಯಲ್ಲಿ ಇನ್ನೂ ಹೆಚ್ಚಿನ ಕುತೂಹಲ ಮೂಡಿಸಬಹುದಿತ್ತು.

ಬಹುತೇಕ ಕತೆಗಾರರು ನಿರೂಪಣೆಗೆ ಪ್ರಬಂಧ ಶೈಲಿಯನ್ನು ಬಳಸಿದ್ದಾರೆ. ಸಂಭಾಷಣೆ ಹಾಗೂ ನಿರೂಪಣೆ ಎರಡೂ ಅಂಶಗಳ ಹದಮಿಶ್ರಣದ ಶೈಲಿಯನ್ನು ಬಳಸಿದ್ದಿದ್ದರೆ ಓದುಗರ ಗಮನ ಸೆಳೆಯಲು ಸುಲಭವಾಗುತ್ತಿತ್ತು.

ಕತೆಯಲ್ಲಿ ರೋಚಕ ತಿರುವು ಹಾಗೂ ಅನಿರೀಕ್ಷಿತ ಅಂತ್ಯ ನೀಡುವ ತಂತ್ರ ಪರಿಣಾಮಕಾರಿಯಾಗಿರುತ್ತದೆ. ಅಂತಹ ತಿರುವು ಹಾಗೂ ಅಂತ್ಯ ನೀಡಲು ಹಲವರು ಶ್ರಮಿಸಿದ್ದಾರೆ. ಬಿ.ಎಸ್.ರವೀದ್ರರ 'ಅಂತರಾ' ಕಥೆಯಲ್ಲಿ ಇಂಥ ತಂತ್ರವಿದ್ದು ಗಮನ ಸೆಳೆಯುತ್ತದೆ. ಹಾಗೆಯೇ ಗುರುರಾಜ ಶಾಸ್ತ್ರಿಯವರ ಕತೆಯಲ್ಲಿ ಇಂಥ ಅಂತ್ಯವಿದೆ.

ಇಂದಿನ ಸಮಾಜದಲ್ಲಿ ಮಕ್ಕಳು ಉದ್ಯೋಗ ಕಾರಣದಿಂದ ವಿದೇಶದಲ್ಲಿ ನೆಲೆಸುವುದು, ಅದರಿಂದ ಪಾಲಕರಿಗೆ ಉಂಟಾಗುವ ಅನಾಥ ಪ್ರಜ್ಞೆ, ದುಗುಡಗಳು ಹಲವಾರು ಕತೆಗಳ ಕೇಂದ್ರ ಆಶಯವಾಗಿದೆ. ಅಂದಿನ ಮಧ್ಯಮವರ್ಗದ ಕುಟುಂಬಗಳು ಇಂದು ಆರ್ಥಿಕವಾಗಿ ಸದೃಢಗೊಂಡಿರುವ ಪಲ್ಲಟದಿಂದಾಗಿ ಇಂಥ ಪರಿಸ್ಥಿತಿ ಅನಿವಾರ್ಯವಾಗಿದೆ.

ಕುಟುಂಬ ವಲಯದಲ್ಲಿರುವ ಸಂಬಂಧಗಳ ಬಿರುಕು, ಸಂವಹನದ ಕೊರತೆ ಮುಂತಾದ ವಿಷಯಗಳೂ ಹಲವು ಕತೆಗಳಲ್ಲಿ ಮನಮುಟ್ಟುವಂತೆ ಚಿತ್ರಿತವಾಗಿವೆ.

ಪದಮಿತಿಯ ನಿರ್ಬಂಧದಿಂದಾಗಿ ಹಲವು ಕತೆಗಳು ಇನ್ನೂ ವಿಸ್ತಾರಗೊಳ್ಳುವ ಅಗತ್ಯವಿದ್ದರೂ ಮೊಟಕುಗೊಳಿಸಬೇಕಾದ ಅನಿವಾರ್ಯತೆಯಿಂದಾಗಿ ಸೊರಗಿವೆ. ಅಂಥ ಕತೆಗಾರರು ಆ ಕತೆಗಳನ್ನು ಪುನರಾವಲೋಕಿಸಿ ವಿಸ್ತರಿಸಿ ಬರೆಯಲು ಈಗಲೂ ಅವಕಾಶವಿದೆ. ನಮ್ಮ ಶೃಂಗೇಶ್ವರ ಶರ್ಮ ಅವರು ಗಣಪತಿಯ ಬಾಯಿಯಲ್ಲಿ ಹೇಳಿಸಿದಂತೆ "ಪುಟ್ಟ ಕತೆ ಬರೆಯುವುದು ಕಷ್ಟ: ಮಹಾಭಾರತ ಬರೆಯುವುದು ಸುಲಭ."

ಬಹುಪಾಲು ಕತೆಗಾರರು ಹಳೇಮೈಸೂರಿನ ಭಾಷಾಶೈಲಿಯನ್ನೇ ಬಳಸಿದ್ದಾರೆ. ಆದರೆ ಧೀರೇಂದ್ರ, ಸೀತಾರಾಮ ಕಟ್ಟಿ, ನೀಲಕಂಠ ಕುಲಕರ್ಣಿ, ಶ್ರುತಿ ಕಟ್ಟಿ ಅಂತವರು ಉತ್ತರ ಕರ್ನಾಟಕದ ಶೈಲಿಯನ್ನು ಸಮರ್ಥವಾಗಿ ಬಳಸಿದ್ದಾರೆ.

ಅಭಿಯಾನದಲ್ಲಿ ಭಾಗವಹಿಸಿದ ಎಲ್ಲ ಕತೆಗಾರರಿಗೆ ಅಭಿನಂದನೆಗಳು. ಮತ್ತಷ್ಟು ಹೊಸ ವಸ್ತುವಿನ, ವಿಭಿನ್ನ ಶೈಲಿಯ ಕತೆಗಳನ್ನು ಬರೆಯಿರಿ, ಬರೆಯುತ್ತಲೇ ಇರಿ ಎಂದು ಸಂಚಾಲಕ ಸಮಿತಿ ಹಾರೈಸುತ್ತದೆ.

***

ತಿಂಗಳ ಬೆಳಕು - 7



ಕ್ರೋಧಿ ಸಂವತ್ಸರದ ಪುಟ್ಟಕತೆಗಳ ಶ್ರಾವಣ ಅಭಿಯಾನ

ತಿಂಗಳ ಬೆಳಕು ಕಾರ್ಯಕ್ರಮ "ಮಂಥನ"

ಅಧ್ಯಕ್ಷರ ಅನಿಸಿಕೆಗಳು

– ಗಿರಿಜಾ ರಾಜ್ ಎಲ್.

ವಿನಾಯಕಂ ಹೇಮವರ್ಣಂ
ಪಾಶಾಂಕುಶ ಧರಂ ವಿಭುಂ
ಧ್ಯಾಯೇತ್ ಗಜಾನನಂ ದೇವಂ
ಬಾಲಚಂದ್ರ ಸಮಪ್ರಭಂ

ಎಲ್ಲರಿಗೂ ನಮಸ್ಕಾರ. ಇಂದಿನ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ ಪುಟ್ಟ ಕತೆಗಳ ಶ್ರಾವಣ ಅಭಿಯಾನದ ಅವಲೋಕನ ನಡೆಸಿಕೊಟ್ಟ ಶ್ರೀ ಮಹಾಬಲ ಅವರೇ, ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಬೆಂ.ಶ್ರೀ. ರವೀಂದ್ರ ಅವರೇ, ತಿಂಗಳ ಬೆಳಕು ಕಾರ್ಯಕ್ರಮದ ಸಂಚಾಲಕರಾದ ಶ್ರೀ ರವಿ ಕುಸಬಿ ಅವರೇ, ಎಲ್ಲ ಸಂಚಾಲಕ ವರ್ಗದವರೇ, ಪುಟ್ಟಕತೆಗಳ ಬಗ್ಗೆ ವೈವಿಧ್ಯಮಯವಾದ ಪ್ರಸ್ತುತಿ ಮಂಡಿಸಿದ ಕತೆಗಾರರೇ, ಇಲ್ಲಿರುವ ನನ್ನ ಎಲ್ಲ ಹಿರಿಕಿರಿಯ ಸ್ನೇಹಿತರೇ,

ಜೀವನದ ಕೊಳೆ ಕಲ್ಮಶಗಳನ್ನು ತೊಳೆಯಬಲ್ಲ ತೀರ್ಥವೆಂದರೆ ಕಾವ್ಯತೀರ್ಥ ಎಂದು ಡಿ.ವಿ.ಜಿ.ಯವರು ಒಂದೆಡೆ ಹೇಳಿದ್ದಾರೆ. ಒಂದು ತುಂಡು ಕಾಗದದ ಮೇಲಿರುವ ಒಂದು ಶ್ಲೋಕ, ಕೆಲವೇ ಪುಟಗಳ ಒಂದು ಒಳ್ಳೆಯ ಕತೆ, ಒಂದು ಕಾದಂಬರಿ ಇವುಗಳ ಮೂಲಕ ವ್ಯಕ್ತಿಯೊಬ್ಬನನ್ನು ದುರ್ಮಾರ್ಗದಿಂದ ಸನ್ಮಾರ್ಗಕ್ಕೆ ಒಯ್ಯುವ ಚಮತ್ಕಾರ ಮಾಡುವ ಶಕ್ತಿ ಸಾಹಿತ್ಯದ್ದು, ಸಂವೇದನಾ ಶೀಲ ಸ್ಪಂದಿಸುವ ಹೃದಯವಿದ್ದರೆ....!

ಸಣ್ಣಕತೆಗಳ ಲೋಕ ಇಂದು ಎಂದಿಲ್ಲದಷ್ಟು ವಿಸ್ತಾರವಾಗಿ ಬೆಳೆದಿದೆ, ಎಂದಿಲ್ಲದಷ್ಟು ಹೊಸ ಪ್ರಯೋಗಗಳನ್ನು ಕಂಡಿದೆ. ದಿನದಿಂದ ದಿನಕ್ಕೆ ಬರೆಯುವವರ ಸಂಖ್ಯೆ ಹೆಚ್ಚಾಗುತ್ತಿದೆ, ಪ್ರಕಟವಾಗುತ್ತಿರುವ ಹೇರಳವಾದ ಗ್ರಂಥ ಸಿರಿಗೆ, ಓದುಗರನ್ನು ಹುಟ್ಟಿಸುವುದೇ ಕಷ್ಟವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಹಲವಾರು ಮಾಧ್ಯಮಗಳ ಆಕರ್ಷಣೆಗಳಲ್ಲಿ ತಮ್ಮದೇ ಆದ ಬದುಕಿನ ವ್ಯವಹಾರಗಳಲ್ಲಿ ಹಂಚಿ ಹೋಗಿರುವ ಓದುಗರಿಗೆ ಮಾತೃಭಾಷೆಯ ಸವಿ ಹಿಡಿಯುವಂತೆ ಇಂದು ಸಾಹಿತ್ಯ ಸೃಷ್ಟಿಸಬೇಕಾಗಿದೆ, ಹಾಗೆಂದು ಗುಣಮಟ್ಟ ಎಂದಿಗೂ ಬಿಡತಕ್ಕದ್ದಲ್ಲ. ಆದರೆ ಮಾಧ್ಯಮಗಳ ಹುಸಿ ಆಕರ್ಷಣೆಗಳಿಗೆ ಬೇಸರ ಹೊಂದಿ, ಬೆನ್ನುಹಾಕಿ ಓದಿನ ಕಡೆ ತಿರುಗುತ್ತಿರುವ ವಾಚಕರೂ ಇದ್ದಾರೆ. ಮೊದಲಿನಿಂದ ಪುಸ್ತಕದಲ್ಲಿ ಸಿಗುವ ಆನಂದ ಕಂಡುಕೊಂಡವರು ಮಾತ್ರ ಓದುವುದನ್ನು ಎಂದೂ ಬಿಡುವುದಿಲ್ಲ.

ಸಾಹಿತ್ಯ ಪ್ರಕಾರಗಳಲ್ಲೆಲ್ಲಾ, ಕತೆ ಅತ್ಯಂತ ಜನಪ್ರಿಯ. ಅದರ ಮುಖ್ಯ ಉದ್ದೇಶವೇ ಮನರಂಜನೆ. ಇಡೀ ತಿಂಗಳು **'ಪುಟ್ಟ ಕತೆಗಳ ಶ್ರಾವಣ ಅಭಿಯಾನ'** ಯಶಸ್ವಿಯಾದ ಅಭೂತಪೂರ್ವ ಬಗೆ, ಆ ಯೋಜನೆಯನ್ನು ಹುಟ್ಟು ಹಾಕಿದವರಿಗೇ ನಿರೀಕ್ಷಿಸಿರದಷ್ಟು ನಿಬ್ಬೆರಗು ಕವಿಸಿತು. ಸಮನ್ವಯ ಸಮಿತಿ ವೇದಿಕೆಯ ತುಂಬ ಪ್ರತಿದಿನ ಶ್ರಾವಣ ಪುಟ್ಟ ಕತೆಗಳ ಧಾರೆಯ ಮಹಾ ಸಂಭ್ರಮ.ಆ ಸಂಭ್ರಮದ ಮುಂದುವರೆದ ಫಲವೇ ಈಗಿಲ್ಲಿ ನಡೆಯುತ್ತಿರುವ **'ತಿಂಗಳು ಬೆಳಕು'** ಕಾರ್ಯಕ್ರಮಕ್ಕೆ ನಾಂದಿಯಾಗಿದೆ. ಎಂದೂ ಕತೆ ಬರೆಯದ ಕೈಗಳಿಂದ ಕತೆ ಬರೆಯಿಸಿದ ಶ್ರೇಯಸ್ಸು ಸಮನ್ವಯ ಸಮಿತಿ, ಕನ್ನಡವೇ ಸತ್ಯ ವೇದಿಕೆಯದು. ಅದಕ್ಕೆ ಸ್ಪಂದಿಸಿದ ಸಮನ್ವಯ ಸಮಿತಿಯಲ್ಲಿರುವ ಸೋಲರಿಯದ ಗೆಲುವಿನ ಬೆನ್ನಟ್ಟುವ ಲವಲವಿಕೆಯ ಮನಸುಗಳು, ಅವುಗಳ ತುಂಬ ನೆನಸು ಮಾಡುವ ನೂರಾರು ಕನಸುಗಳು!

ಪುಟಗಟ್ಟಲೆ ಬೇಡ, ಪುಟ್ಟಕತೆ ಬರೆಯಿರಿ ಸಾಕು ಅಂದ್ರು ಹೆಡ್ಮಾಸ್ಟ್ರು! ಸಂಚಾಲಕರೆಲ್ಲ ಸೇರಿ ಪದಮಿತಿಯನ್ನೂ ನಿರ್ಧರಿಸಿದಾಗ ಅದು ಒಂದು ರೀತಿ ಸವಾಲೇ ಆಯಿತು. ಆದರೆ ನಾಗಾಲೋಟದಲ್ಲಿ ಕಲ್ಪನಾ ಹಯದ ಮೇಲೆ ಓಡಿದ, ಕೈ ಬೆರಳುಗಳನ್ನು ನಿಯಂತ್ರಿಸಲಾಗದೆ ಧಾರಾಳವಾಗಿ ಪೇರಿಸಿದ ಪದಗಳನ್ನು ಇಳಿಸಲು ಕೆಲವರು, ನಾನೂ ಸೇರಿದಂತೆ, ಸಾಕಷ್ಟು ಸರ್ಕಸ್ಸು ಮಾಡಬೇಕಾಯಿತು. ಇದರ ಬಗ್ಗೆ ಮಾತಾಡುತ್ತಿದ್ದ ಸಂದರ್ಭದಲ್ಲೇ, ಸ್ನೇಹಿತರಾದ ರಘುರಾಂ ಅವರು ಒಂದು ಮಾತು ಹೇಳಿದ್ದರು– “ಎಂಥ ವಿಚಿತ್ರ ನೋಡಿ, ಬರೆದವರಿಗೆ ಅಳಿಸುವುದು ಕಷ್ಟ!" ನಿಜವಲ್ಲವೇ?

ಬರೆಯದ ಕರಗಳು ಲೇಖನಿ ಹಿಡಿದು, ತೋಚಿದ ರೀತಿಯಲ್ಲಿ ಬರೆದು ಸಡಗರ ಪಟ್ಟರೆ, ಕುದುರಿದ ಕೈಗಳಿಂದ ಮನತಣಿಸುವ ಸೊಗಸಾದ ಕತೆಗಳು ಹಾಳೆಗಿಳಿದವು. ಹೊಸ ಯೋಜನೆ ಹುಟ್ಟು ಹಾಕಿ, ಎಲ್ಲೋ ಆಲಸಿಯಾಗಿ ಅಲೆಯುತ್ತಿದ್ದ, ಮನಸನ್ನು ಹಿಡಿದು ಕಟ್ಟಿ ಒಂದೆಡೆ ಕೂಡಿಸಿ, ಬರೆಯುವಂತೆ ಮಾಡಿದ ಅಧ್ಯಕ್ಷರಿಗೆ ಮತ್ತು ಸಂಚಾಲಕರಿಗೆ ಧನ್ಯವಾದಗಳು.

ರವೀಂದ್ರರ ಮತ್ತು ರವಿ ಕುಸಬಿಯವರ ಒತ್ತಾಸೆಗೆ ಮಣಿದು ಈ ಸ್ಥಾನದಲ್ಲಿ ಕುಳಿತಿದ್ದೇನೆ ಅಷ್ಟೇ! ನನಗಿಂತ ಪ್ರಬುದ್ಧ ಹಿರಿಯ ಮನಸುಗಳು ಇಲ್ಲಿವೆ. ನನ್ನ ಈವರೆಗಿನ ಕಥಾಲೋಕದ ಪಯಣದಲ್ಲಿ, ಅಲ್ಪಮತಿಗೆ ನಿಲುಕಿರುವ ಕೆಲವು ಸಲಹೆ ಸೂಚನೆಗಳನ್ನು ನೀಡಿದರೆ ಅದನ್ನು ಸಕಾರಾತ್ಮಕವಾಗಿ ಭಾವಿಸುವಿರೆಂದು ನಂಬಿದ್ದೇನೆ ಸ್ನೇಹಿತರೇ!

ಕಾದಂಬರಿ ಮತ್ತು ಸಣ್ಣ ಕತೆಗಿರುವ ವ್ಯತ್ಯಾಸ

ಕಾದಂಬರಿಯನ್ನು ಹಲವಾರು ದಿನಗಳ ಅವಧಿಯನ್ನು ತೆಗೆದುಕೊಂಡು ಉದ್ದಕ್ಕೆ ಬರೆದುಕೊಂಡು ಹೋಗಿಬಿಡಬಹುದು. ಆದರೆ ತಿರುಳುಳ್ಳ ಪುಟ್ಟ ಕತೆ ಬರೆಯುವುದು ಕಷ್ಟ ಎಂಬ ಮಾತಿದೆ. ಏಕೆಂದರೆ ಎಳೆ ಎಳೆದಷ್ಟೂ ಹಿಗ್ಗುವ ನಮ್ಯತೆಯ ಗುಣ (Elastic property) ಕಾದಂಬರಿಗಿದೆ. ಆದ್ದರಿಂದಲೇ ಕೆಲವು ಕಾದಂಬರಿಗಳ ಒಳಪುಟಗಳಲ್ಲೆಲ್ಲೋ ಏಕತಾನತೆ, ಅನವಶ್ಯ ಎಳೆದಾಟ ಬೇಸರವನ್ನು ಹುಟ್ಟಿಸುತ್ತದೆ. ಆದರೆ ಸಣ್ಣ ಕತೆ ಹಾಗಲ್ಲ, ಇಷ್ಟು ಪುಟಗಳಲ್ಲಿ ಮುಗಿಯಬೇಕು, ಇಷ್ಟೇ ಪದಗಳಿರಬೇಕು, ಅಲ್ಪ ಅವಧಿಯಲ್ಲಿ ಓದಿ ಮುಗಿಸುವಂಥಾದ್ದು ಆಗಿರಬೇಕು, ಸಾರವೂ ಬೇಕು. ಮುಖ್ಯ ಕತೆಯನ್ನು ಪೋಷಿಸದೇ ಇರುವ ಅನಗತ್ಯ ಪದಗಳನ್ನು ಹಾಕಲೇಬಾರದು. ಒಂದೊಂದು ಪದದ ಅರ್ಥವಂತಿಕೆಯೂ ಮುಖ್ಯವಾಗುತ್ತದೆ. ಪುಟ್ಟ ಕತೆಗಳಲ್ಲಿ ನಡುವೆಯೋ, ಕೊನೆಯಲ್ಲೋ ಒಂದು ತಿರುವು, ಥಟ್ಟನೆ ಮೂಡಿಬಿಡುವ ಬೆಳಕು ಕತೆಯನ್ನು ಗೆಲ್ಲಿಸುತ್ತದೆ. ವಾಚಕ ನಿರೀಕ್ಷಿಸದೇ ಇದ್ದ ಒಂದು ಆಹಾ! ಎನ್ನಿಸುವ ಸಖೇದಾಶ್ಚರ್ಯ ಓದುವವರನ್ನು ಸೆಳೆದುಬಿಡುತ್ತದೆ. ನಮ್ಮ ಪುಟ್ಟ ಕಥಾ ಶ್ರಾವಣ ಅಭಿಯಾನದಲ್ಲಿ ಮೂಡಿಬಂದ ಅಂಥ ಕೆಲವು ಕತೆಗಳನ್ನು ಕೊನೆಯಲ್ಲಿ ಹೆಸರಿಸುತ್ತೇನೆ. ಕಿರಿದರಲ್ಲಿ ಹಿರಿದು ಎನ್ನುವಂತೆ, ಅಲ್ಪ ಪದಗಳ (ಸಂಖ್ಯೆಯನ್ನು ನಿರ್ದೇಶನಕ್ಕಾಗಿ ಈ ಪದ) ನಡುವೆ ಕಲ್ಪವನ್ನು ಅಂದರೆ ಜೀವನದ ಮಹಾ ಸಂದೇಶವನ್ನು, ಸತ್ಯವನ್ನು ಹುದುಗಿಸಿ ಕತೆಗಳನ್ನು ಬರೆಯಲು ಸಾಧ್ಯ!

ಅತ್ಯಂತ ಪುಟ್ಟ ಕತೆ ಎಂದು ಬಣ್ಣಿಸುವ ಎರಡು ವಾಕ್ಯಗಳು ಒಂದು ಅರ್ಥಪೂರ್ಣ ಕತೆಯಾಗಲು ಸಾಧ್ಯವೇ ಇಲ್ಲ! ಆ ವಾಕ್ಯಗಳ ಹಿಂದೆ ಮುಂದೆ ಓದುಗರೇ ಏನೇ ಅಧ್ಯಾಹಾರ ಮಾಡಿಕೊಂಡರೂ, ಎರಡು ಉತ್ಕೃಷ್ಟ ವಾಕ್ಯಗಳನ್ನು ಜೋಡಿಸಿದರೂ ಅದೊಂದು ಪೂರ್ಣಕತೆಯಾಗದು! ಅದನ್ನು ಕತೆ ಎಂದು ಹೇಳುವುದು ಉತ್ಪ್ರೇಕ್ಷೆಯ ಹೇಳಿಕೆ. ಅದು ಹೆಚ್ಚೆಂದರೆ ಎರಡು ಉತ್ತಮ ವಾಕ್ಯಗಳು ಎನಿಸಿಕೊಳ್ಳಬಹುದು. ಒಂದು ಕತೆ ಬಯಸುವ ಎಲ್ಲ ಅಗತ್ಯಗಳನ್ನು ಅದು ಪೂರೈಸುವುದಿಲ್ಲ. ನಾವೀನ್ಯತೆಗಾಗಿ ಕೆಲವರು ಆ ಪ್ರಯೋಗ ಮಾಡಿದರೂ, ಯಶಸ್ವಿಯಾಗದೆ ಬರೀ ಹೇಳಿಕೆಯಾಗಿಯೇ ಉಳಿದಿದೆ.

ಬರೆದದ್ದೆಲ್ಲಾ ಕತೆಯಾಗುವುದಿಲ್ಲ. ಮನದಲ್ಲಿ ಉದಿಸಿದ ಭಾವ ಮಾಗಿ, ಅಕ್ಷರವಾಗಿ, ಪದಕ್ಕೆ ಪದ ಮಥಿಸಿ ಅಲ್ಲಿ ರಸಪೂರ್ಣ ಸಾಹಿತ್ಯ ಗಂಗೆ ಹುಟ್ಟಿ ಲೋಕಲೋಕಗಳನ್ನು ಪಾವನಗೊಳಿಸಬೇಕು.

ನಮ್ಮಿಂದ ಕತೆ ಬರೆಯಲು ಸಾಧ್ಯವೇ? ಎಂದು ಅಂದು ಅಂದುಕೊಳ್ಳುತ್ತಲೇ ಲೇಖನಿಯನ್ನು ಅನಿವಾರ್ಯವಾಗಿ ಕೈಗೆತ್ತಿಕೊಂಡು ಬರೆದಾಗ, ಆ ಮೊದಲ ಪ್ರಯತ್ನದ ಗುಣಮಟ್ಟ ಹೇಗಾದರೂ ಇರಲಿ, ಅದು ಎರಡನೆಯ ವಿಷಯ! ಆಯಾ ವ್ಯಕ್ತಿಯ ಮಟ್ಟಿಗೆ 'ತಾನೊಂದು ಕತೆ ಬರೆದೇಬಿಟ್ಟೆನಲ್ಲ' ಎಂಬ ವಿಸ್ಮಯಭರಿತ ಸಂಭ್ರಮವೇ ಹೆಚ್ಚಾಗಿರುತ್ತದೆ. ಎರಡೋ ಮೂರೋ ಮಾತ್ರ ಆಗುವುದು ಎಂದು ಬರೆಯಲು ಕುಳಿತವರೆಲ್ಲ ಹೆಚ್ಚು ಬರೆದು ವಿಕ್ರಮ ಸ್ಥಾಪಿಸಿದ್ದಾರೆ. ಮೊದಲ ಪ್ರಯತ್ನದ ನಂತರ ಮುಂದಕ್ಕೆ ತಾನೊಬ್ಬ ಒಳ್ಳೆಯ ಕತೆಗಾರನಾಗುತ್ತೇನೆ ಎಂದು ಸಂಕಲ್ಪಿಸಿದರೆ ಸಾಮಾಜಿಕ, ನೈತಿಕ, ಹಾಗೂ ಧಾರ್ಮಿಕವಾಗಿ ಅನೇಕ ಹೊಣೆಗಾರಿಕೆಗಳು ಹೆಗಲೇರುತ್ತವೆ. ಕತೆಗಾರ ದಂತಗೋಪುರದಲ್ಲೆಲ್ಲೋ ಕುಳಿತು ವಿಹರಿಸುತ್ತ, ತನಗಿಷ್ಟ ಬಂದಹಾಗೆ ಅಗ್ಗದ ಪ್ರಣಯ ಕತೆಗಳನ್ನು ಬರೆದು, ತನ್ನ ಕರ್ತವ್ಯ ಮುಗಿಯಿತು ಎನ್ನುವ ಹಾಗಿಲ್ಲ! ಸಾಹಿತ್ಯ ಸಮಾಜದ ಪ್ರತಿಬಿಂಬವೇ ಹೊರತು ಬೇರಲ್ಲ. ಆಯಾ ಸಮಾಜದ ಭಾಗವೇ ಆದ ಕತೆಗಾರನ ಮೇಲೆ ಸಾಮಾಜಿಕ ಋಣವೊಂದಿರುತ್ತದೆ. "ಸಾಹಿತಿಗಳು ಈ ಜಗತ್ತಿನ ಅನಧಿಕೃತ ಶಾಸಕರು" (writers are unacknowledged Legislators of the world). ತಪ್ಪೆಸಗುತ್ತಿರುವ ಸಮಾಜಕ್ಕೆ ಅವನ ಲೇಖನಿ ಖಡ್ಗವೂ ಆಗಬೇಕಾಗುತ್ತದೆ.

ಪರಂಪರೆಯ ಅರಿವು

ಹಳೆಯ ಕಾವ್ಯ, ಪುರಾಣಗಳು, ರಾಮಾಯಣ, ಮಹಾಭಾರತ, ಭಾಗವತ ಮುಂತಾದವುಗಳು ನಮ್ಮ ಸಂಸ್ಕೃತಿಯ ಬೇರುಗಳು. ಅವುಗಳನ್ನು ಓದಿದ ಅನುಭವ, ಅರಿವು ನಮ್ಮ ಬರಹಗಳಿಗೆ ಗಟ್ಟಿತನ ಒದಗಿಸಿ, ಶ್ರೀಮಂತಗೊಳಿಸುತ್ತದೆ. ಅವೆಲ್ಲ ನಮ್ಮ ಮೆದುಳಿನಲ್ಲಿ ಜೀರ್ಣವಾಗಿ, ಭಟ್ಟಿಯಿಳಿಸಿದಂತೆ, ಹೊಸ ರೂಪದಲ್ಲಿ, ಹೊಸ ಹೊಳಹಿನಲ್ಲಿ ಸ್ವೋಪಜ್ಞತೆಯಿಂದ ಹೊರ ಹೊಮ್ಮುತ್ತದೆ. ಹಳೆಯದೆಂದು ನಿರ್ಲಕ್ಷಿಸುವ ಹಾಗಿಲ್ಲ. 'ಹಳೆ ಬೇರು, ಹೊಸ ಚಿಗುರು ಕೂಡಿರಲು ಮರ ಸೊಬಗು' ಎಂಬ ಕಗ್ಗದ ಸಾಲನ್ನು ಇಲ್ಲಿ ನೆನೆದುಕೊಳ್ಳಬಹುದು. ಶರಣರ 'ಹಿಂದಣ ಹೆಜ್ಜೆಯನರಿತಲ್ಲದೆ, ಮುಂದಣ ಹೆಜ್ಜೆಯನಿರಿಸಬಾರದು' ಎಂಬ ಮಾತು ಅರ್ಥಪೂರ್ಣ!

ಚಿಂತನ-ಮಂಥನ-ಮನನ

ಒಂದು ಕತೆ ಗೆಲ್ಲಬೇಕಾದರೆ, ಆ ವಸ್ತುವಿಗೆ ಸಂಬಂಧಿಸಿದ ಚಿಂತನೆ, ಮಂಥನ, ನಡೆದು ಮನನ ಕಾರ್ಯ ನಡೆದಿರಬೇಕು. ಕುವೆಂಪು ಅವರು ತಮ್ಮ ಮನೆಯ ಮುಂಭಾಗದಲ್ಲಿ ಒಂದು ಕುರ್ಚಿಯಲ್ಲಿ ಕುಳಿತು ಗಂಟೆಗಟ್ಟಲೆ ಸುಮ್ಮನೆ ಕಣ್ಣುಮುಚ್ಚಿ ಧ್ಯಾನದಲ್ಲಿ ಇರುವಂತೆ ಕುಳಿತಿರುತ್ತಿದ್ದರಂತೆ. ಆಗ ಪುಟ್ಟ ತೇಜಸ್ವಿ, "ಇದೇನು? ಅಣ್ಣ ನಿದ್ದೆ ಮಾಡುತ್ತಿದ್ದಾರೆಯೇ?" ಎಂದು ಅಂದುಕೊಂಡಿದ್ದರಂತೆ. ದೊಡ್ಡವರಾದ ಮೇಲೆ ಅದು ಸುದೀರ್ಘ ಚಿಂತನೆ ಎಂದು ತಿಳಿದರಂತೆ. ಪೂರ್ಣಚಂದ್ರ ತೇಜಸ್ವಿ ತಮ್ಮ 'ಅಣ್ಣನ ನೆನಪು' ಎಂಬ ಗ್ರಂಥದಲ್ಲಿ ಅದನ್ನು ದಾಖಲಿಸುತ್ತಾರೆ. ಇನ್ನು ಬೇಂದ್ರೆಯವರೋ, ಜೀವನದ ಸಂಕಷ್ಟಗಳನುಂಡುಂಡು, ಮಾಗಿ, ಬೆಂದು ಬೆಂದು ಬೇಂದ್ರೆಯಾದರು! ಅಂಬಿಕಾತನಯದತ್ತರಾದರು!

ಎಷ್ಟೋ ಸಲ, ಬರೆದಿದ್ದನ್ನು ಮತ್ತೆ ಓದಿ ಏನೋ ಹೊಸದು ಹೊಳೆದಾಗ ಮತ್ತೆ ಅದನ್ನು ಸರಿಯಾದ ಕಡೆ ಸೇರಿಸಿ ಅದಕ್ಕೆ ಹೊಸ ಚೈತನ್ಯ, ಅರ್ಥವಂತಿಕೆಗಳನ್ನು ನೀಡಬಹುದು. ಕತೆ ಮತ್ತಷ್ಟು ಉತ್ತಮಗೊಳ್ಳುತ್ತದೆ. ಯಾರದೋ ಅವಸರಕ್ಕೆ ಎರಡು ಮೂರು ದಿನದಲ್ಲಿ ಹತ್ತು ಕತೆಗಳನ್ನು ಬರೆದು ಕೊಡುತ್ತೇನೆ ಎಂದು ಆತುರದಿಂದ ಬರೆದರೆ, ಅದು 'ಸಂತೆ ಹೊತ್ತಿಗೆ ಮೂರು ಮೊಳ ನೇಯ್ದರು' ಎಂಬ ಗಾದೆಯಂತಾಗುತ್ತದೆಯೇ ಹೊರತು ಹತ್ತರಲ್ಲಿ ಒಂದೂ ಮುತ್ತಾಗುವುದಿಲ್ಲ!

ಅಧ್ಯಯನಶೀಲತೆ

ಯಾವುದೇ ಪ್ರಕಾರದ ಬರಹಗಾರನಿಗೆ ಅತ್ಯಂತ ಮುಖ್ಯವಾದುದು ತನಗಿಂತ ಮೊದಲು ಬರೆದ ಮತ್ತು ಸಮಕಾಲೀನರ ಬರಹಗಳನ್ನು ಓದಬೇಕು. ಓದಿದಷ್ಟು ಪರಿಪಕ್ವತೆ, ಓದಿದಷ್ಟೂ ಮೆದುಳಿನ ಜ್ಞಾನದ ಹಸಿವು ತೀರುತ್ತದೆ. ತೀರಿದಷ್ಟೂ ಹೊಸ ಕಲ್ಪನೆಗಳ ಲೋಕವೇ ತೆರೆದುಕೊಳ್ಳುತ್ತದೆ. ಉತ್ತಮವೆನಿಸಿದ ಲೇಖನ, ಗ್ರಂಥಗಳನ್ನು ಆಸಕ್ತಿ, ತಾಳ್ಮೆಯಿಂದ ಓದಬೇಕು!

ಇದುವರೆಗಿನ ನನ್ನ ಸಾಹಿತ್ಯ ಪಯಣದ ಅನುಭವದ ಬಗ್ಗೆ ಹೇಳುವುದಾದರೆ, ನನ್ನ ಬಹುತೇಕ ಬರಹಗಳು, ಕತೆಗಳು "ಆತ್ಮತೃಪ್ತಿಯ ಅಂತಿಮ ಸ್ಪರ್ಶ" ಪಡೆದಿರುವುದು, ಪಡೆದುಕೊಳ್ಳುತ್ತಿರುವುದು, ಪ್ರಶಾಂತ ರಾತ್ರಿಗಳಲ್ಲಿ. ನಾನು ಮಾತ್ರವಲ್ಲ, ಸಂವೇದನಾಶೀಲರಾದ ಅನೇಕ ಹೆಣ್ಣುಮಕ್ಕಳ ಬರಹಗಳು ಮುಗಿವಿಲ್ಲದ ಗೃಹಕೃತ್ಯಗಳಲ್ಲಿ ಸಿಲುಕಿ, ಅಲ್ಪ ಸಮಯ ವಿಶ್ರಾಂತಿ ಸಿಗಬಹುದು, ನಿದ್ದೆ ನೈವೇದ್ಯವಾದರೇನೇ, ಇಲ್ಲಿ ಸಾಹಿತ್ಯ ಸರಸ್ವತಿಯ ಮುಂದೆ ಸುಂದರ ಕೃತಿಗಳ ನೈವೇದ್ಯದ ಪ್ರಸಾದವನದನು ಲೋಕದ ಮುಂದೆ ಇಡಲು ಸಾಧ್ಯ! ಕಳೆದುಕೊಂಡ ನಿದ್ದೆಯನ್ನು ಯಾವಾಗಲಾದರೂ ಹಗಲಿನಲ್ಲಿ ಒಂದಿಷ್ಟು ತೂಕಡಿಸಿ ಮೈಗೂಡಿಸಿಕೊಳ್ಳಬಹುದು. ಉದ್ಯೋಗಸ್ಥ ಮಹಿಳಾ ಬರಹಗಾರರು, ಇನ್ನಷ್ಟು ಸಮಯ ಹಂಚಿಕೆಯಲ್ಲಿ ಜಾಗ್ರತೆ, ಜಾಣತನ ತೋರಬೇಕಾಗುತ್ತದೆ. ಹಗಲಿನಲ್ಲಿ ವೃತ್ತಿನಿರತರಾಗಿರುವ ಅನೇಕ ಪುರುಷರಿಗೂ ಇದು ಅನಿವಾರ್ಯ!

ಒಮ್ಮೊಮ್ಮೆ ಇಡೀ ಕತೆಯ ಹೊಳಹು, ಸಂವಿಧಾನ(Plot) ಯಾವುದೋ ಅಮೃತ ಮುಹೂರ್ತದಲ್ಲಿ ತಲೆಯಲ್ಲಿ ಸಿದ್ಧವಾಗುತ್ತದೆ. ಮನದಲ್ಲೇ ಮಾಗಿದ ಕತೆ ಸುಲಭವಾಗಿ ಹಾಳೆಗಿಳಿಯುತ್ತದೆ. ವಾಕ್ಯರಚನೆಯ ಸಾರವನ್ನು ಕಾಯ್ದು ಕೊಳ್ಳಬೇಕಾಗುತ್ತದೆ ಅಷ್ಟೇ! ಒಮ್ಮೊಮ್ಮೆ ಹಾಗಾಗದೆ, ಮನೆಯಲ್ಲೋ, ರಸ್ತೆಯಲ್ಲೋ, ಎಲ್ಲೋ ಒಂದು ದೃಶ್ಯ ಕುತೂಹಲ ಮೂಡಿಸಿದಾಗ, ಅದರ ಬಗ್ಗೆ ಚಿಂತಿಸಿ, ಗೊತ್ತುಗುರಿಯಿಲ್ಲದೆ ಪ್ರಾರಂಭಿಸಿದ ವಾಕ್ಯಗಳು ಎಷ್ಟೋ ಸಲ ಚಿಂತಿಸುತ್ತಾ ತಮ್ಮ ಗುರಿಯ ಕಡೆ ಧಾವಿಸುತ್ತವೆ. ಒಂದು ರೋಚಕ ಕತೆಯೇ ಮೂಡಿಬರಬಹುದು, ಶೀಲಾ ಅವರ 'ಗರಿ' ಹಾಗೆ ಹುಟ್ಟಿಕೊಂಡ ಕತೆ. ಕುವೆಂಪು ಅವರ ಹತ್ತು ವರ್ಷಗಳ ತಪಸ್ಸಿನ ಫಲ "ಶ್ರೀ ರಾಮಾಯಣ ದರ್ಶನಂ" ಬರೆಯುವ ಮುನ್ನ ಮಾಡುತ್ತಿದ್ದ ಚಿಂತನ-ಮನನಗಳೇ ಹೆಚ್ಚು! ಒಮ್ಮೆ ಅವರು ಮನೆಯಲ್ಲಿ ಕುಳಿತಿದ್ದಾಗ, ಪುಟ್ಟ ತೇಜಸ್ವಿ ಯಾವುದೋ ಕಾರಣಕ್ಕೆ ಅಳುತ್ತಿದ್ದನಂತೆ, ಅದನ್ನು ನೋಡಿದ ಕುವೆಂಪು ತಮ್ಮ ಒಂದು ಅಧ್ಯಾಯವನ್ನು 'ಏಕಳುವೆ ತೇಜಸ್ವಿ?'ಎಂದೇ ಪ್ರಾರಂಭಿಸಿದರಂತೆ.

ಎಷ್ಟೋ ಸಲ ಸ್ವಂತ ಅನುಭವಗಳು ಒಳ್ಳೆಯ ಕತೆಗಳಾಗಿ ಅರಳಿಕೊಳ್ಳಲು ಸಾಧ್ಯ! ಒಂದಿಷ್ಟು ಉತ್ಪ್ರೇಕ್ಷೆ ಸೇರಿಸಿದರೆ ಸೊಗಸು. ಸ್ನೇಹಿತರನೇಕರು ತಮ್ಮ ಶ್ರಾವಣ ಪುಟ್ಟ ಕಥಾ ಅಭಿಯಾನದಲ್ಲಿ ತಮ್ಮ ಅನುಭವಗಳನ್ನು ಕತೆಯಾಗಿಸಿದ್ದಾರೆ.

ಶ್ರಾವಣ ಅಭಿಯಾನದ ಕೆಲವು ಪುಟ್ಟ ಕತೆಗಳಿಗೆ ಪುಟ್ಟ ಸ್ಪಂದನೆ

ಸಮನ್ವಯ ಸಮಿತಿ, ಕನ್ನಡವೇ ಸತ್ಯ ವೇದಿಕೆಯ ಪುಟ್ಟಕತೆಗಳ ಶ್ರಾವಣ ಅಭಿಯಾನದಲ್ಲಿ, ಹಿರಿಕಿರಿಯರೆನ್ನದೆ ಎಲ್ಲರ ಕತೆಗಳಲ್ಲಿ ಉತ್ತಮವೆನಿಸಿದ ಒಂದು ಕತೆಯನ್ನು ಇಲ್ಲಿ ಹೆಸರಿಸಿ ಅದರ ಬಗ್ಗೆ ಎರಡು ವಾಕ್ಯಗಳನ್ನಾದರೂ ಬರೆಯಬೇಕೆಂದು ಬಯಸಿದೆ. ಆದರೆ ಸಮಯದ ಪರಿಮಿತಿಯಲ್ಲಿ ಅದು ಸಾಧ್ಯವಿಲ್ಲವೆಂದು ತಿಳಿದು, ಕೆಲವರ ಕತೆಗಳನ್ನು ಹೆಸರಿಸಿ, ಸ್ಪಂದಿಸಲು ಪ್ರಯತ್ನಿಸಿದ್ದೇನೆ. ಮಿಕ್ಕ ಕತೆಗಳನ್ನು ನನಗೆ ಕಳುಹಿಸಿದರೆ ಅವುಗಳನ್ನು ಓದಿ, ವೇದಿಕೆಯಲ್ಲಿ ಬರೆಯುತ್ತೇನೆ ಸ್ನೇಹಿತರೇ.

ರತ್ನಾಮೂರ್ತಿ ಅವರ 'ಇಂದ್ರನೀಲ'

ಆರೋಗ್ಯವಂತ ಅನಾಥ ಶಿಶು ಸಿಗುವ ಸಾಧ್ಯತೆಯಿದ್ದರೂ, ಮಮತಳ ಮಮತಾಮಯಿ ಹೃದಯ ಒಲಿದುದು ರಿಕೆಟ್ಸ್ ಪೀಡಿತ ಎಳೆಬತ್ತಿಯಂಥ ಅಸಹಾಯಕ ಶಿಶುವಿಗೆ. ದೇಹವಿದು ಮೂಳೆ ಮಾಂಸದ ತಡಿಕೆ ಎಂದು ಎಲ್ಲರಿಗಿಂತ ಚೆನ್ನಾಗಿಯೇ ಅರಿತಿದ್ದರೂ, ಮದನನ ಆಟಕ್ಕೆ ಮೈ ಮರೆತು ಜಾರಿದ ಇಬ್ಬರು ಡಾಕ್ಟರುಗಳ ಪ್ರೇಮಕೇಳಿಯ ಫಲವಾಗಿ ಹುಟ್ಟಿದ ಮಗುವಿಗೆ ಇನ್ನಾರೋ ತಾಯಿಯ ಮಡಿಲ ಆಸರೆ! ಸುಂದರ ಹೆಣಿಗೆಯ ಹೃದಯ ಮಿಡಿವ ಕತೆ.

ಜಿ.ವಿ. ಅರುಣ ಅವರ 'ಪಿಂಕಿಯ ಪತ್ತೇದಾರಿ'

ಗೆಳತಿ ಇಂಚರಳಿಗೆ ತನ್ನ ವಿಶೇಷ ಜಾಣತನದಿಂದ ಅವಳ ಪ್ರೀತಿಯ ಬೆಕ್ಕಿನ ಮರಿ ಪತ್ತೆ ಮಾಡಿಕೊಟ್ಟ ಪಿಂಕಿಯ ಸಾಹಸ ಬಣ್ಣಿಸುವ ಚೆಂದದ ಕತೆ. 'ಸುಧಾ' ವಾರಪತ್ರಿಕೆಯಲ್ಲಿ ಪಿಂಕಿಯ ಸಾಹಸ ಬಣ್ಣಿಸುವ ಅನೇಕ ಕತೆಗಳು ಪ್ರಕಟವಾಗಿವೆ. (ಇಂಥ ಚುರುಕು ಬುದ್ಧಿಯ ಪಿಂಕಿಯನ್ನು, ನನ್ನ ಕತೆಯಲ್ಲಿ ಬರುವ ಪತ್ತೇದಾರ "ನಿಶ್ಚಲ್ ರಾಜ್"ಗೆ ಅಪ್ತ ಕಾರ್ಯದರ್ಶಿಯಾಗಿ ಕಳುಹಿಸಿಕೊಡಿ ಎಂದು ಅರುಣ ಅವರನ್ನು ಕೇಳಲಾಗಿ ಅವರು ಒಪ್ಪಿದ್ದಾರೆ)

ಶ್ರವಣ ಕುಮಾರಿ (ಶ್ರೀವಾಣಿ) ಅವರ 'ಮಾಯದ ಕನ್ನಡಿ'
ಪ್ರಪಂಚದಲ್ಲಿ ಯಾವುದು ತಾನೇ ಶಾಶ್ವತ, ಬದಲಾವಣೆಯೇ ನಿರಂತರವಲ್ಲವೇ? ಎಂಬ ಸತ್ಯವನ್ನು ಸಾಕ್ಷಾತ್ಕರಿಸುವ ಚೆಂದದ ಕತೆ. ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಅನಿವಾರ್ಯವಾಗಿ ಹಾದು ಬರುವ ಅವಸ್ಥೆಗಳ ಮೂಲಕ ಶರೀರದಲ್ಲಾಗುವ ಬದಲಾವಣೆ ಅಂದ ಕ್ರಮೇಣ ಕುಂದುವ ಎಲ್ಲ ಬದಲಾವಣೆಗಳನ್ನು ಕನ್ನಡಿ ತೋರಿಸುತ್ತ ಹೋಗುತ್ತದೆ. ಸುಂದರ ನಟೀಮಣಿಯ ಜೀವನವನ್ನು ದೃಷ್ಟಾಂತವಾಗಿ ಉದಾಹರಿಸಿ ಅದ್ಭುತ ಕತೆ ಹೆಣೆದಿದ್ದಾರೆ.

ಶೀಲಾ ಅರಕಲಗೂಡು ಅವರ 'ಹುಡುಕಾಟ'
ಸಾಗರದಾಳ ತಲುಪಿ ಪದೇಪದೇ ಖಾಲಿ ಚಿಪ್ಪುಗಳನ್ನೇ ಹೊತ್ತು ತಂದ ಮನುಷ್ಯನಿಗೆ ಕೊನೆಗೂ ಮುತ್ತು ಸಿಗುವುದೇ ಇಲ್ಲ, ಆದರೆ ಅವನು ಆಶಾವಾದಿ, ಹುಡುಕಾಟವನ್ನು ಬಿಡುವುದೇ ಇಲ್ಲ. ನಾವೆಲ್ಲರೂ ಹಾಗೆಯೇ. ಇಡೀ ಜೀವನ ಯಾವುದಕ್ಕಾಗಿಯೋ ಕೈಗೂಡದಿದ್ದರೂ ತಡಕಾಡುತ್ತಲೇ ಇರುತ್ತೇವೆ, 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ...' ಎಂಬ ಕವಿವಾಣಿಯಂತೆ.

ಕೆ.ಆರ್.ಎಸ್. ಮೂರ್ತಿಯವರ 'ಕ್ವೀನ್ ಆಫ್ ಹಾರ್ಟ್ಸ್'
ನಂಬಿಕೊಂಡಿದ್ದ ಗಂಡ ಇನ್ನೊಬ್ಬ ಹೆಣ್ಣಿನೊಂದಿಗೆ ಆಡುತ್ತಿದ್ದ ಚೆಲ್ಲಾಟ ಗೊತ್ತಾಗಿ ಹೃದಯ ಬಿರಿದ ಹೆಣ್ಣು, ಅವನೊಂದಿಗೆ ಮೇಲ್ನೋಟಕ್ಕೆ ಆಟವಾಡುತ್ತಿದ್ದರೂ ಒಳಗಿನ ಕುದಿತದಿಂದ ಆಡುತ್ತಾಡುತ್ತಲೇ ಅವನ ಮೋಸವನ್ನು ಬಯಲಿಗೆಳೆಯುವ ನಿರೂಪಣೆ ರೋಚಕವಾಗಿ ರಚಿತವಾಗಿದೆ.

ಭ.ರಾ. ವಿಜಯಕುಮಾರ್ ಅವರ 'ಪಾತ್ರ ಪ್ರವೇಶ'
ಜೀವನದಲ್ಲಿ ಎದುರಾಗುವ ಯಾವುದೋ ಸನ್ನಿವೇಶ ಮನುಷ್ಯನ ವರ್ತನೆಯನ್ನು ಬದಲಾಯಿಸಿ ಸರಿಯಾದ ಹಾದಿಗೆ ಸೇರಿಸಿ ಬಿಡುತ್ತದೆ ಎಂಬುದಕ್ಕೆ ಈ ಕತೆಯ ಮಂಜುನಾಥನ ಪಾತ್ರವೇ ಸಾಕ್ಷಿ. ಅವನು ನಾಟಕದಲ್ಲಿ ಮಾಡಿದ ಪಾತ್ರದ ಸಂಭಾಷಣೆಗಳು, ಮಾನವೀಯತೆಯನ್ನು ಪ್ರದೀಪ್ತಗೊಳಿಸಿ ಅವನ ಕಣ್ತೆರೆಸುತ್ತವೆ

ಮಾಲತಿ ಶ್ರೀನಿವಾಸನ್ ಅವರ 'ದಂಡಂ ದಶಗುಣಂ ಭವೇತ್'
ಕೆಲವೊಮ್ಮೆ ಸತ್ಯ ಹೊರಬರುವಂತೆ ಮಾಡಲು ನಿರಪರಾಧಿಗಳಿಗೂ ದಂಡನೆ ಅನಿವಾರ್ಯವಾಗುತ್ತದೆ, ಜಾಣ ಡಾಕ್ಟರ್ ಆ ನಿಷ್ಪಾಪಿ ಹೆಣ್ಣಿಗೆ ಒಂದು ಬಲವಾದ ಏಟು ಕೊಟ್ಟು ಅವಳ ಅಂತರಂಗದ ಸತ್ಯ ರಹಸ್ಯವಾಗಿಟ್ಟು ಸರಿಯಾದ ಚಿಕಿತ್ಸೆ ನಡೆಸುತ್ತಾಳೆ.

ಶೃಂಗೇಶ್ವರ ಶರ್ಮ ಅವರ 'ಮುಗ್ಧ ಸತ್ಯ'
ಆರ್ಥಿಕ ವ್ಯವಸ್ಥೆಯ ಹೃದಯ ಎನಿಸಿದ ಬ್ಯಾಂಕುಗಳಲ್ಲಿ ಆಗಬಹುದಾದ ಅವ್ಯವಹಾರದ ಒಂದು ರೀತಿಯನ್ನು ಸಮರ್ಥವಾಗಿ ಅನಾವರಣ ಮಾಡಿದ್ದಾರೆ. ಕ್ಯಾಷಿಯರ್ ಈ ವಂಚನೆಯ ವಿದ್ರೋಹದ ವ್ಯೂಹಕ್ಕೆ ತನ್ನ ಏನೂ ಅರಿಯದ ಪುಟ್ಟ ಮಗಳನ್ನು ಉಪಯೋಗಿಸಿಕೊಳ್ಳುವುದು ಧೂರ್ತತನದ ಪರಮಾವಧಿ ಎನಿಸುತ್ತದೆ

ರಾಧಿಕಾ ಗುಜ್ಜರ್ ಅವರ 'ಸ್ಥೈರಣೆ'
ಹೃದಯವನ್ನು ತಟ್ಟಿ ಎಚ್ಚರಿಸುವ ಹೃದಯ ವಿದ್ರಾವಕ ಕತೆ. ಬದುಕಿನುದ್ದಕ್ಕೂ ಮೃಗೀಯವಾಗಿ ನಡೆದುಕೊಂಡ ಪತಿಯ ದುರ್ಮರಣದ ನಂತರ, ಎಲ್ಲವನ್ನೂ ಅಸಾಧಾರಣ ಸ್ಥೈರಣೆಯಿಂದ ಸಹಿಸಿದ ಕತೆಯ ನಾಯಕಿ, ಕರೆಯಾಗಿರುವ ಬೆಡ್ ಶೀಟುಗಳ ಭಾಗ ಕತ್ತರಿಸಿ ಗಟ್ಟಿ ತುಂಡುಗಳನ್ನು ಹೊಲೆದು ಕೌದಿಯಾಗಿ ಪರಿವರ್ತಿಸುವುದು ಸಾಂಕೇತಿಕವಾಗಿ ಉಳಿದಿರುವ ಬದುಕನ್ನು ತಬ್ಬಿ ಬಾಳಬೇಕೆಂದಿರುವ ಉಳಿದ ಜೀವನಕ್ಕೂ ಸಾಂಕೇತಿಕವಾಗಿ ಅನ್ವಯಿಸುತ್ತದೆ, ಸ್ಥೈರಣೆಯ ಪರಮಾವಧಿ/

ಶಾಂತಾ ನಾಗಮಂಗಲ ಅವರ 'ಕಾಲಕ್ಕೆ ತಕ್ಕ ಅರ್ಥವೇ ಕತೆ"

ನಮ್ಮ ವೇದಿಕೆಯ ವಿದ್ವನ್ಮಣಿ ಶಾಂತಾ ನಾಗಮಂಗಲ ಅವರು ಮುನ್ನೂರು ಪದಗಳಲ್ಲಿ ಎಷ್ಟು ಚೆಂದದ ಕತೆಯನ್ನು ಸೃಜಿಸ ಬಹುದೆಂದು ತೋರಿಸಿಕೊಟ್ಟಿದ್ದಾರೆ. ಒಂದು ಕಾಲಕ್ಕೆ ಹಿರಿಯರು ಹಾಕಿಕೊಟ್ಟ ನೀತಿ ಸಂಹಿತೆಯನ್ನು ಒಂದಿಷ್ಟೂ ದಾಟದೆ ಅನುಸರಿಸಿ ಬಾಳಿದ, ಈಗ ಜೀವನದ ಸಂಧ್ಯೆಗೆ ಸರಿಯುತ್ತಿರುವ ಶಿವಾನಿಯಂಥವರಿಗೆ, ಇಂದಿನ 'ಲಿವ್ ಇನ್ ರಿಲೇಷನ್‌ಷಿಪ್' ಕಾಲಕ್ಕೆ ತಕ್ಕ ಅರ್ಥವೇ ಎಂಬ ಗೊಂದಲಗಳನ್ನು ಮನದಲ್ಲಿ ಎಬ್ಬಿಸುತ್ತದೆ. ಏನೇ ಗೊಣಗಿದರೂ ಯಾವುದೂ ಬದಲಾವಣೆ ಯಾಗದ, ಆಗುತ್ತಿರುವ ಆಧುನಿಕ ವೈಪರೀತ್ಯಗಳನೆಲ್ಲ ನೋಡುತ್ತ ಕುಳಿತುಕೊಳ್ಳುವ ಅಸಹಾಯಕತೆ ಉಳಿದಿದೆ ಅಷ್ಟೇ!

ವಿಠ್ಠಲ್ ಇಜೇರಿ ಅವರ 'ಯಾರು ಹಿತವರು?'

ಹೋಟೇಲಿನಲ್ಲಿ ಇಳಿದುಕೊಂಡ ವ್ಯಕ್ತಿಯೊಬ್ಬನಿಗೆ ದೊರೆತ ವನಜಾಕ್ಷಿ ಎಂಬ ಸುಂದರಿಯ ಡೈರಿ ಅನೇಕ ವಿಷಯಗಳನ್ನು ಅವನಿಗೆ ತಿಳಿಸುತ್ತದೆ. ಅವಳನ್ನು ಇಷ್ಟಪಟ್ಟ ಮೂರೂ ಗಂಡುಗಳಿಗೆ ಸಿಕ್ಕದೆ ಇವನಿಗೆ ಜೀವನ ಸಂಗಾತಿಯಾಗುತ್ತಾಳೆ. ಜೀವನವೆಂದರೆ ಹೀಗೇ, ಎನೋ ಯಾವ ಯಾವಾಗ ಅನಿರೀಕ್ಷಿತವಾಗಿ ಏನೇನು ಕಾಣಿಕೆಗಳನ್ನು ನೀಡುತ್ತದೋ! ಆ ದೇವರಿಗೇ ಗೊತ್ತು!

ಮಹಾಬಲ ಅವರ 'ಮರಳಿ ಬದುಕಿಗೆ'

ವೃತ್ತಿ ಬದುಕಿನ ಬಿಕ್ಕಟ್ಟು ಶಿವಸ್ವಾಮಿಯನ್ನು ಮಠಕ್ಕೆ ಶರಣಾಗುವಂತೆ ಮಾಡಿದರೂ, ಮಠದ ವ್ಯವಹಾರದ ನಿಭಾವಣೆಯೂ ಕಷ್ಟವಾಗಿ ಮತ್ತೆ ಆತ ಸಂಸಾರಕ್ಕೇ ಮರಳುವ ಕತೆ. ಮನುಷ್ಯ ಸಹಜವಾದ ದೌರ್ಬಲ್ಯ, ಅನಿಶ್ಚಿತತೆಗಳು ಸುಂದರವಾಗಿ ಅನಾವರಣಗೊಂಡಿವೆ. ಆಯಾಯ ವ್ಯವಸ್ಥೆಗೆ ಸಂಬಂಧಿಸಿದಂತೆ ಬಿಕ್ಕಟ್ಟುಗಳು ಇದ್ದೇ ಇರುತ್ತವೆ. ಅದನ್ನು ಜಾಣತನದಿಂದ ಎದುರಿಸಿ ಬಾಳುವ ಕಲೆ ಇಲ್ಲದಿದ್ದರೆ ಮನುಷ್ಯರನ್ನು ಅತಂತ್ರಕ್ಕೆ ದೂಡುತ್ತದೆ ಪರಿಸ್ಥಿತಿ.

ಬೆಂ.ಶ್ರೀ. ರವೀಂದ್ರ ಅವರ 'ಆಪೋಷಣ'

ಸಂಸ್ಕಾರವಂತರೂ ಧರ್ಮಭೀರುಗಳೂ ಆದ ಕೇಶವಯ್ಯನವರು ತಮ್ಮ ಅಪ್ಪನ ತಿಥಿಗೆ ಬ್ರಾಹ್ಮಣಾರ್ಥಕ್ಕೆಂದು ತಮ್ಮ ಸಂಬಂಧಿ ಕೃಷ್ಣರಾಯರನ್ನು ಕರೆದುಕೊಂಡು ಬಂದುದು ಅವರಿಗೇ ಕಂಟಕವಾಯ್ತು. ಆ ಸಂದರ್ಭದ ಇಕ್ಕುಳದಲ್ಲಿ ಕೇಶವಯ್ಯನವರನ್ನು ಸಿಕ್ಕಿಸಿದ ಕೃಷ್ಣರಾಯರು ತಮಗೆ ಅವರ ಮನೆಯನ್ನು ದಾನ ಕೊಡುವವರೆಗೂ ತಾವು ಆಪೋಷಣ ತೆಗೆದುಕೊಳ್ಳುವುದಿಲ್ಲ ಎಂದು ಹಟ ಮಾಡುತ್ತಾರೆ, ನಿಜವಾದ ಆಪೋಷಣ ಊಟಕ್ಕೆ ಮುನ್ನ ತೆಗೆದುಕೊಂಡ ಆಪೋಷಣವಲ್ಲ, ಮನೆಯನ್ನು ಕಬಳಿಸಿದ್ದೇ ನಿಜವಾದ ಆಪೋಷಣ, ಮನೆಯನ್ನು ಕಳೆದುಕೊಂಡ ಕೇಶವಯ್ಯನವರು ಹಳ್ಳಿಗೆ ತಮ್ಮ ಬಾಮೈದುನನ ಮನೆಗೆ ಹೊರಟುಹೋಗುತ್ತಾರೆ. ಈಗ ಕೃಷ್ಣರಾಯರಂಥವರು ಹೆಚ್ಚಾಗುತ್ತಿದ್ದಾರೆ.

ಸರಸ್ವತಿ ನಟರಾಜ್ ಅವರ 'ಕ್ಷಮಿಸಿ ನಿರಾಳವಾಗಿ'

ದುಗುಡಗಳು ಮಡುಗಟ್ಟಿ ಹೊರಗೆ ಬಾರದಿದ್ದರೆ ಮನುಷ್ಯರ ಜೀವನೋತ್ಸಾಹವನ್ನೇ ಕೊಂದುಬಿಡುತ್ತವೆ. ಸಮಾಲೋಚಕರ ಬಳಿಗೆ ಹೋದ ಕಥಾನಾಯಕಿಯ ದುಗುಡಗಳು ಅವಳ ಒಳಗಿನಿಂದ ಹೊರಬರಲು ಅದ್ಭುತ ಉಪಾಯವನ್ನು ಹುಡುಕುತ್ತಾರೆ. ನಂತರ ಅವಳು ಎಲ್ಲರನ್ನೂ ಕ್ಷಮಿಸಿ ನಿರಾಳವಾಗುತ್ತಾಳೆ..ಓದುತ್ತಿರುವಾಗ ಒಂದು ಹಂತದಲ್ಲಿ ನನಗೆ ಸುಖಬೋಧಾನಂದರ "ಮನಸ್ಸೇ, ರಿಲ್ಯಾಕ್ಸ್ ಪ್ಲೀಸ್" ಪುಸ್ತಕ ನೆನಪಿನಲ್ಲಿ ಸುಳಿಯಿತು.

ನಿರ್ಮಲ. ಜಿ.ವಿ. ಅವರ 'ನಾಲ್ಕನೆಯ ಕೋತಿ'

ಹಾಸ್ಯ ತಳಹದಿಯ ಮೇಲೆ ಜಾಣತನದಿಂದ ನಿರ್ಮಿಸಿರುವ ನೀತಿಯನ್ನೂ ಮೈಗೂಡಿಸಿಕೊಂಡಿರುವ ಕಥಾ ಹಂದರ. ಸ್ಮಾರ್ಟ್ ಫೋನ್ ಇಂದು ಇಡೀ ಜಗತ್ತನ್ನೇ ತನ್ನ ಅಂಗೈಲಿಟ್ಟು ಆಟವಾಡುತ್ತಿದೆ. ಎತ್ಲಾಗೂ ನೋಡದೆ ಬಹುಶಃ ಪ್ರಳಯವಾದರೂ ಕತ್ತು ತಿರುಗಿಸದೆ ಮೊಬೈಲಿನಲ್ಲಿ ಮುಳುಗಿರುವ ನರಾಧಮನೇ ನಾಲ್ಕನೆಯ ಕೋತಿ! ತಾನು ಕೆಡೋದಲ್ಲದೇ ಕೋತಿ ವನಾನೆಲ್ಲ ಕೆಡಿಸಿತು ಎಂಬ ಗಾದೆಯನ್ನೇ ಬದಲಾವಣೆ ಮಾಡಬೇಕಾಗಿದೆ.

ಗಣಪತಿ ಹೆಗಡೆ ಅವರ 'ಗುಲಾಬಿ ಹೂ'

ಮನಕಲಕುವ ಕತೆ. ಹೂ ಕದ್ದಳೆಂದು ಬಾಲಕಿಯ ಕೈ ಹಿಡಿದು ಟೀಚರ್ ಬಳಿ ಎಳೆದು ತಂದ ಅಂಗಡಿ ರಾಮಣ್ಣ ಶಾಲೆಯಲ್ಲಿ ಕಂಡ ದೃಶ್ಯ ಕಂಡು ಮುಗ್ಧನಾಗಿ, ಬಂದಿದ್ದ ವಿಷಯವನ್ನೇ ಮರೆತು ಇನ್ನರೆಡು ಹೂವನ್ನು ಅಂಗಡಿಯಿಂದ ತರಿಸಿ ಹೆಡ್‌ಮಿಸ್‌ಗೆ ಹೂ ಕೊಟ್ಟು ಬರ್ತಡೇ ಶುಭಾಶಯ ಹೇಳಿ ಹಿಂತಿರುಗುತ್ತಾನೆ.

ಮಾಧುರಿ ಕೃಷ್ಣ ಅವರ 'ಆಣತಿ'

ಅತ್ತೆ, ಮಾವಂದಿರು, ತಾಯಿ–ತಂದೆಯ ಸ್ಥಾನ ಪಡೆದುಕೊಳ್ಳುವ, ಆ ಮೂಲಕ ಸೊಸೆಯ ಹೃದಯದಲ್ಲಿ ಆರಾಧಿಸಲ್ಪಡುವ ಹಂತ ತಲುಪುವ ಅಪರೂಪದ ಪವಿತ್ರ ಸನ್ನಿವೇಶವನ್ನು ಹೃದಯಂಗಮವಾಗಿ ಮಾಧುರಿ ಚಿತ್ರಿಸಿದ್ದಾರೆ. ಮಗನನ್ನು ಕಳೆದುಕೊಂಡ ತಂದೆ–ತಾಯಿ, ನವಯುವತಿಯಾದ ಸೊಸೆಯ ಸಂಕಟ ನೋಡಲಾರದೆ ತಾವೇ ನಿಂತು ಇನ್ನೊಂದು ಮದುವೆ ಮಾಡಿಸಿದ ನಂತರ ಅದು ಅಪ್ಪ ಅಮ್ಮನ ಮನೆಯಾಗುತ್ತದೆ ಅವಳ ಪಾಲಿಗೆ.

ನಾಗರತ್ನ ಚಂದ್ರಶೇಖರ್ ಅವರ 'ಸಂಗಾತಿ'

ನವರಸಗಳಲ್ಲಿ ಒಂದಾದ ಹಾಸ್ಯರಸವನ್ನು ವಿಶೇಷವಾಗಿ ತಮ್ಮ ಬರಹಗಳಲ್ಲಿ ತರುವ ನಾಗರತ್ನ ಅವರು, ಹೆಣ್ಣಿನ ಬದುಕಿನಲ್ಲಿ ಎದುರಾಗುವ ದುರ್ಭರ ಸನ್ನಿವೇಶಗಳ ಬಗ್ಗೆ ಗಂಭೀರವಾಗಿಯೂ ಬರೆಯಬಲ್ಲರು. ಅಮೇರಿಕಾದಿಂದ ಬಂದ ಜಾಣೆ ಸುನೀತಿ, ಆಧುನಿಕ ವೈಚಾರಿಕತೆ ಮೈಗೂಡಿಸಿಕೊಂಡ ದಿಟ್ಟ ಹುಡುಗಿ. ಮೀನ ಮೇಷ ಎಣಿಸುತ್ತ ಕೂಡದೆ, ತನ್ನಪ್ಪನನ್ನು ಕಳೆದುಕೊಂಡ ತನ್ನ ತಾಯಿಗೆ, ಹೆಂಡತಿ ಕಳೆದುಕೊಂಡ ಭಾಸ್ಕರ್ ಅವರನ್ನು ಮದುವೆ ಮಾಡಿಸಿಯೇಬಿಡುತ್ತಾಳೆ. ಅವರಿಬ್ಬರ ನೋವನ್ನು ಪರಿಹರಿಸುವ ಸಂಜೀವಿನಿಯಾಗುತ್ತಾಳೆ.

ಕಮಲಾಕ್ಷಿ ಅವರ 'ತೇನವಿನಾ'

ಕೃಷ್ಣಾ ಸುಶ್ರಾವ್ಯ ದನಿಯ ಗಾಯಕಿ, ಜನಪ್ರಿಯ ಟಿ.ವಿ.ಚಾನೆಲ್ ರಿಯಾಲಿಟಿ ಶೋನಲ್ಲಿ ಅವಳ ಗಾಯನವನ್ನು ಇಬ್ಬರು ತೀರ್ಪುಗಾರರು ಆಯ್ಕೆ ಮಾಡಿದರೂ ಮೂರನೆಯ ತೀರ್ಪುಗಾರರು ಆಯ್ಕೆ ಮಾಡದೆ ಹೋದಾಗ ಅವಳು ಹತಾಶಳಾಗುತ್ತಾಳೆ. ವೇಣುಗೋಪಾಲ ದೇವಾಲಯದಲ್ಲಿ ಅವಳು ಆವೇಶಕ್ಕೆ ಒಳಗಾದವಳಂತೆ ಒಂದಾದ ಮೇಲೆ ಒಂದರಂತೆ ಹಾಡುತ್ತ ಹೋದಾಗ ವೇಣುಗೋಪಾಲ ಆಯ್ಕೆ ಮಾಡಿದ. ದೈವ ಕರುಣೆಯ ಮಹಾ ಪಾರಿತೋಷಕವೇ ಕಾಯ್ದು ಕೊಂಡಿರುವಾಗ ಅಲ್ಲಿ ಮಾನವ ತೀರ್ಪುಗಾರ ತೀರ್ಪು ಕೊಡಲು ಹೇಗೆ ಸಾಧ್ಯ? ಮನುಷ್ಯ ಮನುಷ್ಯನೇ! ದೇವರು ದೇವರೇ! **ತೇನವಿನಾ, ತೃಣಮಪಿ ನಚಲತಿ ತೇನವಿನಾ.**

***



ನವರಾತ್ರಿ – ಮನೆಮನೆಯಲ್ಲೂ ಬೊಂಬೆ ಹಬ್ಬ – ಡಾ. ಶುಭಶ್ರೀ ಪ್ರಸಾದ್ ನಿವಾಸ

ಚಿದಂಬರ ರಹಸ್ಯ!

ಕೋಟಿಕಲ್ಪದ ಆದಿವ್ಯೋಮವು
ಮೌನ ಮುಸುಕಿದ ಸ್ಥಾವರ
ಅಣುವು ಇಲ್ಲದ ಕಣವು ಕಾಣದ
ಸ್ಥಿತಿಯು "ಇಚ್ಛೆ"ಗೆ ಬೇಸರ

ಚೇತ ಚೇತನ ಅಲೆಗಳಿಲ್ಲದ
ಸ್ತಬ್ಧ ಪರಿಯಿರು ಪರಿಸರ
ಇಚ್ಛೆಯಾಟಕೆ ಉಗಮ-ಪ್ರಕರಣ
ಸೃಷ್ಟಿ-ಸಂಭ್ರಮ ಧೀ-ವರ!

ಪ್ರಭೆಯಕಮ್ಮಟ ಸ್ಫೋಟದಾರ್ಭಟ
ಇಚ್ಛೆ ಹರಡಿಸಿ ಒಮ್ಮೆಗೆ
ಹೊಂಚು ಮಿಂಚಿಗೆ ಜನ್ಮ ತಳೆಯಿತು
ಕೋಟಿ ಕೋಟಿಯ ದೀವಿಗೆ

"ತಾನು" ಬಯಸಿದ ಚಲನ ಸೂತ್ರಕೆ
ಸೂರ್ಯಮಂಡಲ ಗೋಚರ!
ಧಾತು ಅನಿಲದ ಮೇರು ಚಿತ್ರಕೆ
ಇಳೆಯ ಬಳುವಳಿ ಬಹುತರ!

ಗತಿಯ ಸ್ಥಿತಿಯಲಸ್ತಿತ್ವ ಸೊಗಸಿಗೆ
ಇಳೆಯ ಮೆರೆಸಿತು ಬಾಂದಳ
ತನ್ನ ಅಣತಿಯ ಪ್ರಣತಿ ಹಚ್ಚಲು
ಇಚ್ಛೆಗೊಂದಾಡುಂಬೊಲ!

ನೀರು ನೆಲದಲಿ ಜೀವಕೋಟಿಯ
ಚಿಗುರು ಚಿಮ್ಮಿತು ಬುವಿಯೊಳು
ಬೆಸೆದ ಬುದ್ಧಿಗೆ ಬೆರಗು ಬೆರೆಯುತ
ಬಹುವಿಕಾಸವು ಬೆಳಕೊಳು!

ಜಗ-ವೈವಿಧ್ಯಕೆ ಪ್ರಶ್ನೆ ಅಮಿತವು
ಸೂಕ್ಷ್ಮಮತಿಯಿರು ಮನುಜಗೆ
ತರ್ಕ ಚಿಂತನೆ ಲಹರಿ ಲಾಸ್ಯಕೆ
"ನಾಥ" ಪಟ್ಟವು "ಇಚ್ಛೆ"ಗೆ!

ಒಟ್ಟುಗೂಡಿದ ಅಂತೆ-ಕಂತೆಯು
ಕತೆಗಳಾಗುತ ಒಂದೆಡೆ
ರೂಪುಗೊಂಡಿತು ಧ್ಯಾನ-ನಂಬಿಕೆ
ಭಾವಕೆಲ್ಲಿದೆ ಅಡೆತಡೆ!

"ಇಚ್ಛೆ" ಎದ್ದಿತು, "ಇಚ್ಛೆ" ಅವಿತಿತು
ಉಳಿದು ಉರುಳಿದೆ ಚಕ್ರವು
ಸಮಯ ಸುಳಿಯಲಿ ಎಲ್ಲ ಪರಿಯಲಿ
"ಊಹೆ" ಮಾತ್ರಕೆ ರಹಸ್ಯವು!

– ಕೆ.ಆರ್.ಎಸ್.ಮೂರ್ತಿ
11.09.2024

***

ಶಕ್ತಿಸ್ಥಳ

"ನಾಳೆ ಬರಬೇಕೆಂದಿದ್ದೇನೆ, ಎಲ್ಲಿದ್ದಿ"
ಎರಡು ವರ್ಷಗಳ ನಂತರ
ಬಂದ ಸಂದೇಶ, ಅವಳಿಗೆ ಹೊಸತಲ್ಲ
ಲೊಕೇಶನ್ ಕಳಿಸುತ್ತಾಳೆ.

ಆಪ್ತತೆ ಹಲವು ವರ್ಷ ಹಳೆಯದು
ಹಸಿರಾಗೇ ಇದೆ ಮಾಸುವುದಿಲ್ಲ
ಸಂದೇಶಗಳ ರವಾನೆ ಅಪರೂಪ
ಆದರೂ ಮೊಬೈಲ್ ಬದಲಾದಾಗೆಲ್ಲ
ನಂಬರ್ ಉಳಿಸಿಕೊಳ್ಳುತ್ತಾರೆ.

ಹೇಳಿದಂತೆ ಅವನು ಬರುತ್ತಾನೆ.
"ಇಷ್ಟು ದೂರ ಬಂದಿರಲ್ಲ"
ತನ್ನೆಲ್ಲ ಕೆಲಸ ಬದಿಗಿರಿಸುತ್ತಾಳೆ
ಅದಾವ ಊರು ಸುತ್ತುವಾಗಲೋ
ಅವಳಿಗಾಗಿ ತಂದ ಕೊಡುಗೆ
ನೀಡುತ್ತಾನೆ
ಪ್ರೀತಿಯಿಂದ ಸ್ವೀಕರಿಸುತ್ತಾಳೆ
ನೆನಪು ಎಲ್ಲಿ ಹೋದರೂ
ಹಿಂಬಾಲಿಸುತ್ತಲೇ ಇರುತ್ತದೆ
ಅನ್ನುವುದು ಇಬ್ಬರಿಗೂ ಗೊತ್ತು

ಅವನಿಗಾಗಿ ತಾನೇ ತಯಾರಿಸಿದ
ಸಿಹಿ ನೀಡುತ್ತಾಳೆ.
ಅವನು ಹೊರಟುಬಿಡುತ್ತಾನೆ
ಕೆಲವೇ ನಿಮಿಷದ ಭೇಟಿ.
ದೇವಾಲಯಕ್ಕೆ ಹೋಗಿ ದೇವರ
ದರ್ಶನ ಮಾಡಿ ಹೊರಟಂತೆ.
ಬಹುಶಃ ಅವನಿಗೆ
ಅವಳಿರುವ ಸ್ಥಳವೇ ಶಕ್ತಿಸ್ಥಳ!

– ಹುವಾಶ್ರೀ
04.09.2024

ಕವಿಮನ

ಕೊನೆಯ ಅಧ್ಯಾಯ

ಯಾರಿರಲಿ! ಬಿಡಲಿ! ಏನೇನಾದರೂ ಆಗಲಿ
ಅನುದಿನ ಪೂರ್ವದಂಗಳ
ಬಣ್ಣವೇರುವುದು!
ಅಂಧಕಾರ ಹರಿದು ಬೆಳಕು
ಮೂಡಿಯೇ ಮೂಡುವುದು
ಆಯುಷ್ಯದಲಿ ಮತ್ತೊಂದು
ದಿನ ಕಳೆಯುವುದು!

ಒಡಲಿಗೆ ದಕ್ಕಿದಷ್ಟು ಉಂಡು
ಇಲ್ಲಿ ಬಂದು ನದಿಯ ತೀರದಿ
ಕುಳಿತು ಬಿಟ್ಟರಾಯಿತು!
ದೂರ ದಿಗಂತದ ಶೂನ್ಯದಲಿ
ದಿಟ್ಟಿನೆಟ್ಟು, ಹಳೆಯ ನೆನಪಿನ
ಗಂಟು ತೆರೆದಿಟ್ಟು, ಸಿಹಿ–ಕಹಿ
ಮೆಲುಕು, ಅಲೆ ಶಬ್ದದುಲಿಗೆ
ಕಿವಿಗೊಟ್ಟು, ಕೆನ್ನೆಗೈಯಾಗಿ..

ಯಾವುದೋ ಮನಕಲಕುವ
ಘಟನೆ ನೆನಪಾಗಿ, ಕಣ್ಣಂಚಿನ
ಕಂಬನಿ ಸೆರಗಿನ ತುದಿಯಿಂದ
ಒರೆಸಿ, ಸಾಂತ್ವನ ನೀಡುವ
ಕಂಕಣದ ಕೈಗಳಿಲ್ಲ!
ಬಾಳ ಪಯಣದ ಎಲ್ಲ ಮಜಲುಗಳ ಏರಿ
ಸೇರಿ ಬಿಟ್ಟಿದ್ದಾಳೆ, ಪರಮಪದ!

ಉಳಿದ ಸಂಬಂಧಗಳು
ಹಳಸಿ, ಮುರಿದ ನೌಕೆಯಂತೆ
ಚಾಚಿ ಬಿದ್ದಿದೆಯಲ್ಲ!
ಬದುಕೆಂದರೆ ಹೀಗೇ!
ಹೊಸದರಲಿ ಚೆಂದ ಎಲ್ಲ!
ಎಂಬ ಸತ್ಯವ ಹಾಸಿ ಹೊದ್ದಿವೆಯಲ್ಲ! ಎಷ್ಟು
ಹೊತ್ತು ಹೀಗೆ ಕೂಡುವುದು?

ಮುಗಿಯದ ನೆನಪು ದಿಬ್ಬಣ!
ಮತ್ತೆ ಒಡಲ ಕರೆ! ಹಸಿವು ತಪ್ಪದು, ಅದಿರುವವರೆಗೆ
ದಿಟದ ಮನೆಗೈದುವ ಮುನ್ನ
ಮಣ್ಣಿನ ಮನೆಗೆ ತೆರಳಬೇಕು
ಸೋತ ಕಾಲುಗಳನೆಳೆಯುತ್ತ,
ಹುಟ್ಟು ಆಕಸ್ಮಿಕ; ಸಾವು ಅನಿವಾರ್ಯ!

ನಿರಂಜನನ ಬಳಿಗೆ ಪಯಣ
ಅಪರಿಹಾರ್ಯ

– ಎಲ್. ಗಿರಿಜಾರಾಜ್
18.09.2024

ತಾರತಮ್ಯ

ಹೀಗೇಕೆ ಬಂಧು ಮಾಡುವೆ ತಾರತಮ್ಯ
ಎಲ್ಲಿ ಅಡಗಿರುವುದು ಸದ್ಗುಣ ಸಾಮ್ಯ
ಪರರು ಮೇಲಾದರದು ಅಸಿಂಧುವೇ
ಮಾಡದಿರು ಲೋಕನೀತಿಯ ದ್ವಂದ್ವವ

ಉಟ್ಟ ಬಟ್ಟೆಯ ಬೆಲೆಯನಳೆಯಬೇಡ
ಅಟ್ಟದ ಗೆರೆ ನೋಡಿ ಮಣೆ ಹಾಕಬೇಡ
ಸತ್ವವಿಲ್ಲದಿರಲೂ ನಮ್ಮವನೆಂದೆಣಿಸಿ
ಬೆನ್ನು ತಟ್ಟಿದರೆ ಮೆಚ್ಚುವಳೆ ಶಾರದೆಯು

ಅರ್ಕನ ತರ್ಕದಲಿ ಜೀವಿಗಳೆಲ್ಲ ಒಂದೇ
ಬಿಸಿಲ ಕಿರಣಗಳು ಸಕಲರಿಗೂ ಒಂದೇ
ಪ್ರಕೃತಿಯೇ ಸಮಾನತೆಗೆ ತಲೆಬಾಗಿರಲು
ನೀನೇಕೆ ಬದಲಾಗಿರುವೆ ಎಲೆ ಮನುಜನೆ

ಧನಿಕನೋ ತಿರುಕನೋ ಹಸಿವು ಒಂದೇ
ಸಕ್ಕರೆಯು ಎನಗೆ ಸಿಹಿ ನಿನಗುಪ್ಪಾಗುವದೇ
ಮೇಲೆ ಕೆಳಗೆ ಮಾಡಿ ನೀ ಬೆಪ್ಪನಾಗದಿರು
ತರತಮವಿಲ್ಲದ ಪದವೆಣಿಸು ಹಸನಾಗಿ

– ಎಸ್ ಮಂಜುನಾಥ್ (ಹಿಮನಾಥ)
25.09.2024

ಸಮಾಸಗಳು

- ಗಣಪತಿ ಹೆಗಡೆ

ಶಬ್ದಗಳ ಸಂಯೋಜನೆ ಕ್ರಮಬದ್ಧವಾದಾಗ ವಾಕ್ಯಗಳು ಅರ್ಥಪೂರ್ಣವಾಗುತ್ತವೆ ಹಾಗೂ ಓದುವಾಗ ಹಿತವಾಗುತ್ತವೆ. ಎರಡು ಶಬ್ದಗಳ ನಡುವಿನ ಅಕ್ಷರಗಳ ಬೆಸುಗೆಯಿಂದ ಸಂಧಿ ಘಟಿಸಿದ ಹಾಗೆ ಎರಡು ಶಬ್ದಗಳು ಕೂಡಿದಾಗ ಸಮಾಸ ಹುಟ್ಟಿಕೊಳ್ಳುತ್ತದೆ.

ಕನ್ನಡ ಭಾಷೆಯಲ್ಲಿ ಸಂಸ್ಕೃತ ಶಬ್ದಗಳ ವ್ಯಾಪಕ ಬಳಕೆಯಿಂದಾಗಿ ಸಂಸ್ಕೃತ ಹಾಗೂ ಕನ್ನಡ ಎರಡೂ ಭಾಷೆಗಳ ವ್ಯಾಕರಣ, ಅದರಲ್ಲಿಯೂ ವಿಶೇಷವಾಗಿ ಸಂಧಿ ಹಾಗೂ ಸಮಾಸಗಳ ತಿಳುವಳಿಕೆ ಅನಿವಾರ್ಯವಾಗಿದೆ. ಸಂಸ್ಕೃತ ಭಾಷೆಯ ಸಂಧಿ ಹಾಗೂ ಸಮಾಸಗಳ ಅಧ್ಯಯನ ಕನ್ನಡ ಭಾಷಾ ಬೆಳವಣಿಗೆಗೆ ಎಷ್ಟು ಮಹತ್ವಪೂರ್ಣವಾಗಿದೆ ಎನ್ನುವದು ಭಾಷಾ ಶಾಸ್ತ್ರಜ್ಞರಿಗೆ ತಿಳಿದ ವಿಷಯವೇ ಆಗಿದೆ.

ನಾನು ಈಗ ಕನ್ನಡ ಸಮಾಸಗಳ ಕುರಿತಾಗಿ ಕೆಲವು ವಿಚಾರಗಳನ್ನು ಪ್ರಸ್ತುತಪಡಿಸಲು ಅಪೇಕ್ಷಿಸುತ್ತೇನೆ. ಇದರಲ್ಲಿ ಸಂಸ್ಕೃತ ಸಮಾಸಗಳ ತಿಳುವಳಿಕೆ ಉಂಟಾಗುವುದು ಸಹಜವೇ ಇದೆ.

ಕೇಶೀರಾಜನು,

"ಕಱು ತಾಯ ಬೞಿಯನುೞಿಯದ ।
ತೆಱದಿಂದಂ ನಾಮಪದಮದರ್ಥಾನುಗಮಾ॥
ಗೆಱಗೆ ಸಮಾಸಂ ನೆಗೞ್ಗುಂ।
ನೆಱೆ ಪೋಕುಂ ಮಧ್ಯಗತವಿಭಕ್ತಿಗಳವಱೊಳ್॥" - ಅಂತ ಸಮಾಸವನ್ನು ವ್ಯಾಖ್ಯಾನಿಸಿದ್ದಾನೆ.

[ನಾಮಪದ ಎನ್ನುವದು ಆಕಳು. ಅರ್ಥ ಎನ್ನುವದು ಕರು. ಎರಡು ಅಥವಾ ಹೆಚ್ಚು (ದ್ವಂದ್ವ ಸಮಾಸದಲ್ಲಿ) ನಾಮಪದಗಳು ಅರ್ಥಕ್ಕೆ ಭಂಗಬಾರದ ಹಾಗೆ ಸೇರಿದಾಗ ಸಮಾಸವಾಗುತ್ತದೆ. (ನಾಮಪದಗಳೆಂಬ ಆಕಳು ಅರ್ಥವೆಂಬ ಕರುವನ್ನು ಬಿಟ್ಟಿರದ ಹಾಗೆ). ಆಗ ನಾಮಪದಗಳ ಮಧ್ಯದಲ್ಲಿ ಬರುವ ವಿಭಕ್ತಿ ಪ್ರತ್ಯಯಗಳು ಹೋಗುವವು].

ನಾಗವರ್ಮನ ಪ್ರಕಾರ, 'ನಾಮವಾಚಿನಾಂ ಶಬ್ದನಾಂ ಪರಸ್ಪರಮನ್ವಯ ಸಿದ್ಧೋರ್ಥಸ್ಸಮಾಸ ಸಂಜ್ಞಸ್ಸ್ಯಾತ್', ಎಂದರೆ ನಾಮವಾಚಿಯಾದ ಶಬ್ದಗಳೆರಡರ ಅನ್ವಯ ಸಿದ್ಧವಾದ ಅರ್ಥ. ನಾಮಪದಗಳು ಕೂಡಿ ನುಡಿಯುವ ಅರ್ಥವೇ ಸಮಾಸ.

ಸಂಧಿಯಲ್ಲಿ, ಪರಸ್ಪರ ಎದುರಾದ ಎರಡು ಅಕ್ಷರಗಳು ಬದಲಾವಣೆ ಹೊಂದಿದರೆ, ಸಮಾಸದಲ್ಲಿ ಎರಡು ಅಥವಾ ಹೆಚ್ಚಿನ ಶಬ್ದಗಳು ಎದುರಾದಾಗ ಮಧ್ಯದ ಪ್ರತ್ಯಯಗಳು ಲೋಪವಾಗುತ್ತವೆ.

ರಾಮಬಾಣ= ರಾಮನ ಬಾಣ
ರಾಮಬಾಣ ಎನ್ನುವ ಪದವನ್ನು ಅರ್ಥಾನುಸಾರವಾಗಿ ವಾಕ್ಯರೂಪದಲ್ಲಿ ಪ್ರತ್ಯೇಕ ಪದಗಳನ್ನಾಗಿ ಬಿಡಿಸುವ ಪ್ರಕ್ರಿಯೆ 'ವಿಗ್ರಹ'. ಹೀಗೆ ಪಡೆದ ವಾಕ್ಯವನ್ನು 'ವಿಗ್ರಹವಾಕ್ಯ' ಎನ್ನಲಾಗುತ್ತದೆ. (ಉ: ರಾಮನ ಬಾಣ)

ಇಲ್ಲಿ ರಾಮ ಬಾಣ ಅಂತ ಬರೆಯಬಾರದು. ಹಾಗೆಯೇ ರಾಮನಬಾಣ ಅಂತಲೂ ಬರೆಯಬಾರದು.

ರಾಮ ಹಾಗೂ ಬಾಣ ಎರಡು ಪ್ರತ್ಯೇಕ ನಾಮಪದಗಳು. ಮಧ್ಯದಲ್ಲಿ 'ಅ' ಷಷ್ಠೀ ವಿಭಕ್ತಿ ಪ್ರತ್ಯಯ. ಎರಡೂ ಪದಗಳು ಸೇರುವಾಗ ವಿಭಕ್ತಿ ಪ್ರತ್ಯಯ ಲೋಪವಾಗಿ ಅರ್ಥ ಬದಲಾವಣೆಯಾಗದೇ 'ರಾಮಬಾಣ' ಎನ್ನುವ ಒಂದೇ ಪದವಾಗುವದು.

ಸಮಾಸ ನಡೆಯುವಾಗ ಸೇರುವ ಪದಗಳಲ್ಲಿಯ ಮೊದಲನೆಯ ಪದವನ್ನು ಪೂರ್ವಪದವೆಂತಲೂ (ಆದಿಪದ), ಎರಡನೆಯ ಪದವನ್ನು ಉತ್ತರಪದವೆಂತಲೂ ಕರೆಯುತ್ತಾರೆ. (ರಾಮನ-ಪೂರ್ವಪದ. ಬಾಣ-ಉತ್ತರಪದ.)
ಸಮಾಸವನ್ನು ಸ್ಥೂಲವಾಗಿ ನಾಲ್ಕು ಬಗೆಯಾಗಿ ವಿಂಗಡಿಸುತ್ತಾರೆ. ಕೇಶೀರಾಜನ ಸೂತ್ರಗಳಂತೆ,

"ಪರಪದದೊಳರ್ಥವರ್ತನ।
ಮಿರೆ ತತ್ಪುರುಷಂ ಸಮಂತದೇಕಾಶ್ರಯಮಾ॥
ಗಿರೆ ಕರ್ಮಧಾರಯಂ ನೆಲ।
ಸಿರೆ ಮೊದಲೊಳ್ ಸಂಖ್ಯೆಯದೆ ವಲಂ ದ್ವಿಗುವಕ್ಕುಂ॥

೧) ಉತ್ತರಪದ ಪ್ರಧಾನ-ತತ್ಪುರುಷ.
(ಕಲ್ಲಿನ ಹಾಸಿಗೆ= ಕಲ್ಲುಹಾಸಿಗೆ.
ತಲೆಯಲ್ಲಿ ನೋವು= ತಲೆನೋವು.
ಬೆಟ್ಟದ ತಾವರೆ= ಬೆಟ್ಟದಾವರೆ)

ಕರ್ಮಧಾರಯ ಹಾಗೂ ದ್ವಿಗುಸಮಾಸಗಳೂ ತತ್ಪುರುಷದ ಭಾಗವೇ ಆಗಿವೆ.
(ಸಮಂತದೇಕಾಶ್ರಯಮಾ॥
ಗಿರೆ ಕರ್ಮಧಾರಯಂ ನೆಲ।
ಸಿರೆ ಮೊದಲೊಳ್ ಸಂಖ್ಯೆಯದೆ ವಲಂ ದ್ವಿಗುವಕ್ಕುಂ।)

[ಕೂಡುವ ಎರಡು ಪದಗಳಲ್ಲಿ ಒಂದು ವಿಶೇಷಣ ಮತ್ತು ಇನ್ನೊಂದು ಪದ ವಿಶೇಷ್ಯವಾಗಿದ್ದರೆ ಆ ಸಮಾಸವನ್ನು ಕರ್ಮಧಾರಯ ಸಮಾಸವೆನ್ನುತ್ತಾರೆ.
ಉದಾ: ಶ್ವೇತವಾದ ಛತ್ರ= ಶ್ವೇತಛತ್ರ
ನೀಲವಾದ ಶರಧಿ= ನೀಲಶರಧಿ
ಹಿರಿದಾದ ಜೇನು= ಹೆಜ್ಜೇನು.]

[ತತ್ಪುರುಷ ಸಮಾಸದಲ್ಲಿ ಮೊದಲಿನ ಪದವು ಸಂಖ್ಯೆಯಾದಲ್ಲಿ ಸಂಖ್ಯಾ ತತ್ಪುರುಷ ಅಥವಾ ದ್ವಿಗು ಸಮಾಸ ಎನ್ನುವರು.
ಉದಾ: ಒಂದು ಕಟ್ಟು= ಒಗ್ಗಟ್ಟು.
ಎರಡು ಮಡಿ= ಇಮ್ಮಡಿ
ಒಂದು ಕಣ್ಣು= ಒಕ್ಕಣ್ಣು
ಕೈಯ ಹಿಂದು= ಹಿಂಗೈ]

ಇನ್ನು,
ಪದಮೆರಡು ಪಲವು ಮೇಣ್ ಪರ।
ಪದಾರ್ಥಮಂ ಬಯಸುತಿರೆ ಬಹುವ್ರೀಹಿ ಪದಾ॥
ರ್ಥದ ಗಡಣಂ ದ್ವಂದ್ವಮೆನಿ।
ಪ್ಪುದವ್ಯಯೀಭಾವಮಾದಿಪದಮುಖ್ಯತೆಯಿಂ"॥

೨) ಉಭಯಪದ ಪ್ರಧಾನ-ದ್ವಂದ್ವ.

(ಉದಾ: ರಾಮನೂ ಲಕ್ಷ್ಮಣನೂ= ರಾಮಲಕ್ಷ್ಮಣರು.

ಹುಲಿಯೂ, ಸಿಂಹವೂ, ಶಾರ್ದೂಲವೂ= ಹುಲಿಸಿಂಹಶಾರ್ದೂಲಗಳು.

ಮರವೂ+ಗಿಡವೂ+ಬಳ್ಳಿಯೂ+ ಪುಲ್ಲೂ+ಪೊದರೂ+ಪಕ್ಕಿಯೂ+ಮಿಗವೂ= ಮರಗಿಡಬಳ್ಳಿಪುಲ್ಪೊದರ್ಪಕ್ಕಿಮಿಗಂಗಳ್.)

೩) ಅನ್ಯಪದ (ಪರಪದ) ಪ್ರಧಾನ-ಬಹುವ್ರೀಹಿ.

(ಕಮಲದಂತಹ ಅಕ್ಷಿ ಉಳ್ಳವಳು= ಕಮಲಾಕ್ಷಿ.

ಮೂರು ಕಣ್ಣುಳ್ಳವನು= ಮುಕ್ಕಣ್ಣ.

ಉರಗವು ಪತಾಕಿಯಾಗುಳ್ಳವನು= ಉರಗಪತಾಕ)

೪) ಪೂರ್ವಪದ ಪ್ರಧಾನ- ಅವ್ಯಯೀಭಾವ (ಅಂಶೀ ಸಮಾಸ).

(ಕೈಯ ಮುಂದು= ಮುಂಗೈ)

ಪೂರ್ವಪದ ಪ್ರಧಾನವಾಗಿರುವ ಸಮಾಸ ಅಂಶಿಸಮಾಸ. (ಅವ್ಯಯೀಭಾವ) ಅಂಶಿಸಮಾಸದಲ್ಲಿ ಪೂರ್ವಪದ ವಸ್ತುವಿನ ಅಂಶವನ್ನೂ, ಉತ್ತರಪದ ಆ ವಸ್ತುವನ್ನು (ಅಂದರೆ ಅಂಶಿಯನ್ನು) ಸೂಚಿಸುತ್ತದೆ. ಆದ್ದರಿಂದಲೇ ಇದಕ್ಕೆ ಅಂಶಿ ಸಮಾಸವೆಂದು ಹೆಸರು.

(ಉದಾ: ಮೈಯ ಹೊರ= ಹೊರಮೈ,

ರಾತ್ರಿಯ ಮಧ್ಯ= ಮಧ್ಯರಾತ್ರಿ,

ಕಾಲಿನ ಮುಂದು= ಮುಂಗಾಲು,

ಮನೆಯ ಒಳ= ಒಳಮನೆ.

ಮನೆಯ ನಡು= ನಡುಮನೆ.

ಕಾಲಿನ ಹಿಂದು= ಹಿಂಗಾಲು

ಕೈಯ ಅಡಿ= ಅಂಗೈ)

ಈ ಸಮಾಸದ ವಿಶೇಷವೇನೆಂದರೆ ವಿಗ್ರಹವಾಕ್ಯದಲ್ಲಿನ ಪೂರ್ವಪದ ಉತ್ತರಪದಗಳು ಸಮಾಸವಾದಮೇಲೆ ಅದಲು ಬದಲಾಗುವುದು.

ಗಮಕ ಸಮಾಸ :

ಪೂರ್ವಪದವು ಸರ್ವನಾಮವಾದಲ್ಲಿ ಆ ಸಮಾಸಕ್ಕೆ ಗಮಕ ಸಮಾಸವೆನ್ನುವರು.

ಉದಾ: ಇದು ಹೊಲ = ಈ ಹೊಲ

ಅವಳು ಹೆಂಗಸು = ಆ ಹೆಂಗಸು

ಅವನು ಹುಡುಗ = ಆ ಹುಡುಗ.

ಕ್ರಿಯಾ ಸಮಾಸ:

ಉತ್ತರಪದವು ಕ್ರಿಯಾ ವಾಚಕವಾಗಿದ್ದರೆ ಅಂತಹ ಸಮಾಸವನ್ನು ಕ್ರಿಯಾ ಸಮಾಸವೆನ್ನುವರು. ಇಲ್ಲಿ ಪೂರ್ವಪದವು ದ್ವಿತೀಯ ವಿಭಕ್ತಿಯದಾಗಿದ್ದು, ದ್ವಿತೀಯ ತತ್ಪುರುಷ ಸಮಾಸವಾಗಿರುತ್ತದೆ.

ಉದಾ; ಕೈಮುಟ್ಟಿ = ಕೈಯನ್ನು ಮುಟ್ಟಿ.

ಕಣ್ಮುಚ್ಚಿ = ಕಣ್ಣನ್ನು ಮುಚ್ಚಿ.

ಕೈಮುಗಿದು = ಕೈಯನ್ನು ಮುಗಿದು

ಅರಿಸಮಾಸ:

ಸಮಾಸವಾಗುವಾಗಿನ ಎರಡೂ ಪದಗಳು ಸಂಸ್ಕೃತ ಮೂಲವಾಗಿದ್ದರೆ ಸಂಸ್ಕೃತ ಸಮಾಸವೆಂತಲೂ, ಕನ್ನಡ ಪದಗಳಾಗಿದ್ದರೆ ಕನ್ನಡ ಸಮಾಸವೆಂತಲೂ ವಿಂಗಡಿಸುತ್ತಾರೆ. ಕೆಲವೊಮ್ಮೆ ಕನ್ನಡ ಹಾಗೂ ಸಂಸ್ಕೃತ ಮೂಲಶಬ್ದಗಳು ಸೇರಿ ಸಮಾಸವಾಗುತ್ತವೆ. ಇಂತಹ ಸಮಾಸವನ್ನು ಅರಿಸಮಾಸ ಎನ್ನುತ್ತಾರೆ.

ಉದಾ: ಮಂಗಳದ (ಸಂಸ್ಕೃತ) + ಆರತಿ (ಕನ್ನಡ)=ಮಂಗಳಾರತಿ.

ಮಳೆಯ ಕಾಲ = ಮಳೆಗಾಲ

ದಳದ ಪತಿ = ದಳಪತಿ

ಎರಡು ಭಾಗ = ಇಬ್ಭಾಗ

ಬ್ರಹ್ಮನ ಗಂಟು = ಬ್ರಹ್ಮಗಂಟು

ಇಂತಹ ಸಂಸ್ಕೃತ ಶಬ್ದಗಳು ಈಗ ಕನ್ನಡ ಶಬ್ದಗಳೇ ಆಗಿರುವದರಿಂದ ಕನ್ನಡದಲ್ಲಿ ಅರಿಸಮಾಸ ತನ್ನ ಔಚಿತ್ಯವನ್ನು ಕಳೆದುಕೊಂಡಿದೆ.

***



ನವರಾತ್ರಿ – ಮನೆಮನೆಯಲ್ಲೂ ಬೊಂಬೆ ಹಬ್ಬ – ಶ್ರೀಮತಿ ಪದ್ಮ, ಧೀರೇಂದ್ರ ನಿವಾಸ

ಮರಳಿ ಅರಳು

– ಸ್ನೇಹ ಶಶಿಧರ

"ಹಳೆಯದೆಲ್ಲ ಮರೆತುಬಿಡು ಮಾಧುರಿ. ನನ್ನನ್ನು ಮದುವೆಯಾಗುತ್ತೀಯಾ", ಮುರಾರಿಯ ಮಾತಿಗೆ ಬಿಕ್ಕಿಸಿದಳು ಮಾಧುರಿ.

ಕೆಲ ವರ್ಷಗಳ ಹಿಂದೆ ಮಾಧುರಿಯನ್ನು ಮೊದಲ ಬಾರಿ ಅವಳು ಖಾತೆ ತೆರೆಯಲು ಬ್ಯಾಂಕಿಗೆ ಬಂದಾಗ ನೋಡಿದ್ದು. ಇನ್ನು ಇಪ್ಪತ್ತರ ಹರೆಯ. ಚಂಚಲ ನೋಟ. ಮಾತಿಗೆ ಮುಂಚೆ ನಗು. ಕಣ್ಣಿನಲ್ಲಿ ತುಂಟತನ. ಆಚೆ ಈಚೆ ಕಣ್ಣಾಡಿಸುತ್ತಲೇ ಅರ್ಜಿಯನ್ನು ಮುರಾರಿಯ ಮುಂದಿಟ್ಟು ಹೊದ್ದಿದ್ದ ದಾವಣಿಯ ಅಂಚು ಬೆರಳಿಗೆ ಸುತ್ತುತ್ತ ನಿಂತಳು.

"ವಯಸ್ಸೆಷ್ಟು?" ಮುರಾರಿಯ ನಿಷ್ಠುರ ಧ್ವನಿಗೆ ನಾಚುತ್ತ, "ಯಾಕೆ ಸರ್" ಎಂದು ನಲಿದಾಡಿದಳು. "ಅರೇ, ಇಲ್ಲಿ ಬರೀರಿ" ಎಂದ ಮುರಾರಿ. ಅಯ್ಯೋ ಎಂದುಕೊಂಡು ಬರೆದಳು ಮಾಧುರಿ. "ಮನೆಯೆಲ್ಲಿ?" ಈ ಪ್ರಶ್ನೆಗೆ "ಅರ್ಜಿಗಾ? ನಿಮಗೆ ಬೇಕಾ?" ಎಂದು ಕಣ್ಣು ಹೊಡೆದಳು. ಮುರಾರಿ ಸುಮ್ಮನೆ ಅರ್ಜಿಯನ್ನು ತೋರಿದ.

ನಲವತ್ತಾಗಿದ್ದರೂ ಮುರಾರಿ ಇನ್ನೂ ಇಪ್ಪತ್ತೈದು ವರ್ಷದ ಯುವಕನಂತೆ ಮೈಕಟ್ಟು ಇಟ್ಟುಕೊಂಡಿದ್ದರು. ಕಟ್ಟುಮಸ್ತಾದ ದೇಹ. ಗೋಧಿ ಬಣ್ಣ. ಪುಟ್ಟ ಪುಟ್ಟ ಕಣ್ಣುಗಳ ಮೇಲೆ ಫ್ರೇಂಲೆಸ್ ಕನ್ನಡಕ. ನೀಳವಾದ ಚೂಪು ಮೂಗು. ಪಡ್ಡೆ ಹುಡುಗರ ರೀತಿ ಗಡ್ಡ ಬಿಡದೆ, ನುಣ್ಣಗೆ ಷೇವ್ ಮಾಡಿದ್ದ ಜೇಂಟಲ್‌ಮ್ಯಾನ್ ಲುಕ್ಕು. ವಯಸ್ಸಿಗೆ ಬಂದಿರುವ ಹೆಣ್ಣುಮಕ್ಕಳು ಅವನನ್ನು ಒಮ್ಮೆಯಾದರೂ ತಿರುಗಿ ನೋಡದೆ ಹೋಗುತ್ತಿರಲಿಲ್ಲ. ಅವರು ಮದುವೆಯಾಗಿ ಹೆಂಡತಿಯನ್ನು ಕಳೆದುಕೊಂಡಿದ್ದಾರೆಂದು ಯಾರೂ ಊಹಿಸಲಸಾಧ್ಯ.

ಮರುದಿನ ಮಾಧುರಿಯ ತಂದೆ ಬ್ಯಾಂಕಿಗೆ ಬಂದು ಮಗಳನ್ನು ಓದಲು ವಿದೇಶಕ್ಕೆ ಕಳಿಸುತ್ತಿದ್ದೇನೆ ಎಂದು ಲೋನ್ ಪ್ರೋಸೆಸ್ ಮಾಡಿಸಿಕೊಂಡರು. ಅವರು ಬ್ಯಾಂಕಿನ ಹಳೆಯ ಗ್ರಾಹಕರು. ಆ ಹಳ್ಳಿಯ ಪ್ರಮುಖ ವ್ಯಕ್ತಿಗಳಲ್ಲೊಬ್ಬರು. ಬ್ಯಾಂಕ್ ಉದ್ಯೋಗಿಗಳಿಗೆ ಚಿರಪರಿಚಿತರು.

ಮಾಧುರಿ ವಿದೇಶ ತಲುಪಿದಳೆಂದು ಅವರಪ್ಪನಿಂದ ತಿಳಿಯಿತು. ಅವಳ ಬಗ್ಗೆ ಅಪ್ಡೇಟ್ಸ್ ಬರುತ್ತಲೇ ಇತ್ತು. ಸಾಮಾಜಿಕ ಜಾಲತಾಣದಲ್ಲೂ ಅವಳ ಚಿತ್ರಗಳು ಕಣ್ಣು ಕುಕ್ಕುತ್ತಿದ್ದವು. ಹಾಗೆ ಸುಮ್ಮನೆ, ಆಗೊಮ್ಮೆ ಈಗೊಮ್ಮೆ ಮುರಾರಿ ಅವಳ ಚಿತ್ರಗಳನ್ನು ನೋಡುತ್ತಿದ್ದ. ಅವಳ ನಗು ನೋಡಿದಾಗಲೆಲ್ಲ, ಮುರಾರಿಗೆ ಅವನ ಹೆಂಡತಿ ಇದ್ದಿದ್ದರೆ ಹೀಗೆ ಹೋದಲ್ಲೆಲ್ಲ ನಗೆ ಮೂಡಿಸುತ್ತಿದ್ದಳು ಎಂದು ಭಾಸವಾಗುತ್ತಿತ್ತು. ಹೆಂಡತಿಯ ಆಲೋಚನೆ ಬಂದೊಡನೆ, ಒಂದು ಕಡೆ ವಿರಹ, ಇನ್ನೊಂದು ಕಡೆ ತಾನು ವಿವಾಹಿತನೆಂದು ನೆನಪಾಗಿ ಮಧುರಿಯ ಚಿತ್ರಗಳನ್ನು ನೋಡುವುದು ಬಿಟ್ಟಿದ್ದ.

ಸುಮಾರು ಒಂದುವರೆ ವರ್ಷದ ಕಳೆದಿತ್ತೇನೋ. ಒಂದು ದಿನ ಸೋತು ಮುಖ ಮಾಡಿಕೊಂಡು ಮಾಧುರಿಯ ತಂದೆ ಬಂದು, "ಆ ದೇಶದಲ್ಲಿ ಏನೋ ಗಲಭೆ. ಆ ದೇಶದ ಜನರೆಲ್ಲ ಒಂದಾಗಿ ಅನ್ಯ ದೇಶದ ಜನರ ಮೇಲೆ ಹಲ್ಲೆ ಮಾಡುತ್ತಿದ್ದಾರಂತೆ. ತಾವು ಬಿಳಿಯರಾದರೆ ಅಷ್ಟೊಂದು ತೊಂದರೆ ಇಲ್ಲ. ಆಫ್ರಿಕಾದ ಕರಿಯರನ್ನು ಹೀನಾಯವಾಗಿ ಕೊಲೆ ಮಾಡುತ್ತಿದ್ದಾರೆ. ನಾವು ಇತ್ತ ಬಿಳಿಯೂ ಅಲ್ಲ, ಇತ್ತ ಕರಿಯೂ ಅಲ್ಲ. ಮಾಧುರಿ ಮತ್ತವಳ ಭಾರತೀಯ ಸ್ನೇಹಿತೆಯರನ್ನು ಹಾಳು ಮಾಡಿಬಿಟ್ಟರಂತೆ. ನನಗೆ ಒಬ್ಬಳೇ ಮಗಳು. ಏನ್ ಮಾಡೋದು ಗೊತ್ತಾಗುತ್ತಿಲ್ಲ. ಲೋನ್ ವಿಷ್ಯ ಮರೆತು ಬಂದ್ಬಿಡು ಪುಟ್ಟ ಅಂತ ಬೇಡ್ಕೊಂಡಿದ್ದೇನೆ. ನಾಳೆ ಬರ್ತಿದ್ದಾಳೆ", ಎಂದು ಅತ್ತುಬಿಟ್ಟರು. ಸುದ್ದಿ ಪತ್ರಿಕೆಗಳಲ್ಲಿ ನೋಡಿದ್ದು, ನಮಗೆ ತಿಳಿದವರಿಗೂ ಅನ್ವಯವಾಗುವುದೆಂದು ತಿಳಿದು ಸ್ವೀಕರಿಸಲು ಕಷ್ಟವಾಯಿತು.

ಎರಡು ದಿನದ ನಂತರ ಮಾಧುರಿ ಬಂದಳು. ಕೆಲವೇ ತಿಂಗಳಲ್ಲಿ ಮಾಧುರಿ ಬದಲಾಗಿಬಿಟ್ಟಿದ್ದಳು. ತುಂಟ ನೋಟ ಹೋಗಿ, ಕಣ್ಣಿನಲ್ಲಿ ಭಯ ತುಂಬಿತ್ತು. ನಗುವುದನ್ನು ಮರೆತೇಬಿಟ್ಟಿದ್ದಳು ಎನ್ನಿಸುತ್ತೆ. ಲಾವಣ್ಯವತಿ ಮಾಧುರಿ ಈಗ ಏನೋ ಕಳೆದುಕೊಂಡವಳಂತೆ ಮೂಲೆಯಲ್ಲಿ ಕೂತುಬಿಟ್ಟಿದ್ದಳು. ಅವಳನ್ನು ಮುಂಚಿನಿಂದ ಕಂಡ ಎಂಥವರಿಗೂ ಅವಳನ್ನು ಈ ಥರ ನೋಡೋಕೆ ಕಷ್ಟವಾಗುತ್ತಿತ್ತು.

ಮುರಾರಿಗೂ ಅವಳನ್ನು ನೋಡಿ ಆಶ್ಚರ್ಯ ಆಯಿತು. ಅವಳನ್ನು ಮೊದಲಿನಂತೆ ನಗುನಗುತ ಇರುವಂತೆ ನೋಡಲು ಮನಸ್ಸು ಹಂಬಲಿಸಿತು. ಅವನು ಎಲ್ಲೋ ಅವಳತ್ತ ಆಕರ್ಷಿತನಾಗಿದ್ದು, ತಡಮಾಡದೆ ಅವಳನ್ನು ಕೇಳಿಯೇಬಿಟ್ಟ, "ಹಳೆಯದೆಲ್ಲ ಮರೆತುಬಿಡು ಮಾಧುರಿ. ನನ್ನನ್ನು ಮದುವೆಯಾಗುತ್ತೀಯಾ?"

***



ನವರಾತ್ರಿ – ಮನೆಮನೆಯಲ್ಲೂ ಬೊಂಬೆ ಹಬ್ಬ – ಶ್ರೀಮತಿ ಸ್ನೇಹ ಶಶಿಧರ್ ನಿವಾಸ

ಪುಸ್ತಕ ಪರಿಚಯ

ಸಾ.ಕೃ. ರಾಮಚಂದ್ರರಾವ್ ವಿರಚಿತ

'ತಿರುಪತಿ ತಿಮ್ಮಪ್ಪ'


- ಪೂರ್ಣಿಮ ಭಗವಾನ್

ನಾಡು ಕಂಡ ಶ್ರೇಷ್ಠ ವಿದ್ವಾಂಸರು, ವಿದ್ಯಾಲಂಕಾರ, ಶಾಸ್ತ್ರ ಚೂಡಾಮಣಿ, ವೇದಾಂತನಿಧಿ, ಸಂಗೀತಕಲಾರತ್ನ, ವಾಚಸ್ಪತಿ, ಬಹುಭಾಷಾ ಪರಿಣತರೂ, ಇನ್ನೂರಕ್ಕೂ ಹೆಚ್ಚು ಕೃತಿಗಳ ಕರ್ತೃಗಳೂ ಆದ ಪ್ರೊ. ಸಾ.ಕೃ.ರಾಮಚಂದ್ರರಾಯರು ಬರೆದಿರುವ ಬೃಹದ್ ಗ್ರಂಥ "ತಿರುಪತಿ ತಿಮ್ಮಪ್ಪ" ದಿನಾಂಕ ೨೦೨೪ರ ಸೆಪ್ಟೆಂಬರ್ ಒಂದರಂದು ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ರಾಜವಂಶಸ್ಥರು ಹಾಗೂ ಮೈಸೂರು-ಕೊಡಗು ಲೋಕಸಭಾ ಸದಸ್ಯರೂ ಆದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಅಮೃತಹಸ್ತದಿಂದ ಪರಮಪೂಜ್ಯ ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರಪ್ಪ ವಾಗ್ಮಿ, ಬೇಲಿಮಠ ಮಹಾಸಂಸ್ಥಾನ ಅವರ ದಿವ್ಯ ಸಾನ್ನಿಧ್ಯದಲ್ಲಿ, ಹಿರಿಯ ವಿದ್ವಾಂಸರು, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ ಪುರಸ್ಕೃತರೂ ಆದ ಶ್ರೀ ಟಿ.ವಿ.ವೆಂಕಟಾಚಲ ಶಾಸ್ತ್ರಿಯವರ ಉಪಸ್ಥಿತಿಯಲ್ಲಿ ಲೋಕಾರ್ಪಣೆಯಾಯಿತು. ಗ್ರಂಥ ಪರಿಚಯವನ್ನು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮುಖ್ಯಸ್ಥರು, ಸಹಾಯಕ ಪ್ರಾಧ್ಯಾಪಕರೂ ಆದ ಶ್ರೀ ಶೆಲ್ವ ಪಿಳ್ಳೆ ಅಯ್ಯಂಗಾರ್ ರವರು ಮಾಡಿಕೊಟ್ಟರು.

"ತಿರುಪತಿ ತಿಮ್ಮಪ್ಪ"

(ವೇಂಗಡದೊಡೆಯನ ಗುಡಿಯನ್ನು ಕುರಿತ ಒಂದು ಸಮಗ್ರ ಅಧ್ಯಯನ)

ಮಹಾ ಕೃತಿಯು ಪಾರಂಪರಿಕ ನೆಲೆಯಲ್ಲಿ ನಾವೀನ್ಯತೆ ಬೆರೆಸಿರುವ ಮುಕುಟಮಣಿ. ಪ್ರೊ. ಸಾಲಿಗ್ರಾಮ ಕೃಷ್ಣ ರಾಮಚಂದ್ರರಾಯರು ಆಸ್ತಿಕರ ಪಾಲಿಗೆ ಪರಮಪವಿತ್ರವೆನಿಸಿರುವ ತಿರುಪತಿ ತಿಮ್ಮಪ್ಪ ಎಂದು ಪ್ರಖ್ಯಾತವಾಗಿರುವ ದೈವದ ನೆಲೆಯ ಬಗೆಗೆ, ಭೌಗೋಳಿಕ, ಪೌರಾಣಿಕ, ಸಾಂಸ್ಕೃತಿಕ, ಸಾಂಪ್ರದಾಯಿಕ ರೀತಿಯಲ್ಲಿ ಬೆಳಕು ಚೆಲ್ಲಿದ್ದಾರೆ. ಒಟ್ಟು ಹದಿನಾರು



ವಿಭಾಗಗಳಾಗಿ ವಿಂಗಡಿಸಿ ಶಾಸನಗಳು, ಪುರಾಣ ಕಥೆಗಳು, ಗ್ರಂಥಗಳು ಜನಬಳಕೆಯಲ್ಲಿ ಬಂದ ಪ್ರಸಂಗಗಳು, ಜಾನಪದ ಕ್ರಿಯೆಗಳು ಎಲ್ಲವನ್ನೂ ಆಧರಿಸಿ ಸವಿವರವಾಗಿ ಈ ಗ್ರಂಥವನ್ನು ರಚಿಸಿದ್ದಾರೆ. ಬಹು ಅಪರೂಪದ ಸುಂದರ ಚಿತ್ರಗಳನ್ನು ಅಳವಡಿಸಿದ್ದಾರೆ.

ವಿಷಯಾನುಕ್ರಮಣಿಕೆ

'ತಿರುಪತಿ ತಿಮ್ಮಪ್ಪ

ಲೇಖಕರು: ಶ್ರೀ ಸಾ.ಕೃ. ರಾಮಚಂದ್ರ ರಾವ್, ಪ್ರಕಾಶಕರು: ಅಭಿಜ್ಞಾನ
ಮೊದಲ ಮುದ್ರಣ : 1980, ವಿಸ್ತೃತ ಮರು ಮುದ್ರಣಗಳು: 2006, 2024,
ಪುಟಗಳು : 560, ಪುಸ್ತಕದ ಬೆಲೆ : ರೂ. 650

೧೧. ಕಾಸಿಗೆ ಆಸೆ ಪಡುವ ದೇವರು
೧೨. ಈಗಿರುವ ಗುಡಿ
೧೩. ಗರ್ಭಗುಡಿಯಲ್ಲಿರುವ ಮೂರ್ತಿಗಳು
೧೪. ಗುಡಿಯಲ್ಲಿ ನಡೆಯುವ ಪೂಜೆ
೧೫. ನಿತ್ಯಾರ್ಚನೆ
೧೬. ಹಿನ್ನೆಲೆಯ ಕೆಲವು ಕಥೆಗಳು

ಸಂಗೀತ ಕಲಾರತ್ನರೂ, ಹಲವು ಭಾಷಾ ಪರಿಣಿತರೂ ಆದ ಸಾ.ಕೃ. ರಾಮಚಂದ್ರರಾಯರು ಮುನ್ನುಡಿಯಲ್ಲಿ ತಿರುಪತಿ ತಿಮ್ಮಪ್ಪ ತಮ್ಮ ಕುಲದೈವ, ಇಷ್ಟ ದೈವ. ದೇವರ ಬಗ್ಗೆ ಏನೇ ವಿವಾದಗಳು ಇದ್ದರೂ ಸತ್ಯದ ಕುರಿತು ಮೂಲ ಅನ್ವೇಷಣೆಯಲ್ಲಿ ತೊಡಗಿಸಿಕೊಂಡಾಗ ರಾಗ ದ್ವೇಷ ಮತಗಳಲ್ಲಿರುವ ಅಭಿಪ್ರಾಯಗಳನ್ನು ಇತಿಹಾಸಕಾರರು ಹೇಳಬಾರದು, ಪೂರ್ವಗ್ರಹ ಪೀಡಿತರಾಗಬಾರದು. ಶಂಕರಾಚಾರ್ಯರು ತಿರುಮಲದಲ್ಲಿ ಶ್ರೀಚಕ್ರ ಸ್ಥಾಪನೆ ಮಾಡಿದ್ದಾರೆ ಎನ್ನುವುದಕ್ಕೆ ಯಾವುದೇ ಆಧಾರಗಳಿಲ್ಲ ಎಂದು ಅದನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಬೆಟ್ಟ, ಗುಡಿ, ದೈವ-ಈ ತ್ರಿಪುಟಿಯ ಬಗ್ಗೆ ಸಮಗ್ರ ದಾಖಲೆಗಳನ್ನು ಒದಗಿಸಿದ್ದಾರೆ.

ಬೆಟ್ಟಕ್ಕೊಂದು ಜೀವ ಇದೆ, ಅದರಲ್ಲೊಂದು ದೈವ ನೆಲೆಸಿದೆ ಎನ್ನುವ ನಂಬಿಕೆ ತುಂಬಾ ಹಳೆಯದು ಎಂದು ಆರಂಭವಾಗುತ್ತದೆ ಕೃತಿ. ಅದಕ್ಕೆ ಪೂರಕವಾಗಿ ಕೊರಿಯ, ಪರ್ಶಿಯ, ಚೀನಾ, ಜಪಾನ್ ಮುಂತಾದ ದೇಶಗಳಲ್ಲೂ ಸಹ ಬೆಟ್ಟಗಳನ್ನು ದೇವತಾ ಸ್ವರೂಪ, ದೇವತಾ ಸ್ಥಾನವೆಂದು ಪೂಜಿಸುತ್ತಾರೆ. ವೇದ ಯುಗಕ್ಕೆ ಮೊದಲೇ ಬೆಟ್ಟಗಳ ಆರಾಧನೆ ಬಳಕೆಯಲ್ಲಿತ್ತು. ಅವ್ಯಕ್ತವಾದ ದೈವಕ್ಕೆ ವ್ಯಕ್ತಾಕಾರವನ್ನು ಕೊಡುವ ಪ್ರತಿಮೆಗಳನ್ನು ಮಾಡಿಕೊಳ್ಳುವ ಮೊದಲು ಬೆಟ್ಟ, ನದಿ, ವೃಕ್ಷಗಳನ್ನು ಪೂಜಿಸುವ ಸಂಸ್ಕೃತಿ ಉಗಮವಾಯಿತು. ಋಗ್ವೇದದಲ್ಲಿ ಇರುವ ಗಿರಿಂ ಗಚ್ಛ ಸದಾನ್ವೇ ಎನ್ನುವ ಮಂತ್ರ ಪಾಪಗಳನ್ನು ತೊಳೆದುಕೊಳ್ಳಲು ಬೆಟ್ಟವನ್ನು ಏರಲು ಪ್ರೇರಣೆ.

ಬಹು ಪುರಾತನವಾದ ಏಳು ಬೆಟ್ಟಗಳ ಕೂಟ, ಒಂದೇ ಬೆಟ್ಟಕೂಟದ ಏಳು ಶಿಖರಗಳು. ಗುಡಿಯಿರುವುದು 2820 ಅಡಿ ಎತ್ತರದಲ್ಲಿ. ವೇಂಗಡ ಬೆಟ್ಟಕ್ಕೆ ತಿರುಮಲೆ ಎಂಬ ಹೆಸರು ಬಂದಿರಬಹುದಾದ ಸಾಧ್ಯತೆ ಎಲ್ಲವನ್ನೂ ಅಲ್ಲಲ್ಲಿ ದೊರೆತಿರುವ ಶಾಸನಗಳನ್ನು, ವೈದಿಕಮೂಲಗಳನ್ನು ಆಧರಿಸಿ ಸವಿವರವಾಗಿ ಚಿತ್ರಿಸಿದ್ದಾರೆ.

ವೇಂಗಡವು ಎತ್ತರವಾದ ಕಡಿದಾದ ಬೆಟ್ಟಗಳ ಸಾಲು. ಸುತ್ತಲೂ ದಟ್ಟವಾದ ಕಾಡುಗಳು, ಬಿದಿರುಮೆಳೆಗಳ ನಡುವೆ ಅಡ್ಡಾಡುವ ಆನೆಗಳ ಹಿಂಡು. ಅದನ್ನು ಹಿಡಿಯಲು ಓಡಿಯಾಡುವ ಕಾಡುಜನ ಕುರವರು. ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದ್ದ ಹುಲಿ, ಚಿರತೆ ಮುಂತಾದ ಕ್ರೂರಮೃಗಗಳ ವರ್ಣನೆ ಎಲ್ಲವನ್ನೂ ಆಳ್ವಾರರ ಪಾಶುರಗಳಲ್ಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ನಾಲ್ಕನೆಯ ಆಳ್ವಾರರು ಆ ಸಮಯದಲ್ಲಿ ಅಲ್ಲಿ ಗುಡಿ ಇರಲಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಸುತ್ತಲೂ ದಟ್ಟವಾದ ಕಾಡಿನ ನಡುವೆ ಕಾಡನ್ನು ಕಡಿದು ತಾನೇ ಎಡೆಮಾಡಿಕೊಂಡದ್ದು ದೈವ ನಮ್ಮ ಮೇಲೆ ತೋರಿರುವ ಕರುಣೆ ಎಂದು ಆಳ್ವಾರರು ಭಾವಿಸಿದ್ದರು. ವೇಂಗಡ ಎಂದರೆ ಪಾಪಗಳನ್ನೆಲ್ಲ ಕಳೆಯುವ ಬೆಟ್ಟ. ತಣ್ಣನೆಯ ಝರಿಗಳಿಂದ ತುಂಬಿರುವ ವೇಂಗಡವು ದೇವತೆಗಳಿಗೂ ಮಾನವರಿಗೂ ಬಳುವಳಿಯಂತಿದೆ ಎಂದು ಪಾಶುರಗಳಲ್ಲಿ ಬಣ್ಣಿಸಿದ್ದಾರೆ.

ವೆಂಕಟವೆಂಬ ಬೆಟ್ಟದ ಬೇಂಗಡ ಮುಂಡಯ್ಯನೆಂಬ ಬೆಟ್ಟದೊಡೆಯನ ಪ್ರಸ್ತಾಪ ಮೊಟ್ಟಮೊದಲಿಗೆ ಬರುವ ಆಳ್ವಾರರ ತಮಿಳು ಪ್ರಬಂಧಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ್ದಾರೆ. ವೇಂಗಡವು ಸುಪ್ರಸಿದ್ಧವಾದ ವಿಷ್ಣುಕ್ಷೇತ್ರವಾಗಿತ್ತು. ಬೆಟ್ಟಕ್ಕೆ ಈಗಿನ ಹೆಸರುಗಳಾದ ಶೇಷಾಚಲ, ಸಿಂಹಾಚಲ, ನಾರಾಯಣಾದ್ರಿ, ದೇವರಿಗೆ ಶ್ರೀನಿವಾಸನೆಂಬ ಹೆಸರು ಎಲ್ಲವೂ ಕಾಲಾನಂತರದಲ್ಲಿ ಪ್ರಚಲಿತವಾಗಿರುವುದು ಎಂದರುಹಿದ್ದಾರೆ.

ಆನಂತರದಲ್ಲಿ ಕುಲಶೇಖರ ಆಳ್ವಾರರು ತಾವು ಮುಂದಿನ ಜನ್ಮದಲ್ಲಿ ವೇಂಗಡದೊಡೆಯನ ಗುಡಿಯ ಹೊಸ್ತಿಲಾಗಿ ಹುಟ್ಟಬೇಕೆಂಬ ಬಯಕೆಯಿರುವುದಾಗಿ ಬರೆದಿರುವ ಪಾಶುರದ ಕೆಲವು ಸಾಲುಗಳಿಂದ ಅಲ್ಲಿ ಸಣ್ಣ ಗುಡಿಯಿದ್ದಿರಬಹುದು ಎನ್ನುವ ಸುಳುಹು ನೀಡುತ್ತದೆ. ಈಗಲೂ ಗುಡಿಯ ಹೊಸ್ತಿಲನ್ನು "ಕುಲಶೇಖರಪ್ಪಡಿ" ಎಂದೇ ಕರೆಯುತ್ತಾರೆ.

ಗುಡಿ ಹೇಗೆ ಬಂತೆಂಬ ಸ್ಪಷ್ಟ ವಿವರಣೆಯನ್ನು ನೀಡುತ್ತಾರೆ. ಒಂದು ಕಾಲದಲ್ಲಿ ದಟ್ಟ ಅರಣ್ಯದ ನಡುವೆ ಬೆಟ್ಟದಲ್ಲಿ ದೈವ ಪೂರ್ಣವಾಗಿ ತೆರೆದುಕೊಂಡಿತ್ತು. ಅಲ್ಲಿ ದೈವ ಮಾತ್ರ ನೆಲೆಸಿತ್ತು. ಯಾರು ಬೇಕಾದರೂ ಹೋಗಿ ಪೂಜೆ ಸಲ್ಲಿಸಬಹುದಾಗಿತ್ತು. ಕಾಡುಮೃಗಗಳು ಸಂಚಾರಿಸುತ್ತಿದ್ದ ನಿಬಿಡಾರಣ್ಯ ಪ್ರದೇಶದಲ್ಲಿ ಹೋಗಿ ದೈವದರ್ಶನ ಪಡೆಯುವುದೇ ಒಂದು ಮಹತ್ಕಾರ್ಯ ವಾಗಿತ್ತು. ಯಾವುದೇ ಜಾತಿಮತ ಮೇಲುಕೀಳುಗಳು ಇರಲಿಲ್ಲ. ನಂತರದ ವರ್ಷಗಳಲ್ಲಿ ರಾಜರ ಪ್ರವೇಶವಾದಾಗ ಕಲ್ಲಿನ ಕೋಟೆ ನಿರ್ಮಿಸಿದರು. ಆನಂತರದಲ್ಲಿ ಬಂದ ದೇವಾಲಯದ ಆಸ್ಥಾನಕಾರರು ಆರ್ಜಿತ ಸೇವೆಯ ಹೆಸರಿನಲ್ಲಿ ಹಣ ಸಂಪಾದನೆಗೆ ತೊಡಗಿದರು. ಹಣ ಕೊಟ್ಟು ದೇವರನ್ನು ನೋಡಬೇಕು ಎನ್ನುವುದು ಸರಿಯಾದ ಕ್ರಮವಲ್ಲ. ಜನಸಾಮಾನ್ಯರ ಅನುಕೂಲಕ್ಕಾಗಿ ಧರ್ಮದರ್ಶನ ಇರಲೇಬೇಕು ಎನ್ನುತ್ತಾರೆ.

ಗರ್ಭಗುಡಿಯ ನಕ್ಷೆ, ದೇವಾಲಯದ ಒಳಗಿರುವ ಮೂರ್ತಿಗಳ ಸಂಪೂರ್ಣ ವಿವರ ನೀಡಿದ್ದಾರೆ. ಸುಮಾರು ಎಂಟರಿಂದ ಎಂಟೂವರೆ ಅಡಿಗಳಷ್ಟು ಎತ್ತರವಿರುವ ಮೂಲಮೂರ್ತಿ ಶಿಲೆಯದ್ದೋ, ಮರದಿಂದ ಮಾಡಿದ್ದೋ ಎಂದು ಖಚಿತವಾಗಿ ಏನನ್ನೂ ಹೇಳುವುದು ಸಾಧ್ಯವಿಲ್ಲ. ಗರ್ಭಗುಡಿಯಲ್ಲಿ ಒಂದೇ ಒಂದು ವಿಗ್ರಹವಿದ್ದು, ಏಕಮೂರ್ತಿ ದೇವಾಲಯ ಎನ್ನಿಸಿಕೊಂಡಿದೆ.

ಜನಪದರಲ್ಲಿದ್ದ ವೇಂಗಡ ಎನ್ನುವುದು ಸಂಸ್ಕೃತಿಕರಣದಿಂದ ವೇಂಕಟ ಎಂದಾಯಿತು ಎಂದು ಸ್ಪಷ್ಟಪಡಿಸಿದ್ದಾರೆ. "ವೇಂ" ಎಂದರೆ ಪಾಪ, "ಕಟ" ಎಂದರೆ ಹೋಗಲಾಡಿಸುವುದು. "ವೇಂಕಟ" ಎಂದರೆ ಪಾಪಗಳನ್ನು ಹೋಗಲಾಡಿಸುವುದು.

ಕ್ಷೇತ್ರ ಮಹಾತ್ಮೆಗಳು, ಪುರಾಣ ಕಥೆಗಳೂ, ಪ್ರತೀತಿಗಳೂ ಒಂದರ ನಂತರ ಮತ್ತೊಂದು ಬೆಳೆದು, ಸುತ್ತಲಿನ ಕ್ಷೇತ್ರಗಳ ಮಹಾತ್ಮೆಯನ್ನು ಬಿತ್ತರಿಸಿ ಯಾತ್ರಿಕರಿಗೆ ಪುಣ್ಯ, ಗುಡಿಗೆ ಹಣ ಒದಗಿಸಿದವು.

ತಿರುಮಲ ದೇವಸ್ಥಾನಕ್ಕೆ ಕರ್ನಾಟಕದ ರಾಜಮನೆತನಗಳ ಕೊಡುಗೆ ಅಪಾರ. ವಿಜಯನಗರದ ಕೃಷ್ಣದೇವರಾಯ, ಅಚ್ಯುತ ರಾಯರಾದ ನಂತರ ಮೈಸೂರಿನ ರಾಜವಂಶಸ್ಥರು ನಿತ್ಯಾರ್ಚನೆಗೆ ಬೇಕಾಗುವ ಬೆಳ್ಳಿ, ಚಿನ್ನದ ಪಾತ್ರೆಗಳು, ಬಂಗಾರದ ತಟ್ಟೆಗಳು, ಉತ್ಸವಕ್ಕೆ ಬೇಕಾದ ಕೊಡೆ, ರತ್ನಾಹಾರಗಳು ಇನ್ನೂ ಮುಂತಾದ ಆಭರಣಗಳನ್ನು ಸಮರ್ಪಿಸಿದ್ದಾರೆ.

ತಮಿಳು ಸಂಸ್ಕೃತಿಯಿಂದ ಪ್ರಭಾವಿತವಾಗಿರುವ ಗುಡಿಯ ವಿಷಯಗಳನ್ನರಿಯಲು, ಆಳ್ವಾರರ ದಿವ್ಯ ಪ್ರಬಂಧಗಳ ಸಂಪೂರ್ಣ ಅಧ್ಯಯನಕ್ಕೆ ತಮಿಳು ಭಾಷೆಯನ್ನು ಚೆನ್ನಾಗಿ ತಿಳಿದಿರಬೇಕು. ದೇವಾಲಯದ ಪೂಜಾ ಪದ್ಧತಿಯನ್ನು ತಿಳಿಯಲು ವೈಖಾನಸ ಆಗಮ ಶಾಸ್ತ್ರ, ಸಂಸ್ಕೃತ ತಿಳಿದಿರಬೇಕು. ನಂತರದ ಪಾಂಚರಾತ್ರದ ಪದ್ಧತಿಯ ಜೊತೆಗೆ ದೇವಾಲಯವು ತೆಲುಗು ಪ್ರದೇಶದಲ್ಲಿ ಇರುವುದರಿಂದ ತೆಲುಗು ಬಲ್ಲವರಾಗಿರಬೇಕು.

ತಮಿಳು, ತೆಲುಗು, ಸಂಸ್ಕೃತ, ಕನ್ನಡ, ಆಂಗ್ಲಭಾಷೆ, ಪಾಲಿ, ಅರ್ದಮಾಗಧಿ, ಟಿಬೆಟನ್ ಭಾಷೆಗಳಲ್ಲಿ ಪರಿಣತರೂ, ವೈಖಾನಸ, ಆಗಮಶಾಸ್ತ್ರ, ಪ್ರತಿಮಾಶಾಸ್ತ್ರ, ಜಾನಪದ, ತಂತ್ರ, ಸಂಗೀತ, ಶಿಲ್ಪ, ಚಿತ್ರ, ಇತಿಹಾಸ ತಜ್ಞರೂ ಆದ ವಿದ್ಯಾಲಂಕಾರ ಶ್ರೀ ಸಾ.ಕೃ. ರಾಮಚಂದ್ರರಾಯರ ಗ್ರಂಥ "ತಿರುಪತಿ ತಿಮ್ಮಪ್ಪ" ಸಂಗ್ರಹ ಯೋಗ್ಯ ಪುಸ್ತಕವಷ್ಟೇ ಅಲ್ಲ, ಪ್ರತಿಯೊಬ್ಬ ಕನ್ನಡಿಗರೂ ಓದಲೇಬೇಕಾದ ಮಹಾನ್ ಗ್ರಂಥ.

ತಿರುಪತಿ ತಿಮ್ಮಪ್ಪ ಎನ್ನುವುದನ್ನು ಕೇಳಿದರೇ ಸಾಕು ಭಕ್ತಿಭಾವ ತಾನೇತಾನಾಗಿ ದೇಹದಲ್ಲಿ ಪ್ರವಹಿಸುತ್ತದೆ. ಅಂತಹದ್ದರಲ್ಲಿ ತಿರುಪತಿ ತಿಮ್ಮಪ್ಪ ನೆಲೆಸಿರುವ ಬೆಟ್ಟ, ಇತಿಹಾಸ, ಜಾನಪದ, ಆಳ್ವಾರರ ಪಾಶುರಗಳು, ದೇವತಾಮೂರ್ತಿ, ಗುಡಿ, ರಾಜಮನೆತನದ ಕೊಡುಗೆಗಳು, ಪೂಜಾ ಕೈಂಕರ್ಯಗಳು, ವಿಧಿ ವಿಧಾನಗಳು, ಅಪರೂಪದ ಚಿತ್ರಗಳು, ಶ್ರೀ ವೆಂಕಟೇಶ್ವರ ಅಷ್ಟೋತ್ತರ, ಶತನಾಮಾವಳಿಗಳು, ನಿತ್ಯಪೂಜಾ ಸೇವೆಗಳು ಎಲ್ಲದರ ಸಮಗ್ರ ಮಾಹಿತಿ ಒದಗಿಸುವ ಉತ್ತಮ ಗ್ರಂಥ "ತಿರುಪತಿ ತಿಮ್ಮಪ್ಪ"

'ತಿರುಪತಿ ತಿಮ್ಮಪ್ಪ' ಒಂದು ಅದ್ಭುತವಾದ ಪುಸ್ತಕ. "ಶ್ರೀಕೋಶ" ದ ಹಾಗೆ. ಪುಸ್ತಕ ಮನೆಯಲ್ಲಿದ್ದರೆ ಮುಂದೆ ಒಂದು ಒಳ್ಳೆಯ ದಿನ ಬಂದು ಓದಲು ಮನಸ್ಸಾದಾಗ ಓದಬಹುದು. ಸಮಗ್ರವಾದ ಇತಿಹಾಸ, ಜಾನಪದ ನಂಬಿಕೆಗಳು, ಪೂಜೆಗಳು ಎಲ್ಲದರ ಬಗ್ಗೆ ತಿರುಪತಿಯ ಅಧ್ಯಯನ ಮಾಡಬಹುದು. ಇದೊಂದು ಪ್ರಮುಖವಾದ ಆಕರ ಗ್ರಂಥ.

***

ಯಾರು ಹೆಚ್ಚು?

– ಶೀಲಾ ಅರಕಲಗೂಡು

ತಂದೆ ಹೆಚ್ಚೊ ತಾಯಿ ಹೆಚ್ಚೊ
ಕೇಳ ಬೇಡ ಮಗುವನು
ತಂದೆ ರಕ್ಷೆ ತಾಯ ಮಮತೆ
ಬಾಲನೆಂತು ಮರೆವನು

ಯಾವ ಕಾಲು ಚೆಂದವೆಂದು
ಕೇಳಲೆಲ್ಲಿ ಉತ್ತರ?
ಕೊಟ್ಟ ಕಾಲ್ಗಳನ್ನು ಬಳಸಿ
ಸಾಗಬೇಕು ಸರಸರ

ಕೈಗಳೆರಡು ಕೆಲಸ ಮಾಡೆ
ಒಂದಕೊಂದು ಪೂರಕ
ಮೇಲು ಕೀಳು ಎಂಬುದಿಲ್ಲ
ಶ್ರೇಷ್ಠವಿರಲು ಕಾಯಕ

ಘಟ್ಟಿ ಹಲ್ಲು ಸಾಲು ಸಾಲು
ನಡುವೆ ಮಿದುವು ನಾಲಿಗೆ
ಹೊಂದಿಕೊಂಡು ಜಗಿಯುತಿಹರು
ರುಚಿಸುವಂತೆ ಬಾಯಿಗೆ

ಮನಸು ಬುದ್ಧಿ ಕೂಡಿ ನಡೆಯೆ
ಗುರಿಯು ಸ್ಪಷ್ಟವೆನಿಪುದು
ನಾನು ತಾನು ಜಗಳವಾಡೆ
ಅರ್ಥಹೀನ ಬದುಕದು

ಪ್ರಕೃತಿ ಪುರುಷರಿಬ್ಬರಿಂದ
ಮುಂದುವರೆದ ಸಂತತಿ
ಆಗಬಹುದೆ ಮಿಲನವಿರದೆ
ಮುಂದೆ ನಮ್ಮ ಜಾಗೃತಿ

ಬಲದ ಬೆಟ್ಟ ಬಳುಕು ಬಳ್ಳಿ
ಎರಡು ಬೇಕು ಬದುಕಲಿ
ಬೆಲೆಯನೇಕೆ ಕಟ್ಟಬೇಕು
ಒಪ್ಪಬೇಕು ಮನದಲಿ

ಸೃಷ್ಟಿಕರ್ತ ಸೊಗದ ಸೃಷ್ಟಿ
ನಮಗೆ ಸಿಕ್ಕ ಭಾಗ್ಯವು
ಕಾಣದಿಹನು ಸೃಷ್ಟಿಕರ್ತ
ಗಮನಿಸವನ ಕಾರ್ಯವು

ಮಗುವಿನಂತೆ ನಾವು ಇಹೆವು
ಪರದ ಬ್ರಹ್ಮ ತಂದೆಯು
ಬೆಳೆಯಬೇಕು ಸೃಷ್ಟಿಯಂತೆ
ಆಕೆ ನಮ್ಮ ತಾಯಿಯು

ಒಟ್ಟಿನಲ್ಲಿ ಅರ್ಥವಿಷ್ಟೆ
ಭೇದ ಭಾವ ಮರೆಯುವ
ಹೆಚ್ಚು ಕಡಿಮೆ ಗಣನೆ ಬಿಟ್ಟು
ಸಾರ್ಥಕತೆಯ ಪಡೆಯುವ

***

ಸಣ್ಣ ಕತೆ

ನನ್ನ ಮದುವೆ

– ಎನ್.ವಿ.ರಘುರಾಂ

ನಾನು ಶಾಲೆಗೆ ಸೇರಿದ ಮೊದಲ ದಿನ ಒಂದು ಸ್ಲೇಟ್ ಮತ್ತು ಬಳಪ ತೆಗೆದುಕೊಂಡು ಹೋಗಿದ್ದೆ. ಅಕ್ಷರಗಳನ್ನು ಕಲಿತು, ನನ್ನ ಹೆಸರು ಬರೆಯಲು ಕಲಿತೆ. ಅಕ್ಷರಗಳನ್ನು ಕೂಡಿಸಿಕೊಂಡು ತಕ್ಕಮಟ್ಟಿಗೆ ಓದಲು ಕಲಿತೆ. ಗಾಂಧೀಜಿ ನಡೆಸಿದ ಉಪ್ಪಿನ ಸತ್ಯಾಗ್ರಹದ ಬಗ್ಗೆ ಬಂದ ಕರಪತ್ರವನ್ನು ನಾನೇ ಮನೆಯಲ್ಲಿ ಓದಿ ಹೇಳಿದ್ದೆ. ಆದರೆ ಮೂರನೆಯ ತರಗತಿಗೆ ಬಂದಾಗ ಓದುವುದಕ್ಕೆ ತರ್ಪಣ ಬಿಟ್ಟಾಯಿತು. ಮನೆಯಲ್ಲಿ ಆ ವೇಳೆಗೆ ಇದ್ದ ಆರು ಸಣ್ಣ ಮಕ್ಕಳನ್ನು ನೋಡಿಕೊಳ್ಳುವ ಕೆಲಸ ನನಗೆ ಸಿಕ್ಕಿತು. ನಾನೇ ಮನೆಗೆ ದೊಡ್ಡ ಹೆಣ್ಣು ಮಗಳು. ಆದರೆ ಅಮ್ಮನ ಮಡಿ ಮಾಡುವ ಅವಾಂತರಗಳಿಂದ ನನಗೆ ಅಡುಗೆ ಮನೆಗೆ ಜಾಸ್ತಿ ಪ್ರವೇಶ ಇರಲಿಲ್ಲ. ಮಕ್ಕಳಿಗೆ ಸ್ನಾನ ಮಾಡಿಸಿ ಬಟ್ಟೆ ಹಾಕೋದು, ಮನೆಯ ಹಿಂದೆ ಇದ್ದ ಕೆರೆಗೆ ಹೋಗಿ ಬಟ್ಟೆ ಒಗೆಯುವುದು, ಹಿತ್ತಲಲ್ಲಿ ಬಿಡುವ ಹೂವಿನ ಹಾರ ಕಟ್ಟಿ ಮನೆಯ ಹತ್ತಿರವಿದ್ದ ಈಶ್ವರನ ಗುಡಿಗೆ ಕೊಡುವುದು, ಕೆರೆಯ ಏರಿಯ ಮೇಲೆ ಕೂತು ಗೊದಮೊಟ್ಟೆಗಳು ಈಜಾಡುವುದನ್ನು ನೋಡುತ್ತಾ ಕಾಲ ಕಳೆದಿದ್ದೆ. ಹತ್ತು ವರ್ಷವಾದಾಗಲೇ ನನ್ನ ಮದುವೆಯ ಮಾತು ನಡೆಯಲು ಪ್ರಾರಂಭವಾಗಿತ್ತು.

'ಅಯ್ಯನೋರೆ, ಮಗಳ ಮದುವೆ ಯಾವಾಗ?' ಎಂದು ಊರ ಗೌಡರು ಕೇಳಿದರೆ, 'ಮೊದಲನೆಯ ಹೆಣ್ಣು ಮಗಳ ಮದುವೆಗೆ ನಾನು ಊರಿಗೆ ಕರೆದು ಊಟ ಹಾಕಿ, ತಾಂಬೂಲ ಕೊಡಬೇಕು. ಎಂಟುನೂರು ರೂಪಾಯಿ 'ತೆರ' ಯಾರು ಕೊಡುತ್ತಾರೋ ಅವರ ಜೊತೆ ಮದುವೆ ಮಾಡುತ್ತೇನೆ' ಎಂದು ಹೇಳುತ್ತಿದ್ದರು. ಇನ್ನೂರು, ಮುನ್ನೂರು, ಕೊನೆಗೆ ನಾನೂರು ರೂಪಾಯಿ ತನಕ 'ತೆರ' ಕೊಡುತ್ತೇವೆಂದು ಅನೇಕ ನೆಂಟರ ಸಂಬಂಧಗಳು ಬಂದವು. ಆದರೆ ಅಪ್ಪ ಅದಕ್ಕೆಲ್ಲ ಒಪ್ಪುತ್ತಿರಲಿಲ್ಲ.

ಮದುವೆ ಬಗ್ಗೆ ಮಾತುಕತೆ ನಡೆಯುತ್ತಿರುವಾಗಲೇ ಪಕ್ಕದ ಹಳ್ಳಿಯ ಮಹಾಬಲ ಎನ್ನುವವರಿಂದ ಬಂದ ಸಂದೇಶ ಅಪ್ಪನನ್ನು ಬಿಟ್ಟು ಉಳಿದವರ ನಿದ್ದೆ ಕೆಡಿಸಿತ್ತು. 'ನಾಳೆ ನಾನು ಹುಡುಗಿ ನೋಡಲು ಬರುತ್ತೇನೆ. ಮದುವೆ ಮಾಡಿಕೊಡಲು ಒಪ್ಪಿಕೊಂಡರೆ ಸರಿ, ಇಲ್ಲದಿದ್ದರೆ ಹುಡುಗಿಯನ್ನು ಎತ್ತಿಕೊಂಡು ಹೋಗುವುದೇ ಸೈ' ಎಂದು ಅವರು ಯಾರ ಕೈಲೋ ಹೇಳಿ ಕಳುಹಿಸಿದ್ದ ಮಾತು ಅಪ್ಪನಿಗೆ ತಲುಪಿತ್ತು. ಹುಡುಗಿ ನೋಡಲು ಬರಲಿ, ಏನಾದ್ರೂ ತಲೆಹರಟೆ ಮಾಡಿದರೆ ಒಂದು ಕೈ ನೋಡೇಬಿಡುವ ಎಂದು ಅಪ್ಪ ತಯಾರಾದರು. ಬೇಕಾದವರ ಹತ್ತಿರ ಮಾತನಾಡಿ ಮನೆಗೆ ಒಬ್ಬರಂತೆ ಬಡಿಗೆ ಹಿಡಿದುಕೊಂಡು ಮನೆಯ ಹತ್ತಿರ ಸುತ್ತುತ್ತಿರಬೇಕು, ಸಮಯ ಸಂದರ್ಭ ಬಂದರೆ ರಕ್ಷಣೆಗೆ ಅವರು ಬರುವುದು ಎಂದು ನಿಶ್ಚಯವಾಯಿತು. ಮಾರನೆಯ ದಿನ ಅವರು ಹೇಳಿಕಳುಹಿಸಿದಂತೆ ಹೆಣ್ಣು ನೋಡಲು ಕಮಾನು ಕಟ್ಟಿದ ಜೋಡೆತ್ತಿನ ಗಾಡಿಯಲ್ಲಿ ಬಂದರು. ಅಪ್ಪ ಎಂದಿನಂತೆ ಎಂಟು ನೂರು ರೂಪಾಯಿ 'ತೆರ' ಕೊಡುವುದಾದರೆ ಮುಂದಿನ ಮಾತು ಅಂದರು. ಊರಿನವರು ಒಳಗಡೆ ಏನಾಗುತ್ತಿದೆ ಎಂದು ಕಾತುರದಿಂದ ಕೈಯಲ್ಲಿ ಬಡಿಗೆ ಹಿಡಿದುಕೊಂಡು ಹೊರಗಡೆ ಕಾಯುತ್ತಿದ್ದರು. ಬಂದಿದ್ದ ಮಹಾಶಯನಿಗೆ ಬಡಿಗೆ ಹಿಡಿದುಕೊಂಡು ನಿಂತಿರುವ ವಿಷಯ ತಿಳಿದುಹೋಯಿತು. ಬಂದಿದ್ದ ಗಂಡು ಸಿಟ್ಟಿನಿಂದ ಒಂದೆರೆಡು ಮಾತನಾಡಿ ಎದ್ದು ಹೋದ. ಬಡಿಗೆ ಹಿಡಿದುಕೊಂಡು ಬಂದವರು ಕಾಫೀ ಕುಡಿದುಕೊಂಡು ಹೋದರು!

ನನ್ನ ಜೊತೆಯವರಿಗೆಲ್ಲಾ ಮದುವೆ ಆಗಿತ್ತು. ನನ್ನ ಮದುವೆ ಮುಂದೆ ಮುಂದೆ ಹೋಗುತ್ತಿರುವುದು ನನಗೆ ಯೋಚನೆ ಯಾಗಿತ್ತು. ಒಂದು ದಿನ ಇದ್ದಕ್ಕಿದ್ದಂತೆ ಮನೆಯಲ್ಲಿ ಮದುವೆಯ ತಯಾರಿ ಪ್ರಾರಂಭ ಮಾಡಿದರು. ನನ್ನ ಮದುವೆಯೇ ಇರಬಹುದೇ? ಯಾವ ಗಂಡೂ ನೋಡಲು ಬಂದೇ ಇಲ್ಲವಲ್ಲ! ಪಕ್ಕದ ಮನೆ ಭಾಗುವನ್ನು ಮದುವೆ ಮನೆಯೊಂದರಲ್ಲಿ ನೋಡಿದ ಪಕ್ಕದ ಹಳ್ಳಿಯ ದೀಕ್ಷಿತರು ಅವರ ಮಗನಿಗೆ ಮದುವೆ ಮಾಡಿಕೊಂಡು ಹೋದರಲ್ಲ. ಹಾಗೆ ನನಗೂ ಆಗುತ್ತಾ! ಆದರೆ ನನಗೆ ಯಾರು ತಮಾಷೆ ಮಾಡುವುದೋ, ಬಟ್ಟೆ ಕೊಡಿಸುವುದೋ ಮಾಡಲೇ ಇಲ್ಲವಲ್ಲ. ಮದುವೆ ಗೊತ್ತಾಗಿದ್ದರೆ ಅಮ್ಮ ಸಂತೋಷಪಡಬೇಕಲ್ಲವೇ? ಆದರೆ ಅವರು ಯಾಕೆ ಮೂಲೆಗೆ ಹೋಗಿ ಮುಸಿ, ಮುಸಿ ಅತ್ತು ಕಣ್ಣು ಒರೆಸಿಕೊಂಡು

ಬರುತ್ತಿದ್ದರು. ನಾನು ಮನೆ ಬಿಟ್ಟು ಹೋಗುತ್ತೀನಿ ಎಂದಿರಬಹುದೇ? ಮದುವೆ ಆಗಿ ಹೊರಟಾಗ ತಾನೇ ಎಲ್ಲರ ಮನೆಯಲ್ಲಿ ಅಳುವುದು. ಮದುವೆ ಮಾಡಲು ಗಂಡು, ಹೆಣ್ಣು ಬೇಕೇಬೇಕಲ್ಲ. ಈಗ ನಡೆಯುವುದು ನನ್ನ ಮದುವೆ ಅಲ್ಲದೆ ಇನ್ನಾರದ್ದು ಆಗಲು ಸಾಧ್ಯ? ಸಮಾಧಾನ ಮಾಡಿಕೊಂಡು ಮಲಗಿದೆ. ಆದರೆ ಗಂಡು–ಹೆಣ್ಣು ಯಾರೆಂದು ಯಾರಿಗೂ ಗೊತ್ತೇ ಆಗಲಿಲ್ಲ!

ಬೆಳಿಗ್ಗೆ ಬೇಗನೆ ಎಲ್ಲರೂ ಎದ್ದು ಅಣಿ ತಟ್ಟೆಗೆ ಅರಿಸಿನ, ಕುಂಕುಮ ತುಂಬಿ ತಯಾರಿ ಪ್ರಾರಂಭ ಮಾಡಿದರು. ಆಗ ಅಪ್ಪ ಠಾಕುಠೀಕಾಗಿ ಪೇಟ ಕಟ್ಟಿಕೊಂಡು, ಕಚ್ಚೆ ಪಂಚೆ ಉಟ್ಟುಕೊಂಡು ಬಂದರು. ಆಗ ಗೊತ್ತಾಯಿತು ಅಪ್ಪನೇ ಮದುವೆ ಗಂಡು ಎಂದು. ಅಮ್ಮನ ತಂಗಿಯ ಜೊತೆ ಅವರ ಮದುವೆಯಂತೆ! ಅಮ್ಮನ ತಂಗಿಯನ್ನು ನೋಡಿಕೊಳ್ಳಲು ಯಾರೂ ಇರಲಿಲ್ಲವಂತೆ. ಅದಕ್ಕೆ ಅಪ್ಪನೇ ಮದುವೆ ಆದರಂತೆ!

ನಂತರ ಹದಿನೈದು ದಿನ ಬಿಟ್ಟು ಇವರು ಕಾರಿನಲ್ಲಿ ಬಂದರು. ಉಳಿದವರ ತರಹ ಕಚ್ಚೆಪಂಚೆ ಉಟ್ಟುಕೊಂಡು ಬರದೆ, ಕಪ್ಪು ಬಣ್ಣದ ಸೂಟು, ಪಂಪ್ ಶೂ ಹಾಕಿಕೊಂಡು ಬಂದಿದ್ದರು. ನಮ್ಮಪ್ಪ ಹೇಳಿದ ಹಾಗೆ ಎಂಟು ನೂರು ರೂಪಾಯಿ 'ತೆರ' ಕೂಡ ಕೊಟ್ಟರಂತೆ. ಅಪ್ಪ ತನ್ನ ಆಸೆಯಂತೆ ಊರಿಗೆಲ್ಲಾ ಊಟ ಹಾಕಿಸಿ, ತಾಂಬೂಲ ಕೊಟ್ಟು ಸಂಭ್ರಮದಿಂದ ಮದುವೆ ಮಾಡಿ ಕೊಟ್ಟರು. ಮದುವೆ ಮಾಡಿಕೊಂಡು ಕಾರಿನಲ್ಲಿ ಪಕ್ಕದ ಜಿಲ್ಲೆಯ ಹಲಸಿನಹಳ್ಳಿಯ ಜಮೀನ್ದಾರರ ಮಡದಿಯಾಗಿ ಹೊರಟೆ. ಪ್ರಥಮ ಬಾರಿಗೆ ಕಾರಿನಲ್ಲಿ ಕೂತಿರುವುದಕ್ಕೆ ಸಂಭ್ರಮ ಒಂದು ಕಡೆಯಾದರೆ, ನನ್ನ ಓರಗೆಯವರಿಗೆ ಮದುವೆ ಆದರೂ ನನಗೆ ಆಗಿರಲಿಲ್ಲ ಎಂಬ ದೊಡ್ಡ ಕೊರಗು ನಿವಾರಣೆಯಾಗಿತ್ತು.

ಮನೆ ಮುಂದೆ ಸಾಕಷ್ಟು ಜನ ಸ್ವಾಗತಿಸಲು ಕಾದಿದ್ದರು. ಮೆಲ್ಲಗೆ ಕಾರಿನಿಂದ ಇಳಿದು ತಲೆ ತಗ್ಗಿಸಿಕೊಂಡು ಬಾಗಿಲ ಬಳಿ ಬಂದೆ. ಹೊಸ್ತಿಲ ಮೇಲೆ ಬೆಳ್ಳಿಯ ಸೇರಿನಲ್ಲಿ ಅಕ್ಕಿ ತುಂಬಿಸಿ ಇಟ್ಟಿದ್ದರು. ಬಾಗಿಲು ಬಳಿ ದೊಡ್ಡ ರೇಷ್ಮೆ ಸೀರೆ ಉಟ್ಟುಕೊಂಡು ಅಡ್ಡಿಕೆ, ಉದ್ದದ ಕಾಸಿನ ಸರ ಹಾಕಿಕೊಂಡು ಹೆಂಗಸೊಬ್ಬರು ನಿಂತಿದ್ದರು. ಅವರ ಪಕ್ಕ ಸುಮಾರು ಐದಾರು ವರ್ಷದ ಹೆಣ್ಣು ಮಗುವೊಂದು ಬಲಗಡೆ, ಸುಮಾರು ಮೂರು ವರ್ಷದ ಹೆಣ್ಣು ಮಗು ಎಡಗಡೆ ನಿಂತಿತ್ತು. ನಾನು ಸೇರನ್ನು ನಿಧಾನವಾಗಿ ಒದ್ದು ಒಳಗೆ ಪ್ರವೇಶ ಮಾಡುವುದನ್ನೇ ಕಾಯುತ್ತಿದ್ದ ಆ ಇಬ್ಬರು ಹೆಣ್ಣುಮಕ್ಕಳು ಒಂದು ನಿಮಿಷ ಆ ಕಡೆ, ಈ ಕಡೆ ನೋಡುತ್ತಾ ನಿಂತವು', ನಂತರ 'ಚಿಕ್ಕಮ್ಮss, ಚಿಕ್ಕಮ್ಮsss' ಎನ್ನುತ್ತಾ ನನ್ನ ಬಳಿ ಓಡಿ ಬಂದವು.

ಕಾರಿನ ಪಕ್ಕದಲ್ಲಿ ಕೂತಾಗ ಇವರು ನನಗಿಂತ ದೊಡ್ಡವರು ಎಂದು ಅನಿಸಿದ ಕಾರಣ ಈಗ ನನಗೆ ತಿಳಿಯಿತು.

***



ನವರಾತ್ರಿ – ಮನೆಮನೆಯಲ್ಲೂ ಹಬ್ಬ – ಡಾ.ಶುಭಶ್ರೀ ಪ್ರಸಾದ್ ನಿವಾಸ

ಪುಟ್ಟ ಕತೆ

ಯಾರವನು ತೇಜಸ್ವಿ?

- ಗಿರಿಜಾ ರಾಜ್ ಎಲ್.

"ಎಲ್ಲ ಮರೆತಿರುವಾಗ ಇಲ್ಲ ಸಲ್ಲದ ನೆವವ ಹೂಡಿ ಬರದಿರು ಮತ್ತೆ ಹಳೆಯ ನೆನಪೇ!"

ಹೌದು! ನೆನಪುಗಳು ಸವಿಯಾಗಿದ್ದರೆ, ಆಗಿಂದಾಗ ಮೆಲುಕು ಹಾಕಿ ಸುಖಪಡಬಹುದು. ಜೀವವನ್ನು ಹಿಂಡುವ ನೆನಪುಗಳೇಕೆ ಬೇಕು? ಅದು ಬೇಕು! ಇದು ಬೇಡ ಎನ್ನುವುದಕ್ಕೆ ನಾವು ಯಾರು? ದೇವರು ನೆನಪಿನ ಶಕ್ತಿಯನ್ನು ಕೊಟ್ಟಿರುವುದರಿಂದ ಕಹಿ ನೆನಪುಗಳು ಬಾಧಿಸುತ್ತಲೇ ಇರುತ್ತವೆ. ಆದರೆ ತನ್ನ ಜೀವಿತದ ಕೆಲವೇ ಸವಿನೆನಪುಗಳನ್ನು ತನ್ನೆದೆಯ ಮಂದಿರದ ಸ್ಮೃತಿ ಪೆಟ್ಟಿಗೆಯಲ್ಲಿಟ್ಟು ಕಾಪಾಡುತ್ತಿದ್ದಾಳೆ ನಿತಾಶಾ.

ಹೌದು! ಅವನು ಭೆಟ್ಟಿಯಾದುದು ಅಜಂತ ಎಲ್ಲೋರಾದ ಪ್ರವಾಸ ಸಂದರ್ಭದಲ್ಲಿ. ಅವನು ತನ್ನ ಸ್ವಾರ್ಥವಿಲ್ಲದ ಉಪಕಾರ ಗುಣದಿಂದ, ಮಾತಿನ ಚತುರತೆಯಿಂದ ಎಲ್ಲರಿಗೂ ಬೇಕಾದವನಾಗಿದ್ದ. ಬೋಗಿಯಲ್ಲಿಯ ಎರಡು ಪುಟ್ಟ ಮಕ್ಕಳು ಅವನಿಂದ ಸೆಳೆಯಲ್ಪಟ್ಟವರಂತೆ ಎಡಬಿಡದೆ ಜೊತೆಯಲ್ಲೇ ಇರುತ್ತಿದ್ದವು. ತನ್ನ ಬೋಗಿಯಲ್ಲಿದ್ದ ಯಾರಿಗೂ ಬೇಸರವಾಗಲು ಬಿಡದೆ ಸದಾ ನಗಿಸುತ್ತಿದ್ದ, ಸುಪ್ರಸನ್ನವಾಗಿಡುತ್ತಿದ್ದ. ನೀನು ಯಾರು? ಎಂದರೆ ನಾನೊಬ್ಬ ಅಲೆಮಾರಿ, ನನಗಾವ ಊರು ಕೇರಿ ಎಂದೇ ಹೇಳುತ್ತಿದ್ದ. ಅವನು ಮಾತಾಡದೇ ಇರುವ ವಿಷಯಗಳೇ ಇಲ್ಲ, ಅದೆಷ್ಟು ತಿಳವಳಿಕೆಯ ಸೌಗಂಧ ಅವನ ಮಾತಿನಿಂದ ಹೊರಡುತ್ತಿತ್ತು. ಅವನ ತೇಜಸ್ಸಿನ ಮುಖ ನೋಡುತ್ತ, ಮಾತು ಕೇಳುತ್ತ, ಎಲ್ಲರೂ ತಲೆದೂಗುತ್ತಿರುವ ದೃಶ್ಯವನ್ನು ನೋಡುವುದೇ ಒಂದು ಚೆಂದ. ಅಪಾರ ಜ್ಞಾನಿಯಾಗಿದ್ದರೂ ಎಳ್ಳಷ್ಟೂ 'ಅಹಂ' ಅವನ ಮಾತುಗಳಲ್ಲಿ ಕಾಣಲಿಲ್ಲ. ರೈಲು ಅಲ್ಲಲ್ಲಿ ನಿಂತಾಗ ತಮ್ಮ ಬೋಗಿಯ ವಯಸ್ಸಾದವರಿಗೆ, ದುರ್ಬಲರಿಗೆ ಏನು ಬೇಕಾದರೂ ಕ್ಷಣಾರ್ಧದಲ್ಲಿ ಇಳಿದು ತಂದುಕೊಡುತ್ತಿದ್ದ. ಇಳಿಯಬೇಕಾದವರಿಗೆ ಲಗೇಜನ್ನು ಎತ್ತಲು ಇಳಿಸಲು ಸಹಾಯ ಮಾಡುತ್ತಿದ್ದ. ಗಂಡನ ಮನೆಯವರ ಶೋಷಣೆಯಿಂದ ನಗುವುದನ್ನೇ ಮರೆತಿದ್ದಳು ನಿತಾಶ, ಇತರರನ್ನು ಒಂದಿಷ್ಟೂ ನೋಯಿಸದ ಅವನ ಶುದ್ಧ ಹಾಸ್ಯಕ್ಕೆ ಅವಳ ಹೃದಯ ಅರಳಿತು. ಅವನನ್ನೇ ನೋಡುತ್ತಾ, ಆ ಮಾತುಗಳನ್ನು ಕೇಳುತ್ತಾ, ಅವನ ಸೇವೆ ಮಾಡುತ್ತಾ ಉಳಿದ ಜೀವನವೆಲ್ಲಾ ಕಳೆದುಬಿಡಬೇಕು ಎನಿಸುತ್ತಿತ್ತು. ಈ ವಿಚಿತ್ರ ಯೋಚನೆಗಳಿಗೆ ಅವಳಿಗೆ ನಗು ಬರುತ್ತಿತ್ತು. ಅದು ಸಾಧ್ಯವೇ? ಅವನು ಇಳಿಯುವ ಸ್ಥಳ ಬಂದಾಗ ಅವನು ಇಳಿದು ಹೊರಟು ಹೋಗುತ್ತಾನೆ, ಇಲ್ಲಿ ಯಾರೂ ಉಳಿದುಕೊಳ್ಳಲಾಗದು. ಎಲ್ಲರೂ ಅವರವರ ಗಮ್ಯ ಬಂದಾಗ ಇಳಿಯಲೇಬೇಕು.

ಅವಳು ಮುಖ ತೊಳೆಯುವ ಸಿಂಕಿನ ಬಳಿಗೆ ಹೋಗುತ್ತಿದ್ದಾಗ ಎದುರಿಗೆ ಸಿಕ್ಕ ಅವನು, "ಸದಾ ನೋವಿನಲ್ಲಿ ನಿಮ್ಮ ಮುಖ ಬಾಡಿರುತ್ತದೆ. ಬಂದದ್ದು ಬರಲಿ, ಸಂತಸದಿಂದ ಎದುರಿಸಿ, ಅದೇನು ಶಾಶ್ವತ ಅಲ್ಲ, ಅದಕ್ಕೂ ಕೊನೆ ಇರುತ್ತದೆ, ಕಾಯಬೇಕು ಅಷ್ಟೇ! ಯಾರೂ ದುಃಖಿತರಾಗುವುದು ನನಗಿಷ್ಟವಿಲ್ಲ! ಯಾರಿಗೂ ಏನೂ ಕೊಡದೆ ದೇವರು ಬರಿಗೈಯಲ್ಲಿ ಕಳುಹಿಸಿಲ್ಲ. ನಿಮ್ಮಲ್ಲಿಯೇ ಇರುವ ಪ್ರತಿಭೆ ಹುಡುಕಿ. ನಿಮಗೆ ಖುಷಿ ನೀಡುವುದರ ಕಡೆ ಗಮನ ನೀಡಿ, ಅದು ಶಾಂತಿ, ತೃಪ್ತಿಗಳನ್ನು ನೀಡುತ್ತದೆ" ಎಂದಿದ್ದ. ಮುಂದಿನ ದಿನಗಳಲ್ಲಿ ಅವಳು ಅವನ ಸಲಹೆಗಳನ್ನು ಅಳವಡಿಸಿಕೊಂಡಿದ್ದಳು.

ಅವನು ಇಳಿಯುವ ಮುನ್ನ ಹೇಳಿದ ಒಂದು ಸತ್ಯ ಎಲ್ಲರನ್ನೂ ದಂಗುಬಡಿಸಿತು.

ಪದೇ ಪದೇ ಕೆಲವರು ಅವನ ವೈಯಕ್ತಿಕ ವಿಚಾರಗಳನ್ನು ಕೆದಕುತ್ತಿದ್ದರೂ ಅವನು ಏನೂ ಹೇಳಿರಲಿಲ್ಲ. ಆದರೆ ಇಳಿಯುವ ಮುನ್ನ ಹೇಳಿದ, "ಅಪಘಾತವೊಂದರಲ್ಲಿ ನನ್ನ ಇಡೀ ಕುಟುಂಬ ಅಂದರೆ ತಾಯಿ, ತಂದೆ, ಇಬ್ಬರು ತಮ್ಮಂದಿರು, ಒಬ್ಬ ತಂಗಿಯನ್ನು ಕಳೆದುಕೊಂಡೆ. ನನ್ನೊಬ್ಬನನ್ನು ಆ ದೇವರು ಉಳಿಸಿಬಿಟ್ಟ. ನೊಂದವರು, ವಯಸ್ಸಾದವರು, ವಿಕಲಚೇತನರು

ಎಲ್ಲಿದ್ದರೆ ನಾನಲ್ಲಿ ಇರುತ್ತೇನೆ, ನನ್ನ ಕೈಯಲ್ಲಿ ಸಾಧ್ಯವಾದ ಸೇವೆ ಮಾಡುತ್ತೇನೆ, ನಾನು ಎಲ್ಲರಿಗೂ ಸೇರಿದವನು, ಎಲ್ಲರೂ ನನ್ನವರು, ನನ್ನನ್ನು ಎಲ್ಲರೂ ಪ್ರೀತಿಸುತ್ತಾರೆ, ನಾನು ಕಳೆದುಕೊಂಡ ತಾಯ್ತಂದೆಯರು, ತಮ್ಮಂದಿರು, ತಂಗಿಯನ್ನು ನಾನು ಎಲ್ಲರಲ್ಲೂ ಕಾಣುತ್ತೇನೆ" ಎಂದು ಕೈ ಮುಗಿದು ನಿಷ್ಕಲ್ಮಷ ತೇಜ ಸೂಸುವ ನಗೆ ಬೀರಿ ಆ ತೇಜಸ್ವಿ ನಿರ್ಗಮಿಸಿದ. ಅಲ್ಲಿಯವರೆಗೂ ಅಲ್ಲಿದ್ದ ಒಂದು ದೈವೀಕ ಸೌಗಂಧ, ಅಲ್ಲಿಂದ ಮರೆಯಾದಂತೆ ಎನಿಸಿತು. "ಆ ಜೀವ ಎಲ್ಲಿದ್ದರೂ ಸದಾ ಸಂತಸದಿಂದಿರಲಿ ದೇವರೇ ಎಂದು ಕಣ್ಮುಚ್ಚಿ ಧ್ಯಾನಿಸಿದಳು ನಿತಾಶ. ಅವಳ ಹಾಗೆಯೇ ಅಲ್ಲಿದ್ದ ಎಲ್ಲರೂ ಅವನಿಗೆ ಒಳಿತನ್ನೇ ಹಾರೈಸಿರಬಹುದು.

***

ಗಣಪನಿಗೆ ಬೇಡಿಕೆ

(ಮೋದಕ ವೃತ್ತದಲ್ಲಿದೆ)

– ಶೀಲಾ ಅರಕಲಗೂಡು

ನಾಡಿನ ಹಬ್ಬಕೆ ಬಂದಿಹೆ ದೇವಾ
ನೀಡುವೆ ತಂದಿಹ ಖಾದ್ಯವನೆಲ್ಲಾ
ಬೇಡುವೆ ಪಾಡುವೆ ಕಾಡುವೆನಯ್ಯಾ
ತೀಡುತ ನನ್ನನು ತಿದ್ದು ಗಣೇಶಾ ॥ ೧ ॥

ಗೌರಿಯ ಪುತ್ರನೆ ಬಂಧುವು ನೀನೂ
ತಾರಕ ಮಂತ್ರವ ಪಾಡುತ ಬಾ ಬಾ
ನಾರಿಯರೆಲ್ಲರು ಕೂಡಿಹರಿಲ್ಲೀ
ಸೂರನು ನಿರ್ಮಿಸಿ ಪೂಜಿಸಲಲ್ಲೀ ॥ ೨ ॥

ತೋಷದ ಹಬ್ಬಕೆ ಬಂದಿಹರೆಲ್ಲಾ
ಘೋಷಣೆ ಕೂಗುತ ಶಂಖವನೂದೀ
ಭೂಷಿತರಾಗಿಯೆ ಕಾದಿಹರಲ್ಲಾ
ಮೂಷಿಕ ವಾಹನವೇರುತ ಬಾರೋ ॥ ೩ ॥

ಮೋದಕ ಹಸ್ತವ ಚಾಚುತ ನೀ ಬಾ
ಸಾಧಕ ಬಾಧಕವೆಲ್ಲವ ತೋರೋ
ಬೋಧಿಸಿ ವಿದ್ಯೆಯ ಬುದ್ಧಿಯ ಕೊಟ್ಟೂ
ಸಾಧನೆ ಮಾಡುವ ಶಕ್ತಿಯ ನೀಡೋ ॥ ೪ ॥

ನಿನ್ನನು ಬಿಟ್ಟಿರಲಾರೆ ಗಣೇಶಾ
ನನ್ನನು ನೀ ಬಿಡಬೇಡ ಗಣೇಶಾ
ನಿನ್ನಯ ಪಾದದ ಸನ್ನಿಧಿಯಲ್ಲೇ
ಬಿನ್ನಹ ಮಾಡಿಹೆನಾಲಿಸೊ ನೀನೂ ॥ ೫ ॥

****

ಕನ್ನಡ ಸಾರಸ್ವತಲೋಕದ ಸರ್ವಕುತೂಹಲಿ
ಡಾ. ಕೃಷ್ಣಾನಂದ ಕಾಮತ್

– ಮಹಾಬಲ



ಡಾ. ಬಿ.ಜಿ.ಎಲ್.ಸ್ವಾಮಿಯವರಂತೆ, ಪೂರ್ಣಚಂದ್ರ ತೇಜಸ್ವಿಯವರಂತೆ ತಮ್ಮ ಕಲಿಕೆಯ ಕೇಂದ್ರ ವಿಚಾರವನ್ನಷ್ಟೇ ಅಲ್ಲದೆ ಇತರ ಹಲವಾರು ಸಮಾಜೋಪಯೋಗಿ ಕ್ಷೇತ್ರಗಳಲ್ಲೂ ಕುತೂಹಲ ಹಾಗೂ ಆಸಕ್ತಿಯನ್ನು ಇರಿಸಿಕೊಂಡು ಪ್ರಾಂಜಲವಾಗಿ ಸಾಧನೆ ಮಾಡಿದ ಕನ್ನಡದ ಕೆಲವೇ ಸಾರಸ್ವತ ಮಾನ್ಯರಲ್ಲಿ ಕೃಷ್ಣಾನಂದ ಕಾಮತ್ ಅವರೂ ಒಬ್ಬರು.

ಡಾ ಕಾಮತ್ ಅವರು ೧೯೩೪ರ ಸಪ್ಟೆಂಬರ್ ೨೯ರಂದು ಜನಿಸಿದರು. ಊರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ. ತಂದೆ ಲಕ್ಷ್ಮಣ ವಾಸುದೇವ ಕಾಮತ್, ತಾಯಿ ರಮಾಬಾಯಿ.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕೀಟ ವಿಜ್ಞಾನದಲ್ಲಿ ಎಂಎಸ್ಸಿ ಪದವಿ, ಅಮೇರಿಕಾದ ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಪರಿಸರ ಮತ್ತು ಅರಣ್ಯ ವಿಜ್ಞಾವ ವಿಷಯದಲ್ಲಿ ಪಿಎಚ್.ಡಿ ಪದವಿ ಪಡೆದಿದ್ದಾರೆ. ರಾಜಸ್ಥಾನದ ಉದಯಪುರ ವಿಶ್ವವಿದ್ಯಾಲಯದ ಜೋಬ್ನೇರ ಕೃಷಿ ಕಾಲೇಜಿನಲ್ಲಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಪಶ್ಚಿಮ ಬಂಗಾಳದ ಪ್ಲಾಸಿಯಲ್ಲಿ ಕಾಮನ್ ವೆಲ್ತ್ ಇನ್ಸ್ಟಿಟ್ಯೂಟ್ ಆಫ್ ಬಯಾಲಜಿಕಲ್ ಕಂಟ್ರೋಲ್ ಸಂಸ್ಥೆಯಲ್ಲಿ ಶಾಖೆಯ ಮೇಲ್ವಿಚಾರಕರಾಗಿ ಎರಡು ವರ್ಷ ಸೇವೆ ಸಲ್ಲಿಸಿದ್ದಾರೆ. ೧೯೭೧ರಲ್ಲಿ ನೌಕರಿಗೆ ರಾಜೀನಾಮೆ ನೀಡಿ ವೈಜ್ಞಾನಿಕ ಛಾಯಾಚಿತ್ರ ಗ್ರಾಹಕರಾಗಿ ಸ್ವತಂತ್ರ ಜೀವನ ಕೈಗೊಂಡಿದ್ದರು.

ಕೃಷ್ಣಾನಂದ ಕಾಮತರು ಪ್ರವಾಸ ಕಥನ, ವಿಜ್ಞಾನ, ಜನಾಂಗೀಯ ಅಧ್ಯಯನ, ಕಲೆ, ಪರಿಸರ ಮೊದಲಾದ ವಿಷಯಗಳ ಬಗ್ಗೆ ಪುಸ್ತಕಗಳನ್ನೂ, ನೂರಾರು ಲೇಖನಗಳನ್ನೂ ಪ್ರಕಟಿಸಿದ್ದಾರೆ. ಕೃಷ್ಣಾನಂದ ಕಾಮತರ ಪತ್ನಿ ಶ್ರೀಮತಿ ಜ್ಯೋತ್ಸ್ನಾ ಕಾಮತ್ ಅವರು ಸಹ ಸಂಶೋಧಕಿ, ಲೇಖಕಿ ಹಾಗೂ ಆಕಾಶವಾಣಿಯ ವಿವಿಧ ನಿಲಯಗಳಲ್ಲಿ ಕಾರ್ಯನಿರ್ವಹಿಸಿ ನಿಲಯ ನಿರ್ದೇಶಕರಾಗಿ ನಿವೃತ್ತರಾದವರು.


ಕೃಷ್ಣಾನಂದ ಕಾಮತ್ ಅವರ ಕೃತಿಗಳು– ವಂಗದರ್ಶನ (ಬಂಗಾಲ ಕುರಿತು), ಪ್ರೇಯಸಿಗೆ ಪತ್ರಗಳು, ಮರುಪಯಣ, ಪತ್ರ-ಪರಾಚಿ, ಭಗ್ನಸ್ವಪ್ನ (ಕಾದಂಬರಿ), ನಾ ರಾಜಸ್ಥಾನದಲ್ಲಿ, ಕಲೆ-ಕಾವಿಕಲೆ, ಅಕ್ಷತ, ಇರುವೆಯ ಇರುವು, The Timeless Theater, ಕಾಗೆಯ ಕಾಯಕ, ಪ್ರವಾಸಿಯ ಪ್ರಬಂಧಗಳು, ಕೊಂಕಣ್ಯಾಲಿ ಕಾವಿಕಲಾ (ಕೊಂಕಣಿ ಭಾಷೆ). ೧೯೭೬ರಲ್ಲಿ ಒಂದು ವರ್ಷಕಾಲ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಶಿಷ್ಯವೇತನ ಪಡೆದು ಮಧ್ಯಪ್ರದೇಶದಲ್ಲಿ ಗಿರಿವಾಸಿ ಜನಾಂಗಗಳ ಅಧ್ಯಯನ ಮಾಡಿ ಅಲ್ಲಿನ ಬಗ್ಗೆ ಮೂರು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಂದರೆ ಕಾಲರಂಗ, ಬಸ್ತರ ಪ್ರವಾಸ (ಗಿರಿಜನರ ಪರಿಚಯ), ಮಧ್ಯಪ್ರದೇಶದ ಮಡಿಲಲ್ಲಿ.

ಇವಷ್ಟೇ ಅಲ್ಲದೆ ಪರಿಸರ, ಪ್ರಾಣಿ, ಸಸ್ಯ ವಿಜ್ಞಾನಗಳ ಕುರಿತಾಗಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಪ್ರಾಣಿ ಪ್ರಪಂಚ, ಪಶುಪಕ್ಷಿ ಪ್ರಪಂಚ, ಕೀಟ ಜಗತ್ತು, ಸಸ್ಯ ಪ್ರಪಂಚ, ಸಸ್ಯ ಪರಿಸರ, ಪ್ರಾಣಿ ಪರಿಸರ, ಸರ್ಪಸಂಕುಲ ಮತ್ತು ಅವರ ಪ್ರವಾಸ ಕಥನವಾದ. 'ನಾನೂ ಅಮೆರಿಕೆಗೆ ಹೋಗಿದ್ದೆ' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಸಾಹಿತ್ಯ ಕ್ಷೇತ್ರದ

ಸಾಧನೆಗಾಗಿ ಗೌರೀಶ ಕಾಯ್ಕಿಣಿ ಪ್ರತಿಷ್ಠಾನದ ಪ್ರಶಸ್ತಿ, ಟಿ.ಎಂ.ಎ. ಪೈ ಪ್ರತಿಷ್ಠಾನ ವಿಶೇಷ ಬಹುಮಾನ ಸೇರಿದಂತೆ ಹಲವಾರು ಪ್ರಶಸ್ತಿ, ಗೌರವಗಳು ಲಭಿಸಿವೆ.

ನ್ಯೂಯಾರ್ಕ್ ವಿಶ್ವವಿದ್ಯಾಲಯದಂಥ ಪ್ರಖ್ಯಾತ ಸಂಸ್ಥೆಯಿಂದ ಡಾಕ್ಟರೇಟ್ ಪದವಿ ಪಡೆದಿದ್ದ ಕಾಮತರು ಅಲ್ಲೇ ನೆಲೆಸಿ ಉನ್ನತ ಹುದ್ದೆಗಳನ್ನು ನಿರ್ವಹಿಸಬಹುದಿತ್ತು. ಆದರೆ ಸ್ವದೇಶದ ಸೆಳೆತದಿಂದಾಗಿ ಅವರು ಭಾರತಕ್ಕೆ ವಾಪಸಾದರೂ ಅವರ ಪ್ರತಿಭೆಗೆ ತಕ್ಕುದಾದ ಹುದ್ದೆಗಳಾಗಲೀ ಮನ್ನಣೆಗಳಾಗಲೀ ಅವರಿಗೆ ಸಲ್ಲಲಿಲ್ಲ ಎಂಬುದು ಸಾರಸ್ವತಲೋಕದ ದುರಂತವೆಂದೇ ಹೇಳಬೇಕು. ಆದರೂ ಇವಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದ ಕೃಷ್ಣಾನಂದ ಕಾಮತರು ತಮ್ಮ ಪ್ರೀತಿಯ ಹವ್ಯಾಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಇತರ ಆಸಕ್ತರಿಗೂ ಮಾರ್ಗದರ್ಶಿಸಿ ಆತ್ಮಸಂತೋಷಪಟ್ಟರು

ಸರಳ ಉಡುಗೆತೊಡುಗೆ, ಮಿತಭಾಷೆ ಕಾಮತರ ಬದುಕಿನ ಅವಿಭಾಜ್ಯ ಅಂಗಗಳಾಗಿದ್ದವು. ಅವರ ಹಾಸ್ಯ ಪ್ರಜ್ಞೆ ಕುರಿತೂ ಹಲವಾರು ಸ್ವಾರಸ್ಯಕರ ಪ್ರಸಂಗಗಳಿವೆ.



ಒಮ್ಮೆ ಯಾರೋ 'ಕಾಮತ್ ಅವರಿದ್ದಾರಾ?' ಎಂದು ಕೇಳಿಕೊಂಡು ಬಂದಾಗ. ''ನೀವು ದಾರಿ ತಪ್ಪಿ ಇತಿಹಾಸಕಾರ ಸೂರ್ಯನಾಥ ಕಾಮತ್ ಮನೆಗೆ ಹೋಗಬೇಕಾದವರು ಇಲ್ಲಿ ಬಂದಿರಬೇಕು. ನನಗೆ ಅವರ ವಿಳಾಸ ಗೊತ್ತು, ಕೊಡ್ತೇನೆ.'' ಎನ್ನುತ್ತಾರೆ ಕಾಮತ್. ಬಂದವರು ''ಇಲ್ಲ, ನಮಗೆ ಬೇಕಾದ್ದು ಕೃಷ್ಣಾನಂದ ಅವರೇ'' ಎಂದಾಗ ''ಹಾಗಾದರೆ ಒಳಗೆ ಬನ್ನಿ'' ಎನ್ನುತ್ತಾರಂತೆ ಕಾಮತರು.

ಮಲ್ಲೇಶ್ವರದ ತರಕಾರಿ ಮಾರುಕಟ್ಟೆಯಲ್ಲಿ ಇವರು ನಿತ್ಯ ಸೀಳಿದ ತೆಂಗಿನಕಾಯಿ ಕೊಳ್ಳುತ್ತಿದ್ದರಂತೆ. ಅಲ್ಲಿನ ವ್ಯಾಪಾರಿಗಳೆಲ್ಲ ಇವರನ್ನು 'ಸೀಳುಕಾಯಿ ಸ್ವಾಮಿ' ಎಂದೇ ಕರೆಯುತ್ತಿದ್ದರಂತೆ. ಒಮ್ಮೆ ಕಾಮತರ ಸಂದರ್ಶನ ಉದಯ ಟಿವಿಯಲ್ಲಿ ಪ್ರಸಾರವಾಯಿತಂತೆ. ಮಾರನೆಯ ದಿನ ಕಾಮತರು ಮಾರುಕಟ್ಟೆಗೆ ಹೋದಾಗ ವ್ಯಾಪಾರಿಗಳು, 'ಇದೇ ಸೀಳುಕಾಯಿ ಸ್ವಾಮಿ ನಿನ್ನೆ ಟಿ.ವಿ.ಯಲ್ಲಿ ಬಂದಿದ್ದ' ಎಂದು ಮಾತನಾಡಿಕೊಂಡರಂತೆ.

ಒಮ್ಮೆ ನೆರೆಯವರ ಮನೆಯಲ್ಲಿ ಹಾವು ಬಂದಿತಂತೆ. ಕಾಮತರು ಕುತೂಹಲದಿಂದ ತಮ್ಮ ಕ್ಯಾಮರಾ ಸಮೇತ ಅಲ್ಲಿ ಹೋದರಂತೆ. ಇದನ್ನು ಕಂಡು ಪತ್ನಿ ಜ್ಯೋತ್ಸ್ನಾ ಕಾಮತ್ ಅವರು, ''ಕುಡುಕರಿಗೆ ಸೆರೆಬಾಟ್ಲಿ ಇದ್ದಂತೆ ನಮ್ಮ ಯಜಮಾನರಿಗೆ ಕ್ಯಾಮರಾ'' ಎಂದು ತಮಾಷೆ ಮಾಡಿದರಂತೆ.

ಡಾ.ಕೃಷ್ಣಾನಂದ ಕಾಮತರು ೨೦೦೨ರ ಫೆಬ್ರವರಿ ೨೦ರಂದು ಕಾಲವಾದರು. ಇನ್ನಷ್ಟು ಕಾಲ ಬಾಳಿ ಬೆಳಗಬೇಕಾಗಿದ್ದ ಚೇತನ ಅವರದ್ದು. ಅವರ ಪುತ್ರ ವಿಕಾಸ್ ಕಾಮತ್ ಅವರು ಕೃಷ್ಣಾನಂದ ಕಾಮತರ ಬಹುಪಾಲು ಕೃತಿಗಳನ್ನು www.kamat.com ನಲ್ಲಿ ಸಂಗ್ರಹಿಸಿದ್ದಾರೆ. ಓದಿ ಉಪಕೃತರಾಗೋಣ.

***



ನವರಾತ್ರಿ – ಮನೆಮನೆಯಲ್ಲೂ ಬೊಂಬೆ ಹಬ್ಬ – ಶ್ರೀಮತಿ ಜಿ.ವಿ. ನಿರ್ಮಲ ನಿವಾಸ

ಪ್ರಬಂಧ

ಆರತಿ ಮಂಗಳಾರತಿ

- ಕಮಲಾಕ್ಷಿ ಸಿ.ಆರ್.

"ಸಂಜೂ.. ಮಂಗಳಾರತಿ ಮಾಡೋಣ ಬಾ ಮಗನೆ.. " ಎಂದು ಹಬ್ಬದ ಕೋಣೆಯಲ್ಲಿದ್ದ ಮಗನನ್ನು ಕರೆದೆ.

ದೇವರಿಗೆ ಐದು ದೀಪ, ತಂಬಿಟ್ಟು ತುಪ್ಪದ ದೀಪದ ಆರತಿಯನ್ನು ಮಾಡಿ, ಬಳಿಕ ಕರ್ಪೂರದಾರತಿ ಮಾಡಿ, ಮಂಗಳಾರತಿ ತೆಗೆದುಕೊಂಡ. "ಅಮ್ಮಾ.. ದೀಪ, ಮಂಗಳಾರತಿ ಎರಡರಲ್ಲೂ ಬತ್ತಿಯನ್ನು ಹೊತ್ತಿಸಿದಾಗ ಜ್ಯೋತಿ ಬೆಳಗುತ್ತದೆ. ಎರಡೂ ಬೆಳಕನ್ನು ಕೊಡುತ್ತವೆ.. ಎರಡೂ ಒಂದೇ ಅಲ್ವಾ" ಎಂದ. ಅವನ ಮುಖ ನೋಡಿದೆ.

ಮಗ ನನ್ನನ್ನು ಸಿಕ್ಕಿಸಲು ಕೇಳ್ತಾ ಇದ್ದಾನೆ ಎಂದರಿವಿಲ್ಲದೆ ಉತ್ತರಿಸಲು ಮುಂದಾದೆ. "ದೀಪ ಬೆಳಕಿನ ಸಮ್ಮುಖದಲ್ಲಿ ದೇವರನ್ನು ಆರಾಧಿಸುತ್ತೇವೆ. ಪೂಜೆ ಪೂರ್ಣವಾಯಿತು ಎನ್ನುವಾಗ ಘಂಟಾನಾದ ಮಾಡುತ್ತ ಕರ್ಪೂರ ಇಲ್ಲವೇ ತುಪ್ಪದ ಬತ್ತಿಯ ಆರತಿಯಿಂದ ಜ್ಯೋತಿಯ ಬೆಳಕಿನಲ್ಲಿ ದೇವರನ್ನು ಕಣ್ತುಂಬಿಕೊಳ್ಳುತ್ತೇವೆ" ಎಂದೆ.

ಅಷ್ಟಕ್ಕೇ ಸುಮ್ಮನಾಗುವವನಲ್ಲ ಅವ. "ಅಷ್ಟೇನಾ.. ಆರತಿ ಎಂದೇ ಏಕೆ ಕರೀಬೇಕು. ಇದಕ್ಕೇನಾದ್ರೂ ಅರ್ಥ ಇರಬೇಕಲ್ವೇನಮ್ಮ" ಎಂದ.

"ದೇವರನ್ನು ಏಕಾಗ್ರತೆಯಿಂದ ಕಣ್ತುಂಬಿಕೊಂಡು ಧ್ಯಾನಾಸ್ತಕರಾಗುವಂತೆ ಮಾಡುವ ಮಂಗಳ ಕಾರ್ಯ ಎಂದಿರಬೇಕು" ಎಂದೆ.

ಅವನಿಗೆ ಇದರಿಂದ ಸಮಾಧಾನ ಆದಂತೆ ಕಾಣಲಿಲ್ಲ.. ಆದರೂ "ಹಾಗಂತೀಯಾ.. ಇರಬಹುದು ಬಿಡಮ್ಮ. ನಿಮ್ಮ ಹಿರಿಯರು ಮಾಡಿದ್ದೆಲ್ಲ ನೀವು ಮಾಡ್ತೀರಿ. ನಾವೂ ಮಾಡಬೇಕು ಅಲ್ವಾ" ಎಂದು ರೂಮಿಗೆ ಹೋದ.

"ಮಗನ ಅನುಮಾನವನ್ನು ಲೆಕ್ಚರಮ್ಮ ಬಗೆಹರಿಸೋಕೆ ಆಗದೆ ತಡವರಿಸಿದ್ರು" ಎಂದು ಮನೆಯವರು ರೇಗಿಸಿದರು.

ಆಗ ತುಸು ಕೋಪ ಬಂದರೂ, ಅವನಿಗೆ ಸರಿಯಾದ ಉತ್ತರ ನೀಡಲು ಸರಿಯಾದ ಮಾಹಿತಿ ನೀಡಲಿಲ್ಲವಲ್ಲ ಎಂದು ಬೇಸರವಾಯಿತು. ಊಟ ಮುಗಿಸಿ, ಆರತಿಯನ್ನು ಹುಡುಕಿ ಹೊರಟೆ. ಅನುಮಾನಗಳನ್ನು ಬಗೆಹರಿಸಿಕೊಂಡು ಅವನಿಗೆ ವಿವರಿಸಿದ ಬಳಿಕ ಇಬ್ಬರಿಗೂ ಸಂತೃಪ್ತ ಭಾವ ಮೂಡಿತ್ತು.

ದೇವರ ಪೂಜೆ ಸಂಪೂರ್ಣವಾಗುವುದೇ ಆರತಿಯಿಂದ. ಪೂಜಾ ಪ್ರಕ್ರಿಯೆಯ ಅಂತ್ಯದಲ್ಲಿ ಬೆಳಗುವ ಜ್ಯೋತಿಯನ್ನು ದೇವರ ಮೂರ್ತಿಯ ಮುಂದೆ ಪ್ರದಕ್ಷಿಣಾಪಥವಾಗಿ ನಿಧಾನವಾಗಿ ಚಲಿಸುವಂತೆ ಮಾಡುವುದು ಮಹಾಮಂಗಳಾರತಿ.

'ಆರತಿ' ಪದ ಬಂದದ್ದು ಎಲ್ಲಿಂದ?

'ಆರತಿ' ಪದವು ಸಂಸ್ಕೃತದ ' ಆರಾತ್ರಿಕ' ಹಾಗೂ ಹಿಂದಿಯ 'ಆರ್ತಿ' ಪದಗಳಿಂದ ಪಡೆಯಲಾಗಿದೆ ಎಂದು ಹೇಳಲಾಗುತ್ತದೆ. ಆರಾತ್ರಿಕ ಅಥವಾ ಆರ್ತಿ ಪದವು ರಾತ್ರಿಯನ್ನು ಅಥವಾ ಕತ್ತಲೆಯನ್ನು ಕಳೆಯುವ ಬೆಳಕು ಎಂಬರ್ಥವನ್ನು ನೀಡುತ್ತದೆ. ಪ್ರಕೃತಿಯಲ್ಲಿ ಸೂರ್ಯನೇ ಆರಾತ್ರಿಕ ಎನ್ನಬಹುದು. ಹಗಲು ಪೂರ್ವದಿಂದ ಪಶ್ಚಿಮಕ್ಕೆ, ಇರುಳು ಪಶ್ಚಿಮದಿಂದ ಪೂರ್ವಕ್ಕೆ ಬೆಳಗುವ ದಿವ್ಯಾರತಿ ಅವನು. ದೇವರಿಗೆ ಬೆಳಗುವ ಆರತಿ ಶುಭಕರವೆಂದು ಮಂಗಳಾರತಿ ಎಂದು ಕರೆಯಲಾಗುತ್ತೆ.

ಸಾಮಾನ್ಯವಾಗಿ ಹಿಂದೆಲ್ಲ ದೇವಾಲಯದ ಗರ್ಭಗುಡಿಯಲ್ಲಿ ತೈಲದೀಪದ ಹೊರತು ಉಜ್ವಲಿಸುವ, ಕಣ್ಣು ಕೋರೈಸುವ ದೀಪಗಳಿರುತ್ತಿರಲಿಲ್ಲ. ಮೂರ್ತಿಗಳ ಸ್ವಚ್ಛತೆ, ಅಭಿಷೇಕ, ಅಲಂಕಾರ, ನೈವೇದ್ಯ, ಷೋಡಶೋಪಚಾರಗಳ ಬಳಿಕ ಭಕ್ತರು ದೇವರನ್ನು ಕಣ್ತುಂಬಿಕೊಳ್ಳುವಂತೆ ಮಾಡಲು ದೀಪ ಜ್ಯೋತಿಯನ್ನು ದೇವರ ಮೂರ್ತಿಯುದ್ದಕ್ಕೂ ಬೆಳಗುವರು. ಮಂಗಳಾರತಿಯ ಬೆಳಕಿನಲ್ಲಿ ದೇವರನ್ನು ಕಣ್ತುಂಬಿಕೊಳ್ಳುವುದೇ ರೋಮಾಂಚನ. ತಿರುಪತಿಯ ಶ್ರೀನಿವಾಸ ಸ್ವಾಮಿಯನ್ನು, ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿಯನ್ನು ಆರತಿ ಮಾಡುವಾಗ ಕಣ್ತುಂಬಿಕೊಳ್ಳುತ್ತಾ ಧನ್ಯತಾ ಭಾವ ಮೂಡುವುದು.

ಜಗತ್ತು ಪಂಚಭೂತಗಳಿಂದ ಸೃಷ್ಟಿಯಾಗಿರುವಂತೆ ಆರತಿಯಲ್ಲಿಯೂ ಪಂಚಭೂತಗಳು ಅಡಕವಾಗಿವೆ. ಸುಗಂಧ ಬೀರುವ ಕರ್ಪೂರ, ಹೂವು ಅಥವಾ ಬತ್ತಿ ಭೂಮಿಯನ್ನು, ತುಪ್ಪವು ಹರಿಯುವ ನೀರನ್ನು, ಉಜ್ವಲವಾದ ಜ್ಯೋತಿಯು ಅಗ್ನಿ ಹಾಗೂ ವಾಯುವನ್ನು ಹಾಗೂ ಶಂಖ, ಜಾಗಟೆ ಇತ್ಯಾದಿ ಶಬ್ದಗಳು ಆಕಾಶವನ್ನು ಪ್ರತಿನಿಧಿಸುತ್ತವೆ. ಆರತಿಯ ಮೂಲಕ ಪಂಚಭೂತಗಳೊಂದಿಗೆ ದೇವರ ಸಾಕ್ಷಾತ್ಕರವಾಗುವ ದಿವ್ಯ ಅನುಭೂತಿಯದು.

ಆರತಿ ಬೆಳಗುವಾಗಿನ ಜ್ಯೋತಿ, ಘಂಟಾನಾದ, ಶಂಖನಾದ, ಜಾಗಟೆಗಳ ಶಬ್ದವು ಸುತ್ತಲಿನ ಋಣಾತ್ಮಕ ಶಕ್ತಿಯನ್ನು ಓಡಿಸಿ ಧನಾತ್ಮಕ ಭಾವ ಮೂಡಿಸುವುದು ಎಂದು ಹೇಳಲಾಗುತ್ತದೆ. ಹಾಗಾಗಿಯೇ ಮನಸ್ಸನ್ನು ಸಕಾರಾತ್ಮಕವಾಗಿಡಲು ಆರತಿ ಬೆಳಗಲಾಗುತ್ತದೆ. ಮಹಾ ಮಂಗಳಾರತಿ ಸಮಯದಲ್ಲಿ ಭಗವಂತನ ಮುಖ ನೋಡಿದಾಗ ಬ್ರಹ್ಮ ಹತ್ಯಾ ದೋಷ ನಿವಾರಣೆ ಆಗುತ್ತದೆಯಂತೆ.

ಆರತಿ ಮಾಡುವುದು ದೇವರಿಗಷ್ಟೇ ಅಲ್ಲದೆ ಶುಭ ಸಮಾರಂಭಗಳಲ್ಲೂ ಆರತಿ ಮಾಡುತ್ತೇವೆ. ವಿವಾಹ ಸಂದರ್ಭಗಳಲ್ಲಿ ನವವಿವಾಹಿತರಿಗೆ ಕಳಶಾರತಿ ಮಾಡುವ ಸಂಪ್ರದಾಯ ಹಿಂದೂಗಳಲ್ಲಿ ಇದೆ. ಮದುವೆ ದಿನದಂದು ಮಾಂಗಲ್ಯಧಾರಣೆ ಆಗುವಾಗ ಮದುಮಕ್ಕಳು ಶ್ರೀವಿಷ್ಣು–ಶ್ರೀಲಕ್ಷ್ಮೀ, ಶಿವ–ಪಾರ್ವತಿ ಸ್ವರೂಪವೆಂದು ಭಾವಿಸಲಾಗುತ್ತದೆ. ನಕಾರಾತ್ಮಕ ಶಕ್ತಿಗಳು ಬಾಧಿಸದಿರಲೆಂದು ವಿವಾಹದ ನಂತರ ಆರತಕ್ಷತೆ ಎಂಬ ಕಾರ್ಯಕ್ರಮದಲ್ಲಿ ವಧೂವರರಿಗೆ ಆರತಿ ಮಾಡಿ ಅಕ್ಷತೆ ಹಾಕುವ ಪದ್ಧತಿ ಜಾರಿಯಲ್ಲಿದೆ.

ಕೆಟ್ಟ ದೃಷ್ಟಿ, ಕೆಟ್ಟ ಯೋಚನೆಗಳನ್ನು ಆರತಿಯು ಸಾತ್ವಿಕ ಭಾವ ತರುತ್ತದೆ. ಆದರೆ ಇತ್ತೀಚಿಗೆ ಮದುವೆಗೆ ಮುನ್ನಾ ದಿನವೇ ಆರತಕ್ಷತೆ ಏರ್ಪಡಿಸುವುದು ಅರ್ಥ ಕಳೆದುಕೊಳ್ಳುತ್ತಿದೆ.

ವಿವಾಹದ ನಂತರ ಹೆಣ್ಣನ್ನು ಮನೆ ತುಂಬಿಸಿಕೊಳ್ಳುವಾಗ ಆರತಿ ಬೆಳಗಲಾಗುತ್ತದೆ. ನವವಿವಾಹಿತೆಯೊಡನೆ ಲಕ್ಷ್ಮೀ ರೂಪಿಣಿಯಾಗಿ ಗೃಹಪ್ರವೇಶ ಮಾಡುವಾಗ ಧನಾತ್ಮಕತೆಯ ಪ್ರವೇಶವಾಗಲಿ ಎಂಬ ಭಾವವಿದೆ. ಹಾಗೆಯೇ ಸೀಮಂತ, ನಾಮಕರಣ, ಒಸಗೆ ಸಮಾರಂಭಗಳ ಸಂದರ್ಭದಲ್ಲಿ ಆರತಿ ಮಾಡುವುದು ಶುಭಕಾರಕ ಎಂದೇ ಭಾವಿಸಲಾಗಿದೆ.

ದೀಪಾವಳಿ ಸಮಯದಲ್ಲಿ ದೀಪಾರತಿಯು ಕಣ್ಮನ ತಣಿಸುತ್ತವೆ.. ದೈವಿಕ ಭಾವ ಜಾಗೃತಗೊಳಿಸುತ್ತದೆ. ನರಕಾಸುರನ ಸಂಹಾರ ದ್ಯೋತಕವಾಗಿ ಸತಿಯು ತಮ್ಮ ಪತಿಗೆ ನಸುಕಿನಲ್ಲಿ ಆರತಿ ಮಾಡುವ ಮೂಲಕ ಶ್ರೇಯಸ್ಸಿಗೆ ಪ್ರಾರ್ಥಿಸುವುದುಂಟು. ನಾಗರ ಪಂಚಮಿ, ರಕ್ಷಾಬಂಧನ ದಿನಗಳಲ್ಲಿ ಹೆಂಗಳೆಯರು ಸಹೋದರರಿಗೆ ಅಕ್ಷತೆಯಿಟ್ಟು ಆರತಿ ಮಾಡುವರು. ಈ ಮೂಲಕ ಕೆಟ್ಟ ದೃಷ್ಟಿ ದೂರವಾಗಿ ಧನಾತ್ಮಕ ಭಾವ ಒಡಮೂಡಿ ಸಹೋದರತ್ವ ಜಾಗೃತವಾಗುತ್ತದೆ. ನವರಾತ್ರಿಯಲ್ಲಿ ಕನ್ಯಾಪೂಜೆ ಮಾಡಿ ದುರ್ಗಾಸ್ವರೂಪಿಣಿಯರಿಗೆ ಆರತಿ ಮಾಡುವ ಪದ್ಧತಿಯಿದೆ.

ಶ್ರೀಗೌರಿ, ಶ್ರೀಲಕ್ಷ್ಮೀ, ಸರಸ್ವತಿ.. ದೇವಾನುದೇವತೆಗಳಿಗೆ ಮಂಗಳಾರತಿ ಹಾಡುಗಳ ಮೂಲಕ ದೇವರ ಸ್ತುತಿಸುವ ದಾಸರ ಪದಗಳು, ಭಕ್ತಿ ಗೀತೆಗಳನ್ನು ಹಾಡಿದರೆ ಮನಸ್ಸು ಉಲ್ಲಸಿತವಾಗುವುದು.

ಕಾಶಿಯ ಗಂಗಾರತಿಯನ್ನು ನೋಡಿದರೆ ಕೈಲಾಸವೇ ಧರೆಗಿಳಿದಂತೆ ಭಾಸವಾಗುತ್ತದೆ. ವಿಧವಿಧವಾದ ಆರತಿ ಮಾಡುವಾಗ, ಶಂಖ, ಜಾಗಟೆ, ಘಂಟಾನಾದ, ಚಾಮರ ಸೇವೆಗಳು ದಿವ್ಯಾನುಭೂತಿ ನೀಡುತ್ತವೆ. ಮಾಲಿನ್ಯವನ್ನು ತೊಡೆದುಹಾಕುವ ಗಂಗಾಮಾತೆಗೆ ಆರತಿಯು ಧನಾತ್ಮಕ ಆವೇಶವನ್ನು ತುಂಬುವುದಂತೆ.

ಮನೆ, ಕಛೇರಿ, ವಾಹನ ಪೂಜೆ ಮಾಡುವಾಗ ದೃಷ್ಟಿ ನೀವಾಳಿಸಲು ಕುಂಬಳಕಾಯಿಯ ಮೇಲೆ ಕರ್ಪೂರವನ್ನಿಟ್ಟು ನೀವಾಳಿಸಿ, ಆರತಿ ಮಾಡಲಾಗುತ್ತದೆ. ದೃಷ್ಟಿ ತೆಗೆಯಲು ಓಕುಳಿಯಲ್ಲಿ ದೀಪವಿರಿಸಿ ಆರತಿ ಮಾಡುವರು.

ಮಂಗಳವಾರ, ಶುಕ್ರವಾರದ ದಿನಗಳಂದು ಹರಕೆ ರೂಪದಲ್ಲಿ ಬೆಲ್ಲದಾರತಿ, ತಂಬಿಟ್ಟಿನ ಆರತಿ ಹಾಗೂ ನಿಂಬೆಹಣ್ಣಿನ ಆರತಿಯನ್ನು ಹದಿನಾರು ವಾರಗಳ ಕಾಲ ದೇವಿಗೆ ಅರ್ಪಿಸುವವರನ್ನು ಕಾಣುತ್ತೇವೆ.

'ನಡೆದಿದೆ ಪೂಜಾರತಿ ವಿಶ್ವದೇಹಿಗೆ' ಎಂಬ ಕವಿ ಲಕ್ಷ್ಮೀನಾರಾಯಣ ಭಟ್ಟರ ಪದ್ಯದಲ್ಲಿ ನಿತ್ಯವೂ ಪ್ರಕೃತಿಯಿಂದ ವಿಶ್ವದೇವಿಗೆ ಪೂಜೆ ಆರತಿ ನಡೆಯುತ್ತವೆ ಎಂದು ವರ್ಣಿಸಿರುವರು.

"ವಿಶ್ವ ಭಾರತಿಗೆ ಕನ್ನಡದಾರತಿ" ಎಂಬ ಕಣವಿಯವರ ಸಾಲು ಸರ್ವ ರೀತಿಯಲ್ಲೂ ಕರ್ನಾಟಕ ಆದರ್ಶಮಯವಾಗಿದೆ. ಭಾರತಿಯ ಪ್ರಿಯ ಪುತ್ರಿ ಕನ್ನಡಾಂಬೆಯು ಕನ್ನಡದಾರತಿ ಮಾಡುವಳು ಎಂದು ಅಭಿಮಾನಪೂರ್ವಕವಾಗಿ ಬರೆದಿದ್ದಾರೆ.

ದೀಪ ಜ್ವಲನದಿಂದ ಪ್ರಾರಂಭವಾಗುವ ಪೂಜೆ ಕೈಂಕರ್ಯ ಮಂಗಳಾರತಿಯೊಂದಿಗೆ ಸಂಪೂರ್ಣವಾಗುತ್ತದೆ. ಮಂಗಳಾರತಿಯ ಶಿಖರದ ಪ್ರಭೆಯನ್ನು ಎರಡೂ ಕೈಗಳಿಂದ ಲಘುವಾಗಿ ಸ್ಪರ್ಶಿಸಿ ಕಣ್ಣುಗಳಿಗೆ ಒತ್ತಿಕೊಂಡು ಮುಖದಗಲ ಕೈಗಳಾಡಿಸಿ ತಲೆ ಸವರಿಕೊಂಡರೆ ದೇವರ ಆಶೀರ್ವಾದಿಂದ ಪುನೀತರಾದ ಭಾವ. ನಿತ್ಯವೂ ದೇವರ ಪೂಜೆಯಲ್ಲಿ ಶ್ರದ್ಧೆಯಿಂದ ಆರತಿ ಮಾಡಿ ಸಂಪೂರ್ಣಗೊಳಿಸೋಣ.

***



ನವರಾತ್ರಿ – ಮನೆಮನೆಯಲ್ಲೂ ಬೊಂಬೆ ಹಬ್ಬ – ಡಾ. ಶುಭಶ್ರೀ ಪ್ರಸಾದ್ ನಿವಾಸ


ಆನೆಗಳು ಮತ್ತು ಅದರ ಪೂ, ಪೂ ಕಾಗದಗಳು.

– ನಾಗರತ್ನ ಚಂದ್ರಶೇಖರ್

ಇತ್ತೀಚೆಗೆ ನಾವು ಮಾಡಿದ ಶ್ರೀಲಂಕಾ ಪ್ರವಾಸದಲ್ಲಿ ಆನೆಗಳ ಅನಾಥಾಶ್ರಮದ ಭೇಟಿಯೂ ಇತ್ತು. ಆಶ್ಚರ್ಯವೇ, ಆನೆಗಳಿಗೆ ಅನಾಥಾಶ್ರಮವೆಂದು! ನಿಜ, ಗಾಯಗೊಂಡಿರುವ, ಅನಾಥವಾಗಿರುವ, ಕಾಡಿನಲ್ಲಿ ಕೈ ಬಿಡಲಾಗಿರುವ ಸುಮಾರು 93 ಹೆಣ್ಣು, ಗಂಡಾನೆಗಳಿಗೆ, "ಪಿನ್ನೆ ವಾಲಾ ಅನಾಥಾಶ್ರಮ"ದಲ್ಲಿ ಆಶ್ರಯ ನೀಡಲಾಗಿದೆ. ಈ ಪಿನ್ನೆ ವಾಲಾ ಆಶ್ರಮ 1975ರಲ್ಲಿ ಪ್ರಾರಂಭವಾಗಿದ್ದು, ಆನೆಗಳ ಸಂತಾನಾಭಿವೃದ್ಧಿ ಕೇಂದ್ರವಾಗಿಯೂ ಕೆಲಸ ಮಾಡುತ್ತಿದೆ. ಶ್ರೀಲಂಕಾದ ಸಂಸ್ಕೃತಿಯಲ್ಲಿ ಆನೆಗಳಿಗೆ ಪ್ರಮುಖ ಸ್ಥಾನ ನೀಡಲಾಗಿದೆ. 2011ರ ಗಣತಿಯ ಪ್ರಕಾರ ಶ್ರೀಲಂಕಾದಲ್ಲಿರುವ ಒಟ್ಟು ಆನೆಗಳ ಸಂಖ್ಯೆ 5897.

ಈ ಆಶ್ರಮ ಕೊಲಂಬೋ ಮತ್ತು ಕ್ಯಾಂಡಿ ನಡುವೆ ಅರ್ಧ ದಾರಿಯಲ್ಲಿರುವ ರೆಗಲ್ಲೇ ಪಟ್ಟಣದ ಸಮೀಪವಿದೆ. ಮಧ್ಯಾಹ್ನ ನಾವು ಅಲ್ಲಿ ಇಳಿಯುತ್ತಿದ್ದಂತೆಯೇ ಅಲ್ಲಿದ್ದ ಅಂಗಡಿಗಳ ಮುಂಭಾಗದ ಜಾಹೀರಾತು ನೋಡಿ ತಬ್ಬಿಬ್ಬಾಯಿತು. "ಎಲಿಫೆಂಟ್ ಪೂ ಪೇಪರ್ ಫಾರ್ ಸೇಲ್" ಎನ್ನುವ ಜಾಹೀರಾತು ಎಲ್ಲಾ ಅಂಗಡಿಗಳ ಮುಂದೆ. ಓಹೋ! ಆನೆ ಸಗಣಿ ಅಥವಾ ಲದ್ದಿಯನ್ನು ಶುಚಿಗೊಳಿಸುವ ಪೇಪರ್ ಇರಬಹುದು ಎಂದುಕೊಂಡೆ. ಏಕೆಂದರೆ ನಾವು ಮುಂದೆ ಹೋಗುತ್ತಿದ್ದಂತೆ ಆನೆಗಳು ಹಾಕಿದ ಸಗಣಿ ಅಥವಾ ಲದ್ದಿಯನ್ನು ದಾಟಿಕೊಂಡು ಗಮ್ಯ ಸ್ಥಳವನ್ನು ತಲುಪಬೇಕಿತ್ತು.

ನದಿಯ ದಡದಲ್ಲಿ ಇದ್ದ ಒಂದು ಮೂರು ಅಂತಸ್ತಿನ ತೆರೆದ ಹೋಟೆಲಿನಲ್ಲಿ ನಮ್ಮ ಮಧ್ಯಾಹ್ನದ ಊಟ. ಅದಾಗಲೇ ಸುಮಾರು 28 ಆನೆಗಳು ನದಿಯಲ್ಲಿ ಜಲಕ್ರೀಡೆ ಆಡುತ್ತಿದ್ದವು. ಕೆಲವು ವಿದೇಶಿಯರು ಹಣ ಕೊಟ್ಟು ನೀರಿಗೆ ಇಳಿದು ಆನೆಗಳ ಬೆನ್ನು ತಿಕ್ಕುತ್ತಿದ್ದರು. ಹರಿವ ನದಿಯ ನೀರೊಳು ಮೈಯೊಡ್ಡಿ ಮಲಗಿದ್ದ ಮೂರ್ನಾಲ್ಕು ಆನೆಗಳ ಬೆನ್ನ ಮೇಲೆ ಕುಳಿತು ಸವಾರಿ ಮಾಡುತ್ತಾ ಫೋಟೋ ಕ್ಲಿಕ್ಕಿಸುತ್ತಿದ್ದರು. ನಾವು ಊಟ ಮಾಡುತ್ತಾ ಈ ಸುಂದರ ದೃಶ್ಯವನ್ನು ಸುಮಾರು ಅರ್ಧ ಗಂಟೆಗೂ ಮಿಕ್ಕಿ ಆನಂದಿಸಿದೆವು. ಇಲ್ಲಿಗೆ ಆನೆಗಳನ್ನು ಗೊತ್ತಾದ ಸಮಯದಲ್ಲಿ ಮಾತ್ರ ಕರೆ ತರುತ್ತಾರೆ. ಇವು ಪೂರ್ತಿ ಪಳಗಿದ ಆನೆಗಳು ಎಂದು ಹೇಳಲು ಬರುವುದಿಲ್ಲ. ಆದ್ದರಿಂದ ಎಚ್ಚರಿಕೆಯಿಂದ ಇರಬೇಕೆಂದು ನಮ್ಮ ಗೈಡ್ ಹೇಳಿದ. ಅಲ್ಲಿಂದ ವಾಪಸ್ಸು ಬರುವಾಗ ಆ ಸ್ಥಳದ ಸುತ್ತಮುತ್ತ ಇದ್ದ ನೂರಾರು ಅಂಗಡಿಗಳ ಸಾಲು ಸಾಲುಗಳಲ್ಲಿ ಬಟ್ಟೆಗಳು, ಹ್ಯಾಟ್‌ಗಳು, ವಿಶೇಷವಾಗಿ ಮರದಿಂದ ಮಾಡಿದ ಆನೆಗಳು ಇವುಗಳನ್ನು ನೋಡಿದೆವು. ಕೊನೆಗೆ ನಾವು ನೋಡಿದ ಒಂದು ಅಂಗಡಿಯ ಮುಂದೆ ಬೃಹತ್ತಾದ ಆನೆ, ಅದರ ಬಾಲದ ಹಿಂದೆ ಕೆಳಗೆ ಅದು ವಿಸರ್ಜಿಸಿದ ತ್ಯಾಜ್ಯ! ಇದು ಜೀವಂತ ಆನೆಯ ಪ್ರತಿರೂಪ. ಅಂಗಡಿಯ ಮಾಲಿಕ ಒಳಗೆ ನಮ್ಮನ್ನು ಕರೆದು ಆನೆಯ ಲದ್ದಿಯಿಂದ ಕಾಗದ ಮಾಡುವ ಪ್ರಕ್ರಿಯೆಗಳನ್ನು ತೋರಿಸಿದ.



ಪೂ, ಪೂ ಕಾಗದವೆಂದರೆ ಆನೆಯ ತ್ಯಾಜ್ಯದಿಂದ ಮಾಡಿದ ಸುಂದರ ಬರೆಯುವ ಕಾಗದಗಳು. ಇವು ವಾಸನೆ ರಹಿತವೂ ಆಗಿದ್ದು, ಲೆಟರ್‌ಪ್ಯಾಡ್‌ಗಳು, ಗ್ರೀಟಿಂಗ್ ಕಾರ್ಡ್‌ಗಳು ಇತ್ಯಾದಿಗಳನ್ನು ತಯಾರಿಸಲಾಗುತ್ತವೆ. ಇದರ ಬೆಲೆಯೂ ದುಬಾರಿ. ಲೆಟರ್ ಪ್ಯಾಡ್‌ಗಳ ಮೇಲೆ. ನೋಟ್ ಬುಕ್ಕುಗಳ ಮೇಲೆ ಸುಂದರ ಆನೆಯ ಚಿತ್ರಗಳಂತೂ ಕಣ್ ಸೆಳೆಯುವಂತಿದ್ದವು.

ಈ ವಿಶೇಷ ಕಾಗದದ ಮೇಲೆ ಬರೆದ ಪ್ರೇಮಗೀತೆಯನ್ನು ತನ್ನ ಪ್ರಿಯತಮೆಗೆ ಕಳುಹಿಸಿ ಅದು ಆನೆಯ ಪೂಪುನಿಂದ ಮಾಡಿದ ಕಾಗದ ಎಂದು ತಿಳಿಸಿ ಅವಳ ಪ್ರತಿಕ್ರಿಯೆಯನ್ನು ನೋಡವ ಪ್ರೇಮಿಯ ಚಿತ್ರವನ್ನು ಮನಸ್ಸಿನಲ್ಲಿ ಮೂಡಿಸಿಕೊಂಡು ನಕ್ಕೆ. ನಾನೇನಾದರೂ ಕಥೆಯನ್ನೋ, ಕವಿತೆಯನ್ನೋ ಈ ಕಾಗದದಲ್ಲಿ ಬರೆದು

ಪತ್ರಿಕೆಗೆ ಕಳಿಸಿದರೆ, ಅದು ಕಸದಬುಟ್ಟಿಗೆ ಹೋದರೆ ನಷ್ಟ ನನಗೆ ಎಂದು ನಾನು ಖರೀದಿಸುವ ಮನಸ್ಸು ಮಾಡಲಿಲ್ಲ.



ಈ ಲದ್ದಿ ಅಥವ ಕಾಗದದ ಬಗ್ಗೆ ಇನ್ನಷ್ಟು ಮಾಹಿತಿ

ಆನೆಗಳು ಸಸ್ಯಹಾರಿಗಳಾಗಿರುವುದರಿಂದ ಅವು ಉತ್ಪಾದಿಸುವ ತ್ಯಾಜ್ಯಗಳು, ಮೂಲಭೂತವಾಗಿ ಕಚ್ಚಾ ಸೆಲ್ಯುಲೋಸ್ ಆಗಿವೆ. ಇದನ್ನು ಸಂಗ್ರಹಿಸಿ ತೊಳೆದಾಗ ಇದರಿಂದ ಸಸ್ಯದ ನಾರುಗಳು ಮಾತ್ರ ಉಳಿಯುತ್ತದೆ. ನಂತರ ಇದನ್ನು ನೈಸರ್ಗಿಕ ಸೋಂಕು ನಿವಾರಕಗಳಾದ ಮಾರ್ಗೋಸ ಎಲೆಗಳಿಂದ ಕುದಿಸಲಾಗುತ್ತದೆ ಮತ್ತು ಮೃದುವಾದ ಮೇಲ್ಮೈಯನ್ನು ಉತ್ಪಾದಿಸಲು ಮರುಬಳಕೆಯ ಕಾಗದದೊಂದಿಗೆ ಬೆರೆಸಲಾಗುತ್ತದೆ. ಅಂತಿಮವಾಗಿ ಇದನ್ನು ಸಾಂಪ್ರದಾಯಿಕ ಮರದ ತಿರುಳಿನಿಂದ ಮಾಡಿದ ಕಾಗದದಂತೆಯೇ ಒಣಗಿಸಿ ಉಪಯೋಗಿಸಲಾಗುತ್ತದೆ.

ಒಂದು ಆನೆಯು ದಿನಕ್ಕೆ 250 ಕೆಜಿ ಆಹಾರ, 120 ಲೀಟರ್ ನೀರನ್ನು ಸೇವಿಸುತ್ತದೆ. ವಯಸ್ಕ ಆನೆಯೊಂದು ಪ್ರತಿ ದಿನ 200 ಕೆಜಿ ಸಗಣಿ ಉತ್ಪಾದಿಸುತ್ತದೆ. ಒಂದು ಆನೆಯ ವಿಸರ್ಜಿತ ಘೂ, ಘೂವಿನಿಂದ ಒಂದು ದಿನಕ್ಕೆ A4 ಅಳತೆಯ 115 ಹಾಳೆಗಳನ್ನು ಮಾಡಬಹುದು. ಇದರಿಂದ ತಯಾರಿಸಲಾದ ಕಾಗದ ಪರಿಮಳಯುಕ್ತವಾಗಿಲ್ಲದಿದ್ದರೂ, ಕ್ಲೋರಿನ್ ಮತ್ತು ಆಮ್ಲ ಮುಕ್ತವಾಗಿದೆ. ಆದರೆ ಅದು ಒಂದು ಅನನ್ಯ, ಕರಕುಶಲ, ಮರ ಮುಕ್ತ, ಪರಿಸರ ಸ್ನೇಹಿ ಕಾಗದವಾಗಿದೆ.

ಕೈಗಾರಿಕೀಕರಣದಿಂದಾಗಿ, ಅರಣ್ಯ ನಾಶದ ನಂತರ ನೈಸರ್ಗಿಕ ಸಂಪನ್ಮೂಲಗಳ ಸವಕಳಿಯನ್ನು ತಡೆಯುವ ಪರಿಸರ ಪ್ರಜ್ಞೆ, ಸಾವಿರದ ಒಂಬೈನೂರ ಅರವತ್ತು ಎಪ್ಪತ್ತರ ದಶಕಗಳಲ್ಲಿ ಜಾಗೃತವಾಯಿತು. ಇಂದು ಮರುಬಳಕೆಯ ಕಾಗದದ ನ್ಯೂಸ್ ಪ್ರಿಂಟ್, ಟಾಯ್ಲೆಟ್ ಪೇಪರ್, ಇತ್ಯಾದಿಗಳ ಉತ್ಪಾದನೆಯಿಂದ ಕಾಡಿನ ಹೊರೆಯನ್ನು ಕಡಿಮೆ ಮಾಡುವ ಪ್ರಯತ್ನದ ಫಲವಾಗಿ ಪರ್ಯಾಯ ಪೇಪರ್ ಆಗಿ ಘೂ,ಘೂಗಳ ಫೈಬರ್‌ಗಳನ್ನು ಪ್ರಾಣಿಗಳಿಂದ ಮತ್ತು ಸಸ್ಯಗಳ ತ್ಯಾಜ್ಯದಿಂದ ಅಂದರೆ ಆನೆ ಹಸು, ಕುದುರೆ, ಕತ್ತೆ, ಎಮ್ಮೆಗಳಿಂದಲೂ ಪಡೆಯಲಾಗುತ್ತಿದೆ.

ಕಾಗದದ ಇತಿಹಾಸ ಒಂದು ಪಕ್ಷಿನೋಟ

ಕಾಗದವು ಪ್ರಪಂಚದ ಹೆಚ್ಚಿನ ಇತಿಹಾಸವನ್ನು ದಾಖಲಿಸಿದ ಮತ್ತು ಸಂಗ್ರಹಿಸಿದ ಮಾಧ್ಯಮವಾಗಿದೆ. ಜನಜೀವನದ ಒಂದು ಅವಿಭಾಜ್ಯ ಅಂಗವೇ ಆಗಿರುವ ಕಾಗದಗಳನ್ನು ತಯಾರಿಸಲು ಬೇಕಾದ ಮರಗಳಿಂದಾಗಿ ಕಾಡಿನ ನಾಶವು ಒಂದು ಪರಿಹರಿಸಲಾಗದ ಸಮಸ್ಯೆಯಾಗಿದೆ. ಇಂದು ಡಿಜಿಟಲ್ ಮಾಧ್ಯಮ, ಕಂಪ್ಯೂಟರೀಕರಣದಿಂದಾಗಿ ಕಾಗದದ ಬಳಕೆಯೇನೋ ಕಡಿಮೆಯಾಗಿದೆ ನಿಜ. ಆದರೂ ವೃತ್ತಪತ್ರಿಕೆಗಳು, ಶಾಲಾ ಪಠ್ಯಪುಸ್ತಕಗಳು, ಸಾಹಿತ್ಯ ಸೃಷ್ಟಿ ಇತ್ಯಾದಿಗಳಿಗೆ ಇಂದಿಗೂ ಪೇಪರ್ ಮೇಲಿನ ಅವಲಂಬನೆ ತಪ್ಪಿಲ್ಲ. ಎಲೆಗಳು, ತೊಗಟೆ, ಮಣ್ಣಿನ ಅಚ್ಚುಗಳು, ಕಲ್ಲುಗಳ ಬಳಕೆಯಿಂದ ಸಂದೇಶಗಳನ್ನು ಬರೆದು



ತಿಳಿಸುತ್ತಿದ್ದ ಕಾಲದಿಂದ ಕ್ರಿಸ್ತಪೂರ್ವ 3000ನೇ ವರ್ಷಕ್ಕೆ ಪ್ಯಾಪಿರಸ್ ಎಂಬ ಹುಲ್ಲಿನಿಂದ ಮಾಡಿದ ಕಾಗದಗಳನ್ನು ಈಜಿಪ್ಟಿನವರು ಕಂಡುಹಿಡಿದರು. ಮುಂದೆ ಬಿದಿರು, ಹಿಪ್ಪುನೇರಳೆ, ಸೆಣಬು, ರೇಷ್ಮೆ ಮತ್ತು ಇತರ ಸ್ಥಳೀಯ ಹುಲ್ಲುಗಳಿಂದ ಕಾಗದದ ಆವಿಷ್ಕಾರವಾಯಿತು. ಕ್ರಿಸ್ತ

ಶಕ 105ರಲ್ಲಿ ಚೀನಾದಲ್ಲಿ ಹಾನ್ ರಾಜವಂಶದವರು ಕಾಗದ ತಯಾರಿಸಲು ಮುಂದಾದರು. ಅವರಲ್ಲಿ 'ತ್ಸೈಲುನ್' ಎಂಬುವವನು ಕಾಗದದ ಮಹಾ ಸಂಶೋಧಕನೆಂದು ಗುರುತಿಸಿಕೊಂಡ.

ಏಳನೇ ಶತಮಾನದ ಆರಂಭದಲ್ಲಿ ಅಂದರೆ ಕ್ರಿಸ್ತ ಶಕ 600ರಲ್ಲಿ ಚೀನಾದಿಂದ ಕಾಗದ ತಯಾರಿಕೆಯ ತಂತ್ರಗಳು ಹರಡಲು ಆರಂಭವಾದವು. ಜಪಾನೀಯರು, ಕೊರಿಯನ್ನರು ನವೀನ ಕರಕುಶಲ ಕಾಗದ ಕೈಗಾರಿಕೆಗಳನ್ನು ಆವಿಷ್ಕರಿಸಿದರು. ಕ್ರಿಸ್ತ ಶಕ 7ನೇ ಶತಮಾನದ ಮಧ್ಯ ಭಾಗದಲ್ಲಿ ಕಾಗದ ತಯಾರಿಕೆಯನ್ನು ಟಿಬೆಟ್, ಭಾರತ ಮತ್ತು ಆಗ್ನೇಯ ಏಷ್ಯಾದ ಭಾಗಗಳಿಗೆ ಪರಿಚಯಿಸಲಾಯಿತು. ಜಪಾನ್ ಮತ್ತು ಕೊರಿಯಾದಲ್ಲಿ ಬೌದ್ಧ ಬರಹಗಳು ಮತ್ತು ಧರ್ಮ ಗ್ರಂಥಗಳನ್ನು ಪ್ರಾಥಮಿಕವಾಗಿ ಬಳಸಲಾಯಿತು. ಕ್ರಿಸ್ತ ಶಕ 13ನೇ ಶತಮಾನದಲ್ಲಿ ಸಿಯಾಮ್ ಅಂದರೆ ಇಂದಿನ ಥೈಲ್ಯಾಂಡಿನಲ್ಲಿ ತಾಳೆ ಎಲೆಯನ್ನು ಹಾಗೂ ಖೋಯ್ ಮರದ ತೊಗಟೆಯನ್ನು ಬಳಸಲಾಗುತ್ತಿತ್ತು. ಕ್ರಿಸ್ತ ಶಕ ಎಂಟನೇ ಶತಮಾನದಲ್ಲಿ ಬಾಗ್ದಾದ್ ಮತ್ತು ಡಮಾಸ್ಕಸ್ ಗಳಲ್ಲಿ ಕಾಗದದ ಉತ್ಪಾದನೆಯನ್ನು ಆರಂಭಿಸಲಾಯಿತು.

1453ರಲ್ಲಿ ಜರ್ಮನಿಯಲ್ಲಿ ಜೋಹಾನಿಸ್ ಗುಟೆನ್ಬರ್ಗ್ ಎಂಬಾತನಿಂದ ಮುದ್ರಣ ಯಂತ್ರದ ಆವಿಷ್ಕಾರವಾಗಿ, ಆಧುನಿಕ ಕಾಗದ ಉದ್ಯಮದ ಜನನವಾಯಿತು. ಇದು ಮುಂದಿನ ಹಲವಾರು ಶತಮಾನಗಳವರೆಗೆ ಯುರೋಪಿನಲ್ಲಿ ಪುಸ್ತಕೋದ್ಯಮಗಳಿಗೆ ಜೀವ ನೀಡಿತು ಎನ್ನಬಹುದು.

ಅಮೆರಿಕದಲ್ಲಿ 1696ರಲ್ಲಿ ಮೊದಲ ಕಾಗದದ ಗಿರಣಿಯನ್ನು ಫಿಲಿಡೆಲ್ಫಿಯಾದಲ್ಲಿ ಸ್ಥಾಪಿಸಲಾಯಿತು. ಮುಂದಿನ 100 ವರ್ಷ ಗಳಲ್ಲಿ ಇನ್ನೂರಕ್ಕೂ ಹೆಚ್ಚು ಕಾಗದ ಗಿರಣಿಗಳು ಸ್ಥಾಪನೆಗೊಳ್ಳುತ್ತಾ ಹೋದವು. ಕೈಗಾರೀಕರಣದಿಂದಾಗಿ ಅರಣ್ಯ ನಾಶದ ನಂತರ 1960–70ರ ದಶಕದಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸವಕಳಿಯನ್ನು ತಡೆಯುವ ಪರಿಸರ ಪ್ರಜ್ಞೆ ಜಾಗೃತವಾಯಿತು. ಇಂದು ಮರುಬಳಕೆಯ ಕಾಗದದಿಂದ ನ್ಯೂಸ್‌ಪ್ರಿಂಟ್, ಟಾಯ್ಲೆಟ್ ಪೇಪರ್ ಇತ್ಯಾದಿಗಳ ಉತ್ಪಾದನೆಯಿಂದ ಕಾಗದದ ಬಳಕೆಗೆ ಕಾಡಿನ ಹೊರೆಯನ್ನು ಕಡಿಮೆ ಮಾಡುವ ಪ್ರಯತ್ನದತ್ತ ಸಾಗಿದ್ದೇವೆ.

***



ನವರಾತ್ರಿ – ಮನೆಮನೆಯಲ್ಲೂ ಬೊಂಬೆ ಹಬ್ಬ – ಡಾ.ಶುಭಶ್ರೀ ಪ್ರಸಾದ್ ನಿವಾಸ

ಪ್ರವಾಸ ಕಥನ

ಗುಡಿಮಲ್ಲಂ

- ಅನ್ನಪೂರ್ಣ ಸುಬ್ಬರಾವ್

ಗುಡಿಮಲ್ಲಂ ತಿರುಪತಿಯಿಂದ ಕಾಳಹಸ್ತಿಗೆ ಹೋಗುವ ಮಾರ್ಗದಲ್ಲಿ ಸುಮಾರು ೩೦ ಕಿ.ಮೀ. ದೂರದಲ್ಲಿದೆ. ಕ್ರಿಸ್ತಪೂರ್ವ ೩ನೆಯ ಶತಮಾನದ ಹಾಗೂ ಅತ್ಯಂತ ಹಳೆಯದಾದ ಶಿವನ ಮೊದಲನೇ ದೇವಾಲಯ ಇದು ಎನ್ನಲಾಗಿದೆ. ಇಲ್ಲಿರುವ ಲಿಂಗವು ತ್ರಿಮೂರ್ತಿಗಳನ್ನು ಪ್ರತಿನಿಧಿಸುತ್ತದೆ. ಇದಕ್ಕೆ ಪರಶುರಾಮೇಶ್ವರ ದೇವಾಲಯ ಎಂದೂ ಹೆಸರಿದೆಯಂತೆ. ಇಲ್ಲಿನ ವಿಗ್ರಹ ವಿಶೇಷವಾಗಿದೆ. ಇಲ್ಲಿ ಬಿಟ್ರೆ ಬೇರೆಲ್ಲೂ ಇಂಥ ವಿಗ್ರಹ ನೋಡಲು ಸಾಧ್ಯವಿಲ್ಲ ಎನ್ನುವುದು ಅಲ್ಲಿನವರ ಅಭಿಪ್ರಾಯ.

ಈ ದೇವಾಲಯಕ್ಕೆ ಒಂದು ಇತಿಹಾಸವಿದೆ. ಜಮದಗ್ನಿಯು ತನ್ನ ಪತ್ನಿ ರೇಣುಕಾದೇವಿಯನ್ನು ಶಂಕಿಸಿ, ಕೋಪಗೊಂಡು ಮಕ್ಕಳನ್ನು ಕರೆದು ತಾಯಿಯ ಶಿರಶ್ಚೇದನ ಮಾಡುವಂತೆ ಆಜ್ಞಾಪಿಸುತ್ತಾನೆ. ಆದರೆ ತಾಯಿಯ ಶಿರವನ್ನು ಛೇದಿಸಲು ಯಾವ ಮಕ್ಕಳೂ ಮುಂದೆ ಬರುವುದಿಲ್ಲ. ಪರಶುರಾಮನನ್ನು ಕರೆದು ತಾಯಿಯ ಶಿರಚ್ಛೇದನ ಮಾಡುವಂತೆ ಆಜ್ಞಾಪಿಸುತ್ತಾನೆ. ತಂದೆಯ ಆಜ್ಞಾಧಾರಕನಾದ ಪರಶುರಾಮ ಆಜ್ಞೆಯನ್ನು ನೆರವೇರಿಸುತ್ತಾನೆ. ತನ್ನ ಮಾತನ್ನು ಈಡೇರಿಸಿದ ಪರಶುರಾಮನಿಗೆ ಏನಾದರೂ ವರ ಕೇಳಿಕೊಳ್ಳುವಂತೆ ಹೇಳುತ್ತಾನೆ. ಪರಶುರಾಮ ತನ್ನ ತಾಯಿಯನ್ನು ಮತ್ತೆ ಬದುಕಿಸುವಂತೆ ಕೇಳಿಕೊಳ್ಳುತ್ತಾನೆ. ತಾಯಿ ಮರುಜೀವ ಪಡೆಯುತ್ತಾಳೆ. ಆದರೆ ಮಾತೃ ಹತ್ಯೆ ಮಾಡಿದ ಪಾಪಕ್ಕೆ ಪಶ್ಚಾತ್ತಾಪಪಡುತ್ತ, ಅಲೆದಾಡಿ ಮುನಿವರರನ್ನು ಕಂಡು ಪರಿಹಾರ ಸೂಚಿಸುವಂತೆ ಕೇಳಿಕೊಳ್ಳುತ್ತಾನೆ ಪರಶುರಾಮ.

ಗುಡಿಮಲ್ಲಂನಲ್ಲಿರುವ ಶಿವನನ್ನು ಪೂಜಿಸಿದರೆ ಮಾತೃಹತ್ಯಾ ದೋಷ ಪರಿಹಾರವಾಗುವುದೆಂದು ಮುನಿಗಳು ಉಪದೇಶಿಸುತ್ತಾರೆ ಆದರೆ ಆ ಹೆಸರಿನ ದೇವಾಲಯ ಎಲ್ಲಿದೆ ಎಂದು ಯಾರಿಗೂ ಗೊತ್ತಿಲ್ಲ. ಹೇಳುವವರೂ ಇಲ್ಲ. ಆದರ ಕಲ್ಪನೆಯೂ ಇಲ್ಲದೇ ಅಲೆದಾಡುತ್ತಾನೆ, ಪರಶುರಾಮ.

ತುಂಬ ದಿನಗಳ ಹುಡುಕಾಟದ ನಂತರ ನಲ್ಲಮಲ್ಲ ಎನ್ನುವ ಕಾಡಿನ ಅಂಚಿನಲ್ಲಿ, ಸುವರ್ಣಮುಖಿ ನದಿಯ ದಡದಲ್ಲಿ ಈ ದೇವಾಲಯ ಇರುವುದು ಗೊತ್ತಾಗುತ್ತದೆ. ಸ್ನಾನಾದಿಗಳಿಗಾಗಿ ಹತ್ತಿರದಲ್ಲಿಯೇ ಒಂದು ಕೊಳವನ್ನು ನಿರ್ಮಿಸಿಕೊಂಡು



ಧ್ಯಾನಾಸಕ್ತನಾಗುತ್ತಾನೆ, ಪರಶುರಾಮ. ಮಾರನೇ ದಿನ ಮೀಯಲು ಹೋದಾಗ ಆ ಕೊಳದಲ್ಲಿ ಒಂದು ಕಮಲದ ಹೂವು ಅರಳಿರುತ್ತದೆ. ಅದನ್ನು ತಂದು ಲಿಂಗಕ್ಕೆ ಅರ್ಪಿಸಿ ಪೂಜಿಸುತ್ತಾನೆ. ಪ್ರತಿದಿನ ಕೊಳದಲ್ಲಿ ಬಿಡುವುದು ಒಂದೇ ಹೂ. ಅದನ್ನು ನಿತ್ಯವೂ ಲಿಂಗಕ್ಕೆ ಅರ್ಪಿಸುತ್ತಿದ್ದ.

ಈ ಹೂವನ್ನು ಯಾರೂ ಮುಟ್ಟದಂತೆ, ಕೀಳದಂತೆ ಕಾಪಾಡಿಕೊಳ್ಳಲು ಪರಶುರಾಮನು ಚಿತ್ರಸೇನ ಎನ್ನುವ ಯಕ್ಷನನ್ನು ಕಾವಲು ಕಾಯಲು ನೇಮಿಸಿಕೊಳ್ಳುತ್ತಾನೆ. ಅವನು ಬೇರಾರೂ ಅಲ್ಲದೇ ಬ್ರಹ್ಮನ ಅಂಶವಾಗಿರುತ್ತಾನೆ. ನಾನು ಇದನ್ನು ನೋಡಿ ಕೊಳ್ಳಬೇಕೆಂದರೆ ನೀನು ನನಗೆ ಪ್ರತಿದಿನ ತಿನ್ನಲು ಒಂದು ಪ್ರಾಣಿಯನ್ನು ಬೇಟೆಯಾಡಿ ಕೊಡಬೇಕೆನ್ನುವ ಶರತ್ತಿನ ಮೇಲೆ ಒಪ್ಪಿಕೊಳ್ಳುತ್ತಾನೆ ಯಕ್ಷ. ಅದರಂತೆ ದಿನಕ್ಕೊಂದು ಪ್ರಾಣಿಯನ್ನು ಬೇಟೆಯಾಡಿ ತಂದುಕೊಡುತ್ತಿರುತ್ತಾನೆ ಪರಶುರಾಮ.



ಒಂದು ದಿನ ಯಕ್ಷನಿಗೆ ತಾನೂ ಶಿವನ ಪೂಜೆ ಮಾಡಬೇಕು ಎನ್ನುವ ಹಂಬಲ ಉಂಟಾಗಿ, ಪರಶುರಾಮನು ಬೇಟೆಗೆ ಹೋದ ಸಂದರ್ಭದಲ್ಲಿ ಆ ಹೂವನ್ನು ಕಿತ್ತು ಶಿವನಿಗೆ ಅರ್ಪಿಸಿ ಪೂಜಿಸುತ್ತಾನೆ. ಬೇಟೆಯಿಂದ ಬಂದ ಪರಶುರಾಮ ಪೂಜೆಗೆ ಹೂವು ತರಲೆಂದು ಹೋದಾಗ ಹೂವು ಇಲ್ಲದಿರುವುದನ್ನು ಕಂಡು ಕೋಪದಿಂದ ಯಕ್ಷನ ಮೇಲೆ ಯುದ್ಧ ಮಾಡುತ್ತಾನೆ. ಪರಶುರಾಮನ ಮುಂದೆ ಯಕ್ಷ ತೀವ್ರ ಗಾಯಗೊಳ್ಳುತ್ತಾನೆ. ಅವನ ಅಸಹಾಯಕತೆಯನ್ನು ಕಂಡ ಶಿವನು ಪ್ರತ್ಯಕ್ಷನಾಗಿ ಇಬ್ಬರಿಗೂ ಅಭಯ ಕೊಟ್ಟು ತನ್ನಲ್ಲಿ ಲೀನವಾಗಿಸಿಕೊಳ್ಳುತ್ತಾನೆ. ಚಿತ್ರಸೇನನಾಗಿ ಬ್ರಹ್ಮ, ಪರಶುರಾಮನಾಗಿ ವಿಷ್ಣು, ಲಿಂಗವಾಗಿ ಶಿವ, ಈ ತ್ರಿಮೂರ್ತಿಗಳೇ ಶಿವಲಿಂಗವಾಗಿ ರೂಪುಗೊಂಡಿದೆ. ಇದೇ ಗುಡಿಮಲ್ಲಂ ಎಂದು ಪ್ರತೀತಿಯಾಗಿದೆ ಅನ್ನುತ್ತಾರೆ.

ಇನ್ನೊಂದು ವಿಶೇಷವೆಂದರೆ, ಈ ದೇವಾಲಯವು ವೈಜ್ಞಾನಿಕವಾಗಿ, ಭೌಗೋಳಿಕವಾಗಿ, ವಾಸ್ತುಪ್ರಕಾರದಂತೆ ನಿರ್ಮಾಣವಾಗಿದೆ ಎನ್ನಲಾಗಿದೆ. ಪ್ರತಿ ೬೦ ವರ್ಷಗಳಿಗೊಮ್ಮೆ, ವಿಗ್ರಹದ ಚೌಕಾಕಾರದ ಪೀಠದಲ್ಲಿ ನೀರು ತುಂಬಿಕೊಂಡು ಪರಶುರಾಮೇಶ್ವರನ ಪಾದವನ್ನು ತೊಳೆಯುತ್ತದೆ ಎಂದು ಅಲ್ಲಿನ ಅರ್ಚಕರು ಹೇಳುತ್ತಾರೆ.

ವಾಹನ ಸೌಕರ್ಯ ಇಲ್ಲದ ಕಾರಣ ಜನಸಂಪರ್ಕವೇ ಇಲ್ಲದೇ ಬೆಳಕಿಗೆ ಬಾರದ ಈ ದೇವಾಲಯಕ್ಕೆ ಇತ್ತೀಚೆಗೆ ಭೇಟಿ ಕೊಡುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ ಅನ್ನುವುದೇ ಸಂತೋಷದ ವಿಷಯ ಅನ್ನುತ್ತಾರೆ ಆಲ್ಲಿನ ಜನ ಹಾಗೂ ಅರ್ಚಕರು. ಎಲ್ಲಾ ರೀತಿಯಲ್ಲಿ ವಿಶೇಷತೆ ಹೊಂದಿರುವ ಈ ದೇವಾಲಯ ಬಹಳ ಸುಂದರವಾದ ಪ್ರಾಂಗಣ ಹೊಂದಿದೆ. ಪ್ರಕೃತಿಯ ಮಡಿಲಲ್ಲಿ ಸುಂದರ ಪರಿಸರದಲ್ಲಿದ್ದು ಮನಸಿಗೆ ಮುದ ಕೊಡುವ ತಾಣವಾಗಿದೆ. ನೀವೂ ಒಮ್ಮೆ ನೋಡಿ ಬನ್ನಿ...!!

***

ಹೀಗೊಂದು ಎಡವಟ್ಟು...

ಕೆ.ಎನ್. ಭಗವಾನ್

ಹೀಗಾಗಬಾದಿತ್ತು...
ಏನು ಮಾಡೋದು, ಅಪರೂಪಕ್ಕೊಮ್ಮೆ ಹೀಗೆ ಆಗಿಬಿಡುತ್ತೆ !

ಮನೆಮಂದಿಯಲ್ಲ ಆ ಸಂಜೆ ರೈಲಿನಲ್ಲಿ ಹೈದರಾಬಾದಿಗೆ ಹೊರಟಿದ್ದಿವಿ, ನನ್ನ ಹಿರಿಯ ಸೊಸೆಯ ತಂಗಿ ವಾಸುಕಿ ಅಲ್ಲಿದ್ದ ಕಾರಣ. 'ನನ್ನ ಮದುವೆಯಾದ ನಂತರ ಒಂದು ಸಾರೀನೂ ನೀವು ಇಲ್ಲಿಗೆ ಬಂದಿಲ್ಲ. ಈ ಬೇಸಿಗೆ ರಜಕ್ಕೆ ಅಕ್ಕನಿಗೂ, ನಿಮ್ಮ ಮೊಮ್ಮಕ್ಕಳಿಗೂ ಸ್ಕೂಲ್ ರಜ ಇರುತ್ತಲ್ಲಾ, ಬಂದು ಒಂದು ವಾರ ಇದ್ದು ಹೋಗಿ' ಅಂತ ಹೇಳಿದ್ದಳು. ಸರಿ ಅಂತ ನಾವೆಲ್ಲ ಹೊರಡಲು ತಯಾರಾದಿವಿ. ನಮ್ಮ ಹಿರಿಯ ಮಗ ಮಾತ್ರ 'ಅಣ್ಣಾ, ಡಿಪಾರ್ಟ್ಮೆಂಟಿನಲ್ಲಿ ವರ್ಕ್ ಲೋಡ್ ಜಾಸ್ತಿಯಿದೆ. ನಾನು ಮನೇಲಿರ್ತೀನಿ, ನೀವು ಹೋಗ್ಬನ್ನಿ' ಅಂತ ಹೇಳಿ ಇಬ್ಬರು ಮೊಮ್ಮಕ್ಕಳೂ ಸೇರಿದಂತೆ ಆರು ಮಂದಿಗೆ ರೈಲ್ವೆ ಟಿಕೆಟ್ ಬುಕ್ ಮಾಡಿಸಿದ. ಯಶವಂತಪುರ ಸ್ಟೇಷನ್ನಿಗೆ ಅವನೇ ಕಾರಿನಲ್ಲಿ ನಮ್ಮನ್ನೆಲ್ಲ ಬಿಟ್ಟ.

ಕಾರಿನ ಡಿಕ್ಕಿಯಿಂದ ಲಗ್ಗೇಜುಗಳನ್ನೆಲ್ಲ ಇಳಿಸಿಕೊಂಡಾಗ ಎಲ್ಲವೂ ಸರಿಯಾಗಿದ್ದು ನನ್ನ ಚಿಕ್ಕ ಸೂಟ್‌ಕೇಸು ಮಾತ್ರ ಕಾಣೆಯಾಗಿತ್ತು! ಸೀಟುಗಳ ಕೆಳಗೆ ಹುಡುಕಿದರೂ ಇಲ್ಲ. ನಮ್ಮ ಒಂದೊಂದೇ ಲಗ್ಗೇಜನ್ನು ಹೊರಗತೆಗೆದು ಪೋರ್ಟಿಕೋನಲ್ಲಿ ಇಡುವಾಗಲೇ ಪರಪಾಟಾಗಿರೋದು ಅಂತ ನನ್ನ ಅನುಮಾನ. ನಮ್ಮ ಕೋಣೆಯ ಮಂಚದ ಕೆಳಗಿದ್ದ ಸೂಟಕೇಸನ್ನು ನಾನೇ ತಂದಿರಿಸಿದ್ದರೆ ಚೆನ್ನಾಗಿತ್ತು ಅಂತ ಪೇಚಾಡಿಕೊಂಡೆ. ಸಾಗಣೆಯಲ್ಲಿ ಎಲ್ಲರೂ ಕೈ ಹಾಕಿದ್ದರಿಂದಾಗಿ ಯಾರ್ಯಾರು ಯಾವ್ಯಾವ ಲಗ್ಗೇಜನ್ನು ಪೋರ್ಟಿಕೋಗೆ ತಂದಿಟ್ಟರೋ ತಿಳಿಯದು. 'ನೀನೇನೋ ಪೋರ್ಟಿಕೋದಲ್ಲಿ ನಿನ್ನ ಲಗ್ಗೇಜನ್ನು ನೋಡ್ಕೊಂಡೆ. ಆದರೆ ನನ್ನ ಸೂಟುಕೇಸೆಲ್ಲಿ ಅಂತ ನನ್ನನ್ನಾಗಲೀ, ಮಕ್ಕಳನ್ನಾಗಲೀ ಕೇಳಲೇ ಇಲ್ಲ' ಅಂತ ನನ್ನವಳನ್ನು ಆಕ್ಷೇಪಿಸಿದೆ.

ಅವಳು 'ನಿಮಗೂ ಮರೆವು ಜಾಸ್ತಿ ಆಗ್ತಾ ಇದೆ. ಸೂಟ್ ಕೇಸನ್ನ ಮಂಚದ ಕೆಳಗಿಟ್ಟಿದ್ದು ನಮಗೆ ಹೇಗ್ರೀ ಗೊತ್ತಾಗಬೇಕು?' ಅಂತ ನನ್ನನ್ನೇ ಲಗಾಡ್ಸಿದಳು.

ನನ್ನ ಪೇಚಾಟ ಕಂಡ ಸಂಜಯ್, 'ಅಣ್ಣಾ, ಟ್ರೈನಿಗೆ ಇನ್ನೂ ಒಂದು ಗಂಟೆ ಟೈಮಿದೆ. ಮನೆಗೆ ಹೋಗಿ ತಂದುಬಿಡ್ತೀನಿ' ಅಂತ ಹುಮ್ಮಸ್ಸಿನಿಂದ ಕೇಳಿದ. ಅದಾಗಲೇ ಸಮಯ ನಾಲ್ಕೂವರೆ ಗಂಟೆ. ಅಲ್ಲಿಂದ ಜಯನಗರದ ನಮ್ಮ ಮನೆಗೆ ಹೋಗಿಬರೋದು ಅಂದರೆ, ಅದೂ ಈ ಟ್ರಾಫಿಕ್‌ನಲ್ಲಿ? 'ಬೇಡ, ಹೇಗೋ ಆಗುತ್ತೆ ಬಿಡು' ಎಂದುಬಿಟ್ಟೆ. ಅವನು ಲಗ್ಗೇಜುಗಳನ್ನೆಲ್ಲ ನಮ್ಮ ಕಂಪಾರ್ಟ್ಮೆಂಟಿಗೆ ಸಾಗಿಸಿ ನಾವು ಸ್ವಸ್ಥಾನಗಳಲ್ಲಿ ಪ್ರತಿಷ್ಠಾಪನೆಗೊಳ್ಳುವವರೆಗೂ ಇದ್ದು ಮನೆಗೆ ಹಿಂದಿರುಗಿದ.

ಪ್ರಯಾಣದಲ್ಲಿ ಇರಬೇಕಾಗಿದ್ದ ಸಂಭ್ರಮ ನನ್ನ ಮಟ್ಟಿಗಂತೂ ಕಳೆದುಹೋಗಿತ್ತು. ಬೆಳಗ್ಗೆ ಆರೂವರೆಗೆ ಹೈದರಾಬಾದಿನಲ್ಲಿ ಇರುತ್ತೇವೆ. ನನಗೆ ಮೈಮೇಲಿರುವವನ್ನು ಬಿಟ್ಟರೆ ಬೇರೊಂದು ಜೊತೆ ಬಟ್ಟೆಯಿಲ್ಲ! ಸೋಪು, ಟವಲು, ಬ್ರಷ್ಷು ಪೇಸ್ಟುಗಳಿಗೂ ನನ್ನವಳನ್ನು ಆಶ್ರಯಿಸಬೇಕು. ರಾತ್ರಿ ತೊಟ್ಟ ಬಟ್ಟೆಯಲ್ಲೇ ಮಲಗಿ, ಬೆಳಗ್ಗೆ ಸ್ನಾನಾದಿಗಳನ್ನು ಮುಗಿಸಬೇಕು ಮತ್ತೆ ಅದೇ ಬಟ್ಟೆಗಳನ್ನು ಧರಿಸಬೇಕಾದ ಅನಿವಾರ್ಯತೆ! ಚಿಕ್ಕಂದಿನಲ್ಲಿ ಅಮ್ಮ ಹೇಳುತ್ತಿದ್ದ 'ದೈವವಿದ್ದೂ ದರಿದ್ರ ಅಂದಹಾಗೆ' ಎಂಬ ಗಾದೆ ನೆನಪಾಯಿತು. ಸದ್ಯ, ನನ್ನ ಕೈಚೀಲದಲ್ಲಿ ಸಾಕಷ್ಟು ಹಣ, ಬ್ಯಾಂಕಿನ ಕ್ರೆಡಿಟ್ ಕಾರ್ಡು, ಸೀನಿಯರ್ ಸಿಟಿಜನ್ ಕಾರ್ಡು, ಪುಟ್ಟ ಬಾಚಣಿಗೆ ಇರುವುದರಿಂದ ಹೇಗೋ ಮೂರು ದಿನ ತೂಗೀತು. ಆದರೂ ನಮ್ಮ ಕೋಣೆಯ ಮಂಚದ ಕೆಳಗೆ- ಸೂಟ್ ಕೇಸಿನೊಳಗೆ ಬೆಚ್ಚಗೆ ಮಲಗಿರುವ ಮೂರು ಜೊತೆ ಷರಟು ಪ್ಯಾಂಟುಗಳು, ಒಳ ಉಡುಪುಗಳು, ಸೋಪು, ಬ್ರಷ್ಷು, ಟವಲ್ ಇತ್ಯಾದಿಯಾಗಿ ಎಲ್ಲವೂ ನನ್ನನ್ನು ಒಮ್ಮೆಲೇ ಅಣಕಿಸಿದಂತೆ ಭಾಸವಾಯಿತು.

ಬೋಗಿಯೊಳಗೆ 'ನಿಮ್ಮ ಲಗ್ಗೇಜಿಗೆ ನೀವೇ ಜವಾಬ್ದಾರರು' ಎಂಬ ಎಚ್ಚರಿಕೆ ಮಾತು ಗೌತಮಬುದ್ಧನ ಬೋಧಿವೃಕ್ಷದಂತೆ ಕಂಡಿತು.

ಹೈದರಾಬಾದಿನ ಬಂಧುಗಳ ಮನೆ ಸೇರಿದಾಗ ರಾತ್ರಿ ಎಂಟಾಗಿತ್ತು. ವಾಸುಕಿಯನ್ನು ಹೊರಗೆ ಕರೆದು ನನ್ನ ಪರಪಾಡನ್ನು ತಿಳಿಸಿದೆ. ಆಕೆ 'ಮಾಮ, ಏನೂ ಯೋಚನೆ ಮಾಡಬೇಡಿ. ನಾಳೆ ಬೆಳಗ್ಗೆ ಒಂಭತ್ತಕ್ಕೆಲ್ಲ ಗಾರ್ಮೆಂಟ್ ಶೋರೂಂ ತೆಗೀತಾರೆ. ಹೋಗ್ಬಿಟ್ಟು ಬರೋಣ' ಎಂದಳು. ಆ ರಾತ್ರಿ ಹೇಗೋ ಕತೆ ಹಾಕಿದ್ದಾಯಿತು.

ಮರುದಿನ ಸ್ನಾನ ಮುಗಿಸಿ ತೊಟ್ಟಿದ್ದ ಬಟ್ಟೆಗಳನ್ನೇ ಧರಿಸಿ ಹತ್ತಿರದ ಶೋರೂಮಿಗೆ ಹೋಗಿ ಆದಷ್ಟೂ ಕಡಿಮೆ ಬೆಲೆಯ ಎರಡು ಸೆಟ್ ಜುಬ್ಬ ಪೈಜಾಮಗಳನ್ನು ಕೊಂಡು ತಂದಿವಿ. ಒಂದು ಸೆಟ್ ಬಿಳಿಯದು, ಇನ್ನೊಂದು ಕ್ರೀಂ ಬಣ್ಣದ್ದು. ಸುನಿಲ್ ನಮ್ಮನ್ನೆಲ್ಲ ಕಾರಿನಲ್ಲಿ ಕರೆದುಕೊಂಡು ಹೋಗಿ ಬಿರ್ಲಾ ಮಂದಿರ್, ಹುಸೇನ್ ಸಾಗರ, ಅದರ ನಡುವೆ ನಿಂತ ಬುದ್ಧ, ಚಾರ್ಮಿನಾರ್ ಮುಂತಾದ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲ ತೋರಿಸಿದರು. ಮರುದಿನ ರಾಮೋಜಿ ಫಿಲಂ ಸಿಟಿ ಎಂಬ ವಿಸ್ಮಯ ಲೋಕ ನೋಡಿದ್ದು ಒಂದು ಅಪೂರ್ವ ಅನುಭವ. ಬಿಳಿ ಜುಬ್ಬ, ಬಿಳಿ ಪೈಜಾಮ ಧರಿಸಿ ಚಾರ್ ಮಿನಾರಿನಲ್ಲಿ ಓಡಾಡುತ್ತಿರುವಾಗ ನನ್ನ ಸಹಧರ್ಮಿಣಿ 'ತಲೆಗೊಂದು ಟೋಪೀನೂ ಹಾಕಿದ್ದಿದ್ರೆ ಚೆನ್ನಾಗಿರ್ತಿತ್ತು' ಅಂತ ಗೇಲಿ ಮಾಡಿದಳು. ಹೇಗೋ ಅಂತು ಮೂರು ದಿನಗಳ ಹೈದರಾಬಾದ್ ಪ್ರವಾಸವನ್ನು ಮುಗಿಸಿದಿವಿ ಅನ್ನಿ!

***



ನವರಾತ್ರಿ – ಮನೆಮನೆಯಲ್ಲೂ ಬೊಂಬೆ ಹಬ್ಬ – ಡಾ. ಶ್ರೀಲಕ್ಷ್ಮಿ ಶ್ರೀನಿವಾಸನ್ ನಿವಾಸ

ಯತ್ನ ಮತ್ತು ವಿಫಲತೆ – ಲೇಖನ ಮಾಲೆ-7

ಬಿಗ್ ಝೀರೋ – ಅಕ್ಕ ತಮ್ಮ ಇಬ್ಬರೂ

– ಮಾಧುರಿ ಕೃಷ್ಣ

ಗಂಭೀರವಾಗಿ ಕುಳಿತಿದ್ದೆವು. ನಮ್ಮ ಮುಂದಿದ್ದ ಪ್ರಶ್ನೆಯಾದರೋ ಬಹಳ ಗಂಭೀರವಾದದ್ದು. ಯಾವ ಕೋನದಿಂದ ಬಗೆಹರಿಸಲು ನೋಡಿದರೂ ದೊಡ್ಡ ಝೀರೋಗೇ ಬಂದು ನಿಂತುಬಿಡುತಿದ್ದುದು ಇಬ್ಬರಿಗೂ ಬೇಸರವೇ ಆಗಿತ್ತು. ಕೊನೆಗೂ ನಿಟ್ಟುಸಿರು ಬಿಡುತ್ತ ತಮ್ಮನೆಂದ, "ನೀನೇ ಏನಾದ್ರೂ ಮಾಡಬೇಕಷ್ಟೆ! ನನ್ನ ಕೈಲಿ ಇನ್ನು ಬಿಲ್ ಕುಲ್ ಆಗೂದಿಲ್ಲ ಮಾರಾಯ್ತಿ!" ಅವನ ಮುಖವನ್ನೇ ನೋಡಿದೆ. ನಿರಾಶೆ ನಿಜವಾಗಿಯೂ ತುಂಬಿ ನಿಂತಿತ್ತು. ಊರಿಗೇ ವೈದ್ಯನಾಗಿ ತಂದೆಯ ವೃತ್ತಿಯನ್ನು ಮುಂದುವರಿಸಿಕೊಂಡು ಜನಾನುರಾಗಿಯಾಗಿದ್ದ. ಪದೇಪದೇ ಮಗನಿಗೆ ಕನ್ಯೆ ನೋಡಲು ಬರುವುದು ಅವನಿಗೆ ದೊಡ್ಡ ಉಪದ್ರವವೇ ಆಗಿತ್ತು.

ಇದ್ದಕ್ಕಿದ್ದಂತೆ ನನ್ನ ತಲೆಯಲ್ಲೇನೋ ಚಿಮ್ಮಿದಂತಾಯ್ತು. 'ಹೀಗೆ ಮಾಡಿದರೆ ಹೇಗೆ?' – ಸ್ವಗತವೆಂಬಂತೆ ಆಡಿಕೊಂಡ ಮಾತು ತಮ್ಮನಿಗೆ ಕೇಳಿಯೇಬಿಟ್ಟಿತು.

"ಹೀಗೆ ಮಾಡಿದರೆ ಹೇಗೆ ಎಂದರೆ ಅದೇನು ಮಾಡುವುದು?" ಎಂದು ತನ್ನ ಕತ್ತನ್ನು ಆದಷ್ಟೂ ಉದ್ದ ಮಾಡಿದ್ದಲ್ಲದೆ ಹಾಗೇ ಕುಳಿತೂಬಿಟ್ಟ.

"ಅದೇ... ಇದೀಗ ಬಂದ ಹೊಸಾ ಪ್ರಪೋಸಲ್..." ಮುಂದೇನು ಹೇಳುವುದೆಂದು ನನ್ನ ಮಸ್ತಿಷ್ಕಕ್ಕೆ ಹೊಳೆಯಲೇ ಇಲ್ಲ. ಬಾಯಿ ಮುಚ್ಚಿಕೊಂಡೆ.

"ಅದೇ.. ಅದನ್ನೇ ಹೇಳಿಬಿಡು ಮಾರಾಯ್ತಿ!" ತೆರೆದ ಬಾಯಿ, ಉದ್ದ ಮಾಡಿದ ಕತ್ತು ಅದೇ ಸ್ಥಿತಿಯಲ್ಲಿ ನಿಂತವು.

ಸತ್ಯವಾಗಿಯೂ ನನಗೇನೂ ಹೊಳೆದಿರಲಿಲ್ಲ. ಏನೋ ಸುಮ್ಮನೆ ಮಾತೊಂದು ಹೊರಬಿದ್ದಿತ್ತು. ಈಗ ತಮ್ಮನ ಮುಖ ನೋಡಿ ಯೋಚಿಸಲೇಬೇಕಾಯ್ತು, ಅದೂ ಶರವೇಗದಲ್ಲಿ!

ಆವತ್ತು ಚೂಟಿ ಹುಡುಗಿಯೊಬ್ಬಳು ಪಾರ್ಟಿಯಲ್ಲಿ ಗಮನ ಸೆಳೆದಿದ್ದಳು. ಪಾದರಸದಂತೆ ಓಡಾಡುತ್ತ ಬಂದ ಅತಿಥಿಗಳನ್ನೆಲ್ಲ ಮಾತಾಡಿಸುತ್ತ, ತಿಂಡಿತಟ್ಟೆಗಳನ್ನು ಅವರವರ ಕೈಗಿಡುತ್ತ, ಇಡೀ ಪಾರ್ಟಿ ಹಾಲಿನಲ್ಲಿ ಅವಳೇ ಓಡಾಡಿಕೊಂಡಿದ್ದಳು. ಶ್ವೇತ ಶುಭ್ರ ಮೇಲಂಗಿ ಮೇಲೆ ಕೆಂಪು ದಾರದ ಕಸೂತಿ, ನವಿರಾಗಿ ಕತ್ತನ್ನು ಬಳಸಿಹೋದ ತೆಳ್ಳಗಿನ ದುಪ್ಪಟ್ಟಾ, ಉದ್ದ ಚೈನಿಗೆ ತೂಗುಬಿಟ್ಟ ದೊಡ್ಡ ಲಾಕೆಟ್, ಮೊಳಕಾಲ ಕೆಳಗೆ ನೆರಿಗೆ ನೆರಿಗೆಯಾಗಿ ಚಿಮ್ಮುತ್ತಿದ್ದ ಕೆಂಪು ಬಾಟಂ. ಒಟ್ಟಿನಲ್ಲಿ ಎಷ್ಟು ಚುರುಕಾಗಿದ್ದಳೋ ಅಷ್ಟೇ ಚೆಲುವೆ ಕೂಡಾ! ನನ್ನ ಮನಸಿನ್ನಲ್ಲಿ ಆಸೆಯ ಚಿಗುರೊಂದು ಮೊಳೆದಿತ್ತು.

"ಏನು, ನಿಮ್ಮಳಿಯನಿಗೆ ಆಗಬಹುದೆಂದು ನೋಡುತ್ತಿದ್ದೀರೋ ಹ್ಯಾಗೆ?" ಪಕ್ಕದಲ್ಲಿದ್ದವಳು ಕೇಳಿದಳು.

"ಅರೇ ನನ್ನ ಮನಸ್ಸು ಇವಳಿಗೆ ಹ್ಯಾಗೆ ಗೊತ್ತಾಯಿತು!" ಎಂದು ನಾನು ಗಡಬಡಿಸಿಕೊಳ್ಳುವುದರಲ್ಲಿ ಅವಳೇ ಮಾತು ಮುಂದುವರಿಸಿದಳು. "ನೀವು ಅವಳನ್ನು ನೋಡುತ್ತಿದ್ದ ಪರಿ ನೋಡಿಯೇ ನಾನಾಗಲೇ ಎಲ್ಲ ವಿಚಾರಿಸಿಕೊಂಡೆ. ಅವಳಿಗೂ ಗಂಡು ನೋಡುತ್ತಿದ್ದಾರಂತೆ. ನಿಮ್ಮ ಸೋದರಳಿಯನಿಗೆ ತಕ್ಕ ಕನ್ಯೆ. ಮುಂದುವರೆಯಿರಿ, ಜೈ ಶ್ರೀರಾಮ್" ಎಂದು ಹೆಬ್ಬೆಟ್ಟು ಎತ್ತಿ

ವಿಶ್ ಮಾಡೇಬಿಟ್ಟಳು. ಅಷ್ಟಕ್ಕೇ ನಿಲ್ಲದೆ ಆ ಸ್ನೇಹಿತೆ ತಾನಾಗೇ ಮುಂದುವರಿದು ಅಗತ್ಯವಾದ ಮಾಹಿತಿ, ಫೋಟೋ, ಜಾತಕ ಎಲ್ಲವನ್ನೂ ಒಂದೇ ಯತ್ನದಲ್ಲಿ ಮುಗಿಸಿಯೇಬಿಟ್ಟಳು ಆ ಜಾಣೆ.

"ಆದರೆ ಇಲ್ಲಿ ಸಮಸ್ಯೆ ಇರುವುದೇ ನಮ್ಮ ವರನಲ್ಲಿ! ಬಡಪೆಟ್ಟಿಗೆ ಯಾರನ್ನೂ ಒಪ್ಪಿಕೊಳ್ಳುವುದಿಲ್ಲ ಅವನು! ನಿನ್ನೆ ಇಡೀ ದಿನ ರಜೆ ಹಾಕಿಸಿ, ಮೂರು ಮಂದಿ ಕನ್ಯೆಯರನ್ನು ನೋಡಿ ಉಪ್ಪಿಟ್ಟು ತಿಂದು ಬಂದದ್ದಾಯ್ತು. ಏನೋ ಅವನದ್ದೇ ಆದ ಫರ್ಫೆಕ್ಷನ್ನಿನ ಭ್ರಾಂತಿ ಅವನಿಗೆ!"

"ಸರಿ.. ಈ ಕನ್ಯೆಯನ್ನೂ ನೋಡಿ ಮುಗಿಸಿಯೇ ಬಿಡೋದು" ಎಂದು ನುಡಿದವಳು ಕೂಡಲೇ ನಾಲಿಗೆ ಕಚ್ಚಿಕೊಂಡೆ.

"ಏನು.. ಏನು ಹೇಳಿದೆ ನೀನು?" ತಮ್ಮ ಒಂದೇ ಏಟಿಗೆ ಛಂಗನೆ ನೆಗೆದು ನಿಂತ.

ಭಾರೀ ಗುಟ್ಟೊಂದನ್ನು ಹೊರಹಾಕುವಂತೆ ಮೆತ್ತನೆಯ ಧ್ವನಿಯಲ್ಲಿ ತಮ್ಮನಿಗೆ ಹೇಳಿದೆ. ಅದಕ್ಕೆ ಭಲೇ ಭೇಷ್ ಎಂದದ್ದು ಮಾತ್ರ ನಮ್ಮೆಜಮಾನರು. ಅದ್ಯಾವಾಗ ಬಂದು ಕೇಳಿಸಿಕೊಂಡರೋ! ದೋಸೆ ಕ್ಯಾಂಪ್ ಎಂದ ಕೂಡಲೇ ಸದ್ದಾಗುವಂತೆ ಬಾಯಿ ಚಪ್ಪರಿಸಿದ್ದೂ ಅವರೇ!

ಅಂತೂ ಅವಸರವಸರವಾಗಿ ನಮ್ಮೊಳಗೊಂದು ಉಪಾಯ ಹುಟ್ಟಿ ಅಂದೇ ಸಂಜೆಗೆ ನಮ್ಮ ಬಡಾವಣೆಯಲ್ಲಿರುವ ಪ್ರಸಿದ್ಧಿ ದೋಸಾ ಕ್ಯಾಂಪ್‌ಗೆ ನಮ್ಮ ವರನನ್ನು ಬರ ಹೇಳುವುದು, ಕನ್ಯೆಯನ್ನು ಅವಳ ತಂದೆತಾಯಿ ಅಲ್ಲಿಗೇ ಕರೆತಂದು, ಅಕಸ್ಮಾತ್ ಅಲ್ಲಿಯೇ ಭೆಟ್ಟಿಯಾದಂತೆ ಕನ್ಯೆ ಮತ್ತು ವರನನ್ನು ಅಲ್ಲಿ ಮುಖಾಮುಖಿಯಾಗಿಸುವುದು.

"ದೋಸೆ ಕ್ಯಾಂಪಿಗೋ, ಖಂಡಿತಾ ಬರ್ತೇನೆ" ಎಂದ ವರ.

ವಾರ್ ಹೀರೋಗಳಂತೆ ಖುಷಿಯಲ್ಲಿ ದೋಸೆಯ ಘಮ ಆಸ್ವಾದಿಸುತ್ತಾ ನಾವು ಮೂವರೂ ಬಾಗಿಲೇ ಇಲ್ಲದ ಹೋಟೇಲಿನ ಒಳಕ್ಕೆ ಕಾಲಿಟ್ಟೆವು. ಅಲ್ಲಿ ಎದುರಿಗೇ ಕಂಡುಬಂದ ದೃಶ್ಯವಾದರೂ ಏನು? ನಮ್ಮ ಸೋದರಳಿಯ ಆಗಲೇ ನಾನಂದು ಕಂಡು ಮೆಚ್ಚಿದ ಕನ್ಯೆಯೊಂದಿಗೆ ಕುಳಿತು ದೋಸೆ ಕತ್ತರಿಸುತಿದ್ದ. ಜತೆಯಲ್ಲಿ ಮತ್ತೊಬ್ಬ ಸುಂದರ ಯುವಕನೂ ಕುಳಿತು ಆ ಕನ್ಯೆಯೊಂದಿಗೆ ಕುಶಾಲಿನಲ್ಲಿ ಮಾತಾಡಿಕೊಂಡು ನಗೆಯಾಡುತಿದ್ದ. ನಮ್ಮನ್ನು ಗಮನಿಸಿದ ತಮ್ಮನ ಮಗ, ಬಾಯಲ್ಲಿದ್ದ ದೋಸೆಯನ್ನು ನುಂಗುತ್ತ, "ಅಂಕಲ್, ಆಂಟೀ, ಪಪ್ಪಾ.. ಮೀಟ್ ಮೈ ಫ್ರೆಂಡ್ಸ್. ಇವರಿಲ್ಲಿ ಅಕಸ್ಮಾತ್ತಾಗಿ ಸಿಕ್ಕಿದರು. ಸದ್ಯದಲ್ಲೇ ಮಾಲೆ ಹಾಕಿಕೊಳ್ಳುವವರು. ಅಗೋ ಅಲ್ಲಿ ಕುಳಿತವರು ಅವಳ 'ಅಪ್ಪ ಅಮ್ಮ' ಎಂದು ಬೆರಳು ಮಾಡಿ ತೋರಿಸಿದವನು ಅದೇ ಬೆರಳಿಂದ ತನ್ನ ಖಾಲಿಯಾದ ಪ್ಲೇಟ್ ಬದಿಗೆ ತಳ್ಳಿದನು. ಅಲ್ಲಿ ಕುಳಿತವರಾದರೋ ತಮ್ಮ ಕರ್ಚೀಫಿನಿಂದ ಹಣೆ ಮುಖ ಒರೆಸಿ ಕೊಳ್ಳುವವರಂತೆ ಮುಖ ಮುಚ್ಚಿಕೊಂಡಿದ್ದರು!

ಸೋದರಳಿಯ ಮತ್ತು ಅವನ ಸ್ನೇಹಿತ ಹೆಣ್ಣು ಹಾಗೂ ಗಂಡು ಖಾಲಿ ಮಾಡಿದ ಟೇಬಲ್‌ನಲ್ಲಿ ಕುಳಿತುಕೊಳ್ಳಲಿಚ್ಚಿಸದೇ ನಾವು ಬೇರೊಂದು ಟೇಬಲ್ಲಿಗೆ ಖಾಲಿದೋಸೆ ತಿನ್ನಲು ಜಾರಿಕೊಂಡೆವು.

***

ನಗೆ ಬರಹ

ಕಾಣದಂತೆ ಮಾಯವಾದನು

– ಎಂ.ಎಸ್.ಎನ್.

ವಿಶ್ವ ತನ್ನ ಸ್ವರಚಿತ ಕವನ ಸಂಗ್ರಹ ಕೃತಿಯನ್ನು ಹಿಡಿದು ಬೇಸರದಿಂದ ಕುಳಿತಿದ್ದ.

"ಯಾಕೆ ವಿಶ್ವ, ಪುಸ್ತಕ ಮಾರಾಟ ಆಗ್ಲಿಲ್ವಾ?" ಎಂದೆ.

"ಕವನ ಪುಸ್ತಕಕ್ಕೆ ಡಿಮ್ಯಾಂಡ್ ಇಲ್ಲ ಬಿಡು, ನನ್ನ ಯೋಚನೆ ಅದಲ್ಲ, ಕಳೆದ ವಾರ ಗ್ರಂಥಾಲಯ ಉದ್ಘಾಟನೆ ಆಯ್ತಲ್ಲ, ಆ ಬಗ್ಗೆ ಚಿಂತೆ" ಎಂದ.

"ಓಹ್ ! ಸಚಿವರನ್ನೇ ಕರೆಸಿ ಗ್ರಂಥಾಲಯ ಉದ್ಘಾಟನೆ ಮಾಡಿಸ್ದೆ! ಚೆನ್ನಾಗಾಯ್ತಾ ಕಾರ್ಯಕ್ರಮ?"

"ತುಂಬಾ ಜನ ಸೇರಿದ್ರು. ಸಚಿವರು ಯಥಾಪ್ರಕಾರ ಒಂದು ಗಂಟೆ ತಡವಾಗಿ ಬಂದ್ರು. ಟೇಪ್ ಕಟ್ ಮಾಡಿ ದೀಪ ಹಚ್ಚಿದ್ರು. ಅಷ್ಟರಲ್ಲಿ ಯಾವ್ದೋ ಫೋನ್ ಬಂತು, ಆಚೆಗೆ ಓಡಿ ಕಾರಲ್ಲಿ ಕೂತ್ರು, ಮಾಯವಾದ್ರು."

"ಇರ್ಲಿ ಬಿಡು, ಸಚಿವರಿಗೆ ಎಷ್ಟೋ ಕೆಲ್ಸಗಳು ಇರುತ್ತೆ" ಎಂದೆ.

"ಉದ್ಘಾಟನೆ ಮಾಡಿದವರು ಒಳಗೆ ಬಂದು ಗ್ರಂಥಾಲಯ ನೋಡೋದೇ ಬೇಡ್ವಾ?" ಎಂದ.

"ನೋಡು ವಿಶ್ವ, ಕಾರ್ಯಕ್ರಮ ಉದ್ಘಾಟನೆ ಮಾಡಿದ ನಾಯಕರು ಅದ್ರಲ್ಲಿ ಭಾಗವಹಿಸೊಲ್ಲ, ಆ ಪದ್ಧತಿ ನಮ್ಮಲ್ಲಿ ಇದ್ದೇ ಇದೆಯಲ್ಲ" ಎಂದೆ.

"ಹೌದಾ?" ವಿಶ್ವನಿಗೆ ಷಾಕಾಯಿತು.

"ಹೌದು! ಮೊನ್ನೆ 'ಸತ್ಯಂ ವದ, ಧರ್ಮಂ ಚರ' ವಿಷಯದ ಬಗ್ಗೆ ಏಳು ದಿನಗಳ ಶಿಬಿರ ಇತ್ತು. ಒಳ್ಳೇ ಬುದ್ಧಿ, ಒಳ್ಳೇ ಮನಸ್ಸು ಪಡೆಯೋದು ಹೇಗೆ ಅಂತ ಆ ಶಿಬಿರದಲ್ಲಿ ಕಲಿಸಿದರು. ನಾಯಕರೊಬ್ರು ಉದ್ಘಾಟನೆ ಮಾಡಿ ದೀಪ ಹಚ್ಚಿದ್ರು, ಎರಡೇ ನಿಮಿಷಕ್ಕೆ ಹೊರಟ್ರು"

"ಯಾಕೆ, ಅವರಿಗೆ ಶಿಬಿರದ ವಿಷಯಗಳು ಬೇಡವಾಗಿತ್ತಾ?"

"ಸತ್ಯಂ ವದ, ಧರ್ಮಂ ಚರ ಅನ್ನೋದು ಪಾಲಿಸಿದರೆ ಲೀಡರ್ಗೆ ನಷ್ಟ ಆಗುತ್ತೆ" ಎಂದೆ.

"ಹಾಗಿದ್ರೆ ನಾಯಕರಿಗೆ ಒಳ್ಳೇ ವಿಷ್ಯಗಳು ತಲುಪಿಸೋದು ಹ್ಯಾಗೆ?" ಎಂದು ವಿಶ್ವ ಪರಿತಪಿಸಿದ.

"ಅವರು ವಿಷಯಾತೀತರು, ಎಲ್ಲಾ ತಿಳಿದ ಸಕಲ ಕಲಾ ನಿಪುಣರು. ಭಗವದ್ಗೀತೆಯ ಡಿಸ್ಕೋರ್ಸ್ ಉದ್ಘಾಟನೆಗೆ ಬರ್ತಾರೆ, ಭಾಷಣ ಮಾಡ್ತಾರೆ, ತಕ್ಷಣ ಕಳಚಿಕೊಳ್ತಾರೆ. ಗೀತೆಯಲ್ಲಿ ಎಷ್ಟು ಅಧ್ಯಾಯಗಳಿವೆ ಅನ್ನೋದು ಅವರಿಗೆ ಬೇಕಿಲ್ಲ. ರಥ ಓಡಿಸಿದ್ದು ಕೃಷ್ಣನೋ, ಅರ್ಜುನನೋ ಎಂಬುದು ಕೆಲವರಿಗೆ ಗೊಂದಲ ಇರಬಹುದು."

“ಈ ನಿರಾಸಕ್ತಿಗೆ ಏನು ಕಾರಣ?” ಎಂದ ವಿಶ್ವ.

“ಆರ್ಥಿಕ ಲಾಭ ಇಲ್ಲದಿದ್ದಾಗ ಎಷ್ಟು ತಾಸು ಕುಳಿತು ಕೇಳಿದರೇನು?”

ನಾ ಕಂಡಂತೆ ಯಾವ್ದೇ ಕಾರ್ಯಕ್ರಮಕ್ಕೆ ರಾಜಕೀಯ ಮುಖಂಡರು ಬಂದ್ರೂ ತಮ್ಮ ಭಾಷಣ ಆದ ಮೇಲೆ ಅಲ್ಲಿ ಉಳಿಯೋದಿಲ್ಲ. ಸಾಹಿತ್ಯ ಸಮ್ಮೇಳನದ ಉದ್ಘಾಟನೆಗೆ ಸಾಮಾನ್ಯವಾಗಿ ಮಂತ್ರಿಗಳೇ ಬರ್ತಾರೆ. ಉದ್ಘಾಟನೆಯಂದು ಲಕ್ಷ ಜನ ಸೇರಿರುತ್ತಾರೆ. ನಾಯಕರ ಭಾಷಣದ ಪ್ರತಿಯನ್ನು ಎಲ್ಲರಿಗೂ ಹಂಚಲಾಗುತ್ತೆ. ನಾಯಕರು ಕೆಲವೊಮ್ಮೆ ಮೊದಲು ಮತ್ತು ಕಡೆಯ ಪುಟವನ್ನಷ್ಟೇ ಓದಿ ಹೆಲಿಕಾಪ್ಟರನ್ನು ಹತ್ತೇ ಬಿಡುತ್ತಾರೆ. ಉಳಿದಿದ್ದು ನೀವು ಓದಿಕೊಳ್ಳಿ ಎಂದರ್ಥ. ಮೂರು ದಿನದ ಸಮ್ಮೇಳನದಲ್ಲಿ ಇರುವ ವಿವಿಧ ಗೋಷ್ಠಿಗಳಲ್ಲಿ ಕಲಿಯುವಂಥದ್ದು, ತಿಳಿಯುವಂಥದ್ದು ತುಂಬಾ ಇರುತ್ತದೆ. ಉತ್ತಮ ಬೋಧನಾತ್ಮಕ ಅಂಶಗಳನ್ನು ನಾಯಕರಿಗೆ ತಿಳಿಸಲು ಆಗಲಿಲ್ಲವಲ್ಲ ಎಂಬ ದುಃಖ ಕಾರ್ಯಕರ್ತರಿಗೆ.

“ಇಡೀ ಶಿಬಿರದಲ್ಲಿ ಅರ್ಧ ದಿನವಾದರೂ ನಾಯಕರು ಕುಳಿತು ಇತರರ ಭಾಷಣ ಕೇಳಿದ ಉದಾಹರಣೆ ಇದೆಯಾ ವಿಶ್ವ?” ಎಂದೆ.

“ನಮ್ಮ ತಂದೆಯವರು ಹೇಳ್ತಾ ಇದ್ರು. ಕಡಿದಾಳ್ ಮಂಜಪ್ಪನೋರು, ಕೆಂಗಲ್ ಹನುಮಂತಯ್ಯನವರು ಗಮಕ ವ್ಯಾಖ್ಯಾನ ಇಷ್ಟಪಡ್ತಾ ಇದ್ರಂತೆ. ದೂರದ ಪ್ರವಾಸ ಮುಗಿಸಿ ಬೆಂಗಳೂರಿಗೆ ಎಂಟರ್ ಆಗೋಕೆ ಮುಂಚೆ ಹೊರ ವಲಯದಲ್ಲಿ ಒಂದು ರಾತ್ರಿ ಕ್ಯಾಂಪ್ ಮಾಡಿ ಜೈಮಿನಿ ಭಾರತ, ಕುಮಾರವ್ಯಾಸ ಭಾರತಗಳ ವಾಚನ, ವ್ಯಾಖ್ಯಾನ ಕೇಳಿಕೊಂಡು ಬರುತ್ತಿದ್ದರಂತೆ. ಇತ್ತೀಚೆಗೆ ಇಂಥ ಉದಾಹರಣೆಗಳಿಲ್ಲ” ಎಂದೆ.

“ಯಾಕೆ ಸಾಹಿತ್ಯ, ಸಂಗೀತ, ಉತ್ತಮ ವಿಷಯಗಳಲ್ಲಿ ನಾಯಕರಿಗೆ ಆಸಕ್ತಿ ಇರೊಲ್ಲವಾ?” ವಿಶ್ವ ಕೇಳಿದ.

“ಆಸಕ್ತಿ ಇರುತ್ತೆ, ಆದ್ರೆ ಮನಸ್ಸು, ತಲೆ ಬಿಸಿ ಮಾಡುವ ಬುದ್ಧಿ ಮಾತುಗಳು, ಧರ್ಮದ ವಿಶ್ಲೇಷಣೆಗಳು ಯಾಕೆ ಬೇಕು? ತಿಳಿದುಕೊಂಡು ಏನಾಗಬೇಕು?” ಎಂದೆ.

“ಇದು ನಿನ್ನ ಅಭಿಪ್ರಾಯವಾ?” ಎಂದು ವಿಶ್ವ ಕೇಳಿದ.

“‘ನನ್ನದೊಬ್ಬನದಲ್ಲ, ಸಾವಿರಾರು ಜನರ ಅಭಿಪ್ರಾಯ. ‘ಅಕ್ಕ ಸಮ್ಮೇಳನ’ಕ್ಕೆ ಮಂತ್ರಿಗಳು ಅಮೆರಿಕಕ್ಕೆ ಹೋಗುತ್ತಾರೆ. ಉದ್ಘಾಟನ ದಿನ ವೇದಿಕೆ ತುಂಬಾ ರಾಜಕಾರಣಿಗಳ ದಂಡೇ ಕೂತಿರುತ್ತೆ. ಉದ್ಘಾಟನಾ ಸಮಾರಂಭದಲ್ಲಿ ಎಲ್ಲರೂ ಸೊಗಸಾಗಿ ಭಾಷಣ ಮಾಡುತ್ತಾರೆ. ತಮ್ಮ ಮಾತು ಮುಗಿಸಿ ವೇದಿಕೆಯಿಂದ ಇಳಿದ ಮೇಲೆ ಬಹುಮಂದಿ ಮಾಯವಾಗಿರುತ್ತಾರೆ. ಮೂರು ದಿನಗಳ ಸಮ್ಮೇಳನದಲ್ಲಿ ಮುಂದೆ ಏನಾಯಿತು ಎಂಬುದು ನಾಯಕರಿಗೆ ಬೇಕಿರುವುದಿಲ್ಲ” ಎಂದೆ.

“ಇದಕ್ಕೇನಿದೆ ಪರಿಹಾರ?” ವಿಶ್ವನ ಪ್ರಶ್ನೆ.

“ಪರಿಹಾರ ಅಂತ ಹೇಳೋಕಾಗೊಲ್ಲ. ಯಾವುದು ಮುಖ್ಯ, ಯಾವುದು ಅಮುಖ್ಯ ಅನ್ನೋದು ಅವರೇ ಯೋಚ್ನೆ ಮಾಡ್ಬೇಕು. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದಾಗ ಜಯನಗರದ ಹಾಸ್ಯೋತ್ಸವಕ್ಕೆ ಬಂದು ಅರ್ಧ ದಿನ ಆರಾಮವಾಗಿ ಕುಳಿತು ಆನಂದಪಟ್ಟಿದ್ದು ಯೂ ಟ್ಯೂಬ್ನಲ್ಲಿದೆ. ಇಂಥ ಆನಂದ ಉಳಿದ ನಾಯಕರಿಗೂ ಸಿಗಲಿ ಎಂಬುದೇ ಸಮ್ಮೇಳನ ಸಂಘಟಕರ ಉದ್ದೇಶ” ಎಂದೆ.

"ಅಮೆರಿಕದ ಅಕ್ಕ ಸಮ್ಮೇಳನ ಸಂಘಟಕರು ಏನು ಹೇಳುತ್ತಾರೆ?" ವಿಶ್ವ ಕೇಳಿದ.

"24 ಗಂಟೆ ವಿಮಾನ ಪ್ರಯಾಣ ಮಾಡಿ ಸಮ್ಮೇಳನಕ್ಕೆಂದು ಅಮೆರಿಕಕ್ಕೆ ಬಂದವರು 2 ಗಂಟೆ ಕಾಲ ನೆಮ್ಮದಿಯಾಗಿ ಕೂರದಿದ್ದರೆ ಹೇಗೆ? ಮೂರು ದಿನಗಳ ಬಿಡುವು ಇಟ್ಟುಕೊಂಡು ಬರಬೇಕು. ಅಕ್ಕ ಸಮ್ಮೇಳನದಲ್ಲಿ ವಿವಿಧ ಗೋಷ್ಠಿಗಳು, ವಸ್ತು ಪ್ರದರ್ಶನ, ಚಲನಚಿತ್ರಗಳು, ನೃತ್ಯ, ನಾಟಕಗಳು 3-4 ಸಮಾನಾಂತರ ವೇದಿಕೆಗಳಲ್ಲಿ ಸತತವಾಗಿ ನಡೀತಿರುತ್ತೆ. ಮದುವೆ ಮನೆಯ ಟೈಪ್ ಅದ್ದೂರಿ ಊಟ ಎಲ್ಲ ಪ್ರತಿನಿಧಿಗಳಿಗೆ ಮಾಡಿಸಿರ್ತಾರೆ. ಮೈಸೂರು ಅರಮನೆ, ಹೊಯ್ಸಳ ಶೈಲಿಯ ದೇಗುಲಗಳ ಸ್ತಬ್ಧಚಿತ್ರಗಳಿರುತ್ತೆ. ಇವನ್ನೆಲ್ಲ ನಮ್ಮ ನಾಯಕರು ನೋಡಿದ್ರೆ ನಮಗೆ ಸಂತೋಷ ಆಗುತ್ತೆ. ಪಾಪ, ಅವರಿಗೆ ಟೈಂ ಇರೊಲ್ಲವಲ್ಲ ಎಂದು ಪೇಚಾಡಿದರು."

"ಹಾಗಿದ್ರೆ ನಾಯಕರಿಗೆ ಟೈಂ ಯಾವಾಗ ಇರುತ್ತೆ?"

"ಟೈಂಗೂ ನಾಯಕರಿಗೂ ಆಗಿಬರೊಲ್ಲ. ಚುನಾವಣೆಗೆ ಮುಂಚೆ ಟೈಂ ಸಿಗುವುದಿಲ್ಲ. ಪ್ರಚಾರ ಇರುತ್ತೆ. ಚುನಾವಣೆ ಮುಗಿದ ಮೇಲೂ ಟೈಂ ಸಿಗುವುದಿಲ್ಲ. ಗೆಲ್ಲುತ್ತೇನೋ, ಇಲ್ಲವೋ ಎಂಬ ಆತಂಕ ಇರುತ್ತೆ. ಗೆದ್ದ ಮೇಲೆ ಯಾವ ಖಾತೆ ಸಿಗುತ್ತೆ ಎಂಬ ತೊಳಲಾಟ. ಎಲ್ಲಾ ಸಿಕ್ಕ ಮೇಲೆ ಸೈಲೆಂಟಾಗಿ ಬಾಯಿ ಆಡಿಸದೆ ತಿನ್ನಲು ಯಾವ ವಿಧಾನ ಅನುಸರಿಸಬೇಕು ಎಂಬ ಆಲೋಚನೆ ಕೆಲವು ನಾಯಕರಿಗೆ" ಎಂದೆ.

"ಕೆಲವರು ಮಾತ್ರಾನಾ?"

"ಹೌದು, ಒಳ್ಳೇ ಲೀಡರ್ಸೂ ನಮ್ಮಲ್ಲಿದ್ದಾರೆ" ಎಂದಾಗ ವಿಶ್ವ ಹಾಡನ್ನು ಹೇಳಿದ.

"ಕಾಣದಂತೆ ಮಾಯವಾದನು
ನಮ್ಮ ಸಚಿವ ಆಫೀಸು ಸೇರಿಕೊಂಡನು
ಕೊಡುವುದನ್ನು ಕೊಟ್ಟು ಬಿಡುವುದನ್ನು ಬಿಟ್ಟು
ದೇವರಂತೆ ಮಾಯವಾದನು"

ವಿಶ್ವನ ಈ ಪ್ರಶ್ನೆ ಎಲ್ಲ ಸಂಘಟಕರ ಧ್ವನಿ ಎನ್ನಿಸಿತು. ಶಿಬಿರ, ಸಮ್ಮೇಳನಗಳನ್ನು ಉದ್ಘಾಟನೆ ಮಾಡಿದವರು ಅರ್ಧ ದಿನವಾದರೂ ಸಭೆಯಲ್ಲಿ ಭಾಗವಹಿಸಲು ಬಿಡುವಿಲ್ಲವಾದರೆ ಬರಲೇಬಾರದು.

ಕಂಡೀಷನ್ಸ್ ಅಪ್ಲೈ : ಇದರಿಂದ ತನಗೇನು ಲಾಭ ಎಂದು ಯೋಚಿಸುವವರಿಗೆ ಇದು ಅನ್ವಯಿಸುವುದಿಲ್ಲ.

***

ಷಣ್ಮುಖ ದಂಡಕ

- ರತ್ನಾ ಮೂರ್ತಿ

ಹೇ! ಸ್ವಾಮಿನಾಥ, ಇಂದ್ರಾದಿ ಪೂಜಿತ, ಪಂಚಾಕ್ಷರಾದಿ ಮನು ಮಂತ್ರಿತ, ವಲ್ಲೀಶ ಮಮನಾಥ, ಅಸ್ತ್ರಾದಿ ಪಂಡಿತ, ಗಾಂಗೇಯ ಚಾಂಪೇಯ ಮಲ್ಲಿಕಾ ಸೌಗಂಧ ಕುಸುಮ ಪ್ರಿಯ; ಹೇ! ದೇವದೇವಾಯ, ಶೈವಾಯ, ಶಾಂತಾಯ, ಗಹನಾಯ, ಢಂಭಾಯ, ಅಮೃತಾಯ, ಜೃಂಭಾಯ, ವೇದಗರ್ಭಾಯ; ಶಿಖಿವಾಹನಾಯ, ಸುಮನೋಹರಾಯ, ಸುರಕಟಕ ನಾಯಕನೆ; ಕ್ರೌಂಚ ವಿದಾರಣನೆ, ಪಾರ್ವತೀ ನಂದನನೆ, ಪೋತನ ಷಡಾನನೆ, ಮೈನಾಕ ಮರ್ದನನೆ, ಕೇಕೀ ವಾಹನನೆ, ಹೇ! ಮಹಾಸೇನನೆ; ಈಶಾನ ತನಯ, ಸೌಮ್ಯ ಸುಂದರ ಕಾಯ; ಶಕ್ತಿಧರ ಷಾಣ್ಮಾತುರ, ಶ್ರೀಶೇಷ ಅವತಾರ, ಭಕ್ತ ಜನಪ್ರಿಯ ವಿಶ್ವೇಶ್ವರಾ, ನಿಜಕಾರುಣ್ಯ ಭಂಡಾರ, ವ್ಯೋಮಕೇಶ ಕುಮಾರ, ನೀಲಕಂಠಾತ್ಮಜ, ಮಹಾದೇವಾತ್ಮಜ, ಸ್ವಾಮಿ ಕುಕ್ಕುಟಧ್ವಜ, ದ್ವಿಷಡ್ಭುಜ ವಿರಾಜಾ, ಶರಣಂ ಶರಣಂ ಪ್ರಪದ್ಯೇ;

ಅಗ್ನಿಗರ್ಭನು ನೀನು ಶಮೀಗರ್ಭನು ನೀನು, ಪ್ರಮತ್ತ ಉನ್ಮತ್ತ ಷಣ್ಮುಖನು ನೀನು, ದ್ವಿಷಣ್ಣೇತ್ರನು ನೀನು, ರಕ್ಷೋಬಲವಿಮರ್ದನನು, ದೇವಸೇನಾಪತಿಯು, ಕೃತ್ತಿಕಾ ಸುತ ನೀನು, ಶರೋದ್ಭೂತನು ನೀನು, ವಿಶ್ವರೇತನು ನೀನು; ಶುಭಂಕರನು ನೀನು, ಕರುಣಾಕರ, ವಟುವೆ ಮಾಯಾಧರ, ಸ್ವಾಮಿ ಸುಮನೋಹರಾ;

ಶ್ರಿತಾನಂದದಾತ್ರ, ಕಮನೀಯಗಾತ್ರ, ವಿಧೀಶ ತವ ಭ್ರಾತ್ರ, ತವ ಜನಕ ಫಾಲನೇತ್ರ, ದೇವಾಧಿದೇವ ನುತ, ಸುರನರೋರುಗ ನಮಿತ, ನಿತಾಂತ ಕಾಂತಿ ಸಂಶೋಭಿತ, ಅಕ್ಷಯ ಮಹಿಮಾನ್ವಿತ;

ನಮುಚಿ ಸುತ ತಾರಕನ ತಪದುರಿ ಚಡಾಳಿಸುತ ಆಪದ್ವಿನಾಶಕನೆ ಸುಡು ಸುಡುತಲಿರಲು, ಸುಮನಸರು ಕಂಗೆಡಲು, ನಾಕವೇ ನಡುಗುತಿರಲು, ದಿವಿಜರೇ ದಿಕ್ಕೆಟ್ಟು ಓಡುತಿರಲು, ತಾಪತ್ರಯಾಂತಕನೆ, ಋಣತ್ರಯ ವಿಮೋಚಕನೆ, ಗೌರೀ ಕುಮಾರಕನೆ, ತ್ರೈಲೋಕ್ಯನಾಯಕನೆ, ಬಂಧಗಳ ಕಳಚುವನೆ, ಭವಭಯ ವಿನಾಶಕನೆ, ಅನಾಥ ವತ್ಸಲನೆ, ಅಭಯಪ್ರದಾಯಕನೆ, ಶರವಣನೆ ಶ್ರೀಕಾರ್ತಿಕೇಯಾ; ಕರುಣೆಯಲಿ ಎಮ್ಮನ್ನು ಸಲಹು ಸಲಹಯ್ಯ, ಸಲಹು ಸಲಹೆಂದೊರಲುತ್ತ ತವಪದಕೆ ಶರಣಾಗಲು;

ಯೂಥಪತಿಯಾಗುತ್ತ, ದೇವಗಣ ಪೊರೆಯುತ್ತ, ಭಯವನ್ನು ಕಳೆಯುತ್ತ, ಕಾಯೋ ಕಾಯೆನ್ನುತ, ಆರ್ತರಾಗೆಲ್ಲರು ಗುಹನ ಶರಣಾಗಲು, ಮಹಿಮೆ ತೋರೆನ್ನಲು; ಮೋದದಲಿ ಗಿರಿಜೇಶ ಶರವಣಗೆ, ಷಣ್ಮುಖಗೆ, ಅನಘಗೆ ಅಘಹರಗೆ, ಶಿಖಿವಾಹ ಗಾಂಗೇಯಗೆ, ಇಭವಕ್ತ್ರನನುಜಗೆ, ಇಂದ್ರಾದಿ ವಂದಿತಗೆ, ಔದಾರ್ಯಶೀಲಗೆ ಉಮಾಪುತ್ರಂಗೆ, ಊರ್ಧ್ವಗತಿದಾಯಕಗೆ, ಕ್ಲೇಶ ವಿನಾಶಕಗೆ, ಸುರಕಟಕದಧಿಪತ್ಯವೀಯುತ್ತ, ನಲಿಯುತ್ತ, ದಿವ್ಯ ಶಸ್ತ್ರಾಸ್ತ್ರಗಳನ್ನೀಯುತ್ತ ಹರಸುತ್ತ, ವಾತ್ಸಲ್ಯದಿಂದಲಿ ಬಳಸಿ ಮುದ್ದಾಡುತ್ತ, ಶಾಂಭವೀ ವಿದ್ಯೆಯನ್ನೀಯುತ್ತ ಕಳಿಸಿದನು, ತಾರಕನ ಮರ್ದಿಸುತ, ಮುಡುಹುತ್ತ ಬಾಣನನು, ವಧಿಸಿ ಪ್ರಲಂಬನನು, ವೃಂದಾರವಂದ್ಯನೆ, ನಂದೀಶ ಪೂಜ್ಯನೆ, ದಿವಿಷದರ ಭೀತಿಯನು ಕಳೆಯೆನ್ನಲು, ಸುರಲೋಕ ಕ್ಷೇಮದಲಿ ಇರಿಸೆನ್ನಲು, ಕಳದಲ್ಲಿ ಜಯಶಾಲಿಯಾಗೆನ್ನಲು;

ಪಿತನಾಜ್ಞೆ ಪಾಲಿಸುತ ಮಾತೆಯಾಶೀರ್ವಾದ ಮುಡಿಯಲ್ಲಿ ಧರಿಸುತ್ತ, ಸಂಪ್ರಾಪ್ತ ಯುದ್ಧದಲಿ ಪೂರ್ವದೇವರನೆಲ್ಲ ಸದೆಬಡಿದೆ, ತಾರಕನ ಶಿರವೊಡೆದೆ, ನಿರ್ಜರರ ಶೋಕ ಕಳೆದೆ, ತವ ಪ್ರಭೆಯ ದಿವ್ಯತ್ವದರಿವ ತಂದೆ

ಸ್ಥವಿರಾಯ, ಸ್ಥೂಲಾಯ, ಸ್ತವಪ್ರಿಯಾಯ, ದೇವದೇವಾಯ, ದಯಾಸಾರಾಯ, ದುರಾದರ್ಶಾಯ, ದರ್ಪಣ ಶೋಭಿತಾಯ, ದೀರ್ಘವೃತ್ತಾಯ, ದೃಢವ್ರತಾಯ, ದುರ್ಗಮಾಯ, ಧುರಂಧರಾಯ, ನಿರಾಧಾರಾಯ, ನಿಷ್ಕಳಂಕಾಯ, ನಿರಹಂಕಾರಾಯ,

ನಿರುಪದ್ರವಾಯ ಮುಂತಾದ ಸುಂದರದ ಸಾಸಿರದ ನಾಮದಿಂ ಪೂಜೆಗೊಂಬುವನೆ, ಭಾಸುರನೆ, ಶ್ರೀಕರನೆ, ಶುಭಕರನೆ, ಪಾರ್ವತೀನಂದನನೆ, ಶಿತಿಕಂಠನಾತ್ಮಜನೆ, ವಿಘ್ನೇಶಸಹಭವನೆ, ಶರಣು ಶರಣೆಂಬೆವು. ಶರಣು ಶರಣೆಂಬೆವು.

ಸುಮನಸರ ಅಧ್ಯಕ್ಷ, ಲೋಕಲೋಕಾಧ್ಯಕ್ಷ, ಕಾಲಕಾಲಾಧ್ಯಕ್ಷ, ವಿಮಲಾಕ್ಷ, ಅಮಲಾಕ್ಷ, ಸಾತ್ವಿಕಜನರ ಪಕ್ಷಾ, ದುಷ್ಟಜನ ಶಿಕ್ಷಾ; ಭುವಿಯ ಜನ ಭಕುತಿಯಲಿ ನಿನ್ನನ್ನೆ ನಂಬಿಹರು, ಶರಣಾಗಿ ಬಂದಿಹರು, ಋಣವ ಕಳೆಯೆಂಬರು, ದೇಹ ಮನಸಿನ ಸೌಖ್ಯ ನೀಡೆಂಬರು, ಲೋಕೈಕನಾಥನೆ ಲೋಕಕ್ಕೆ ಶಾಂತಿಯನು ತಾರೆಂಬರು, ಲೋಕಚೂಡಾಮಣಿಯೆ ಲೋಕ ರಕ್ಷಣೆ ಕಾರ್ಯ ನಿನದೆಂಬರು.

ಪೂರ್ಣಾನಂದನೆ, ಪಾಪಹರ, ತಾಪಹರ, ಭೀತಿಹರ, ಭವಹರನೆ, ಲೋಕಪ್ರಿಯನೆ; ಕ್ಲಮಹರನೆ, ಚಿನ್ಮಯನೆ, ಕುಶಲನೆ, ಖೇಚರನೆ, ಖೇಟಧರನೆ; ಜಂಭಾರಿ ವಂದ್ಯನೆ, ಜಗದಾನಂದನೆ, ದಂದಶೂಕೇಶ್ವರನೆ, ಶರಣಾಗಿ ನಮಿಸುವೆವು, ಹರಸು ಹರಸೆಮ್ಮನು, ಮಮತೆಯಲಿ ನೋಡೆಮ್ಮನು.

ಘಾಟಿಯಲಿ ಅದಿದೈವ, ಕುಕ್ಕೆಯಲಿ ಅತಿ ಪೂಜ್ಯ, ಪಳನಿಯಲಿ ನೆಲೆನಿಂತು ಪೂಜೆಗೊಂಬುವನೆ, ಬಟುಗುಹೆಯ ಬಳಿಯಲ್ಲಿ ಜಗದೆತ್ತರಕೆ ನಿಂತು ಮಂದಹಾಸದಿ ಜನರ ಹರಸುತಿಹನೆ, ಕರುಣಾಮೃತ ಪೂರ್ಣ ದೃಷ್ಟಿಯಲಿ ನೋಡುತ್ತ, ದುರಿತಗಳ ಹರಿಸುತ್ತ, ತವಪದದಲಾಶ್ರಯವನೀಯುತ್ತ ಕಾಪಾಡಿ ಪೊರೆಯೊ ಕರುಣಾಕರ, ದೀನಜನವತ್ಸಲ ಉಮಾ ಮಹೇಶ್ವರ ಬಾಲ, ಪಾಹಿಮಾಂ ಪಾಹಿಮಾಂ ಪಾಹಿಮಾಂ ಸುಬ್ರಹ್ಮಣ್ಯೇಶ್ವರಾ.

***



ನವರಾತ್ರಿ – ಮನೆಮನೆಯಲ್ಲೂ ಬೊಂಬೆ ಹಬ್ಬ – ಡಾ.ಶುಭಶ್ರೀ ಪ್ರಸಾದ್ ನಿವಾಸ

ಸಿಕ್ಕಾಪಟ್ಟೆ ಬ್ಯುಸಿ

– ಮಾಲತಿ ಶ್ರೀನಿವಾಸನ್

ಮುಂಜಾನೆಯ ತಣ್ಣನೆಯ ಗಾಳಿ ಕಿಟಕಿಯ ಜಾಲರಿಯಿಂದ ಒಳ ಹಾಯುತ್ತಿದ್ದರೆ, ಹೊದಿದ್ದ ರಗ್ಗನ್ನು ಇನ್ನಷ್ಟು ಹತ್ತಿರ ಎಳೆದುಕೊಂಡು ಗಂಡನ ಸನಿಹ ಸರಿದು ತಬ್ಬಿ ಮಲಗಿದಳು ವಸುಮತಿ. ನಿದ್ದೆ ದೂರಾಗಿತ್ತು. ತಲೆ ಅಂದಿನ ದಿನಚರಿಯ ಬಗ್ಗೆ ಯೋಚಿಸುತ್ತಿತ್ತು. ದಿನದ ಪ್ರಾರಂಭ ಬೆಡ್ ಕಾಫಿ ನಂತರ ತಿಂಡಿಗೆ ತಯಾರಿ, ಸ್ನಾನದ ನಂತರ ಪೂಜೆ, ಗಂಡನಿಗೆ ಕ್ಯಾರಿಯರ್ ಸಿದ್ಧತೆ ಮತ್ತೆ ಕೆಲಸದವರಿಗೆ ಕಾಫಿ ತಿಂಡಿ ಸರಬರಾಜು, ಸರಿಯಾಗಿ 8:00 ಘಂಟೆಗೆ ಶಾಲೆಗೆ ಹೋಗುವ ಹುಡುಗನಂತೆ ಸಿದ್ಧನಾಗಿ ಟೇಬಲ್ ಮುಂದೆ ಸರಿಗಮಪ ತಾಳ ತಟ್ಟುತ್ತಾ ಕೂಡುವ ಗಂಡನಿಗೆ ತಿಂಡಿ ಮಾತ್ರೆ ಕೊಟ್ಟು, ಗಾಡಿ ತಗೊಂಡು ಡ್ರೈವರ್ ಬರುತ್ಲೂ ಬಾಯ್ ಹೇಳಿದ್ರೆ ದಿನದ ಮೊದಲನೇ ಅಂಕ ಮುಗೀತು.

ಆ ನಂತರ ಯುದ್ಧಭೂಮಿಯಂತೆ ಅಸ್ತವ್ಯಸ್ತವಾದ ಮನೆಯ ದುರಸ್ತಿ, ಕೆಲಸದವಳ ಹಿಂದೆ ಮುಂದೆ ಓಡಾಡಿಕೊಂಡು. 70–80ರ ಅಂಚಿನಲ್ಲಿ ಬೇಕಿತ್ತೆ ನಮ್ಮಿಬ್ಬರಿಗೆ ಈ ಕಸರತ್ತು.

ಬೆಳಗಾಗೆದ್ದು ತಣ್ಣನೆಯ ಗಾಳಿಯಲ್ಲಿ ಹಾಯಾಗಿ ವಾಕಿಂಗ್ ಹೋಗುವ ದಂಪತಿಗಳನ್ನು ನೋಡಿದಾಗೆಲ್ಲಾ ವಸುಮತಿಗೆ ತಾವೇಕೆ ಹೀಗಿಲ್ಲ? ಅನಿಸುತ್ತಿದ್ದದ್ದು ನಿಜ. ಮನೆಯಲ್ಲಿರುವ ತಾವಿಬ್ಬರೂ ಸಕ್ರಿಯವಾಗಿರಲು ಹಮ್ಮಿಕೊಂಡ ಚಟುವಟಿಕೆಗಳು ಒಂದೇ ಎರಡೇ, ಒಬ್ಬರಿಗೊಬ್ಬರು ಸಾಥ್ಕೊಡುತ್ತಾ ನಿಭಾಯಿಸಿಕೊಂಡು ಹೋಗುತ್ತಿದ್ದುದರಲ್ಲಿ ಗಮ್ಮತ್ತಿದೆ ಅನಿಸಿತ್ತು. ಅವೆಲ್ಲ ಇಲ್ಲದಿದ್ದರೆ ಜೀವನ ನೀರಸವಾಗುತ್ತಿತ್ತೋ ಏನೋ?

ಏನಾದರೂ ಕೆಲಸ ಹಮ್ಮಿಕೊಂಡು ಸದಾ ಪಾದರಸದಂತೆ ಹರಿದಾಡುತ್ತಿದ್ದ ವಸುಮತಿಗೆ ಅವಳ ಚಿಕ್ಕಪ್ಪ (ಅಮ್ಮನ ತಂಗಿಯ ಗಂಡ) ಇಟ್ಟ ಹೆಸರು 'ಸಿಕ್ಕಾಪಟ್ಟೆ ಬ್ಯುಸಿ'. "ಕೆಲಸ ಇಲ್ಲದಿದ್ದರೂ ಹುಡ್ಕೊಂಡ್ ಮಾಡ್ತೀರಾ ನೀವು" ಅಂತ ಸೊಸೆ ಸ್ಮಿತಾ ಹಲವಾರು ಬಾರಿ ರೇಗಿಸ್ತಾ ಇದ್ಲು.

ಹೌದಲ್ಲ, ನಾನೇಕೆ ಹೀಗೆ ಬುದ್ಧಿ ತಿಳಿದಾಗಿಂದ್ಲೂ ಸದಾ ಓಡುತ್ತಲೇ ಇರುತ್ತೀನಲ್ಲ ಯಾಕೆ ಅನಿಸಿತು ವಸುಗೆ. ಶಾಲಾ ದಿನಗಳಲ್ಲಿ ಬೆಳಗ್ಗೆ ಐದಕ್ಕೇ ಎಚ್ಚರ, ಎದ್ದು ಸ್ನಾನ ಮಾಡಿ ಅಜ್ಜಿಯನ್ನು ಗೋಗರೆದು ಅರ್ಧ ಲೋಟ ಕಾಫಿ ಕುಡಿದು ಓಡುತ್ತಿದ್ದುದು ಮನೆಯ ಹತ್ತಿರದಲ್ಲಿದ್ದ ದೇವಸ್ಥಾನದಲ್ಲಿ ಸಂಸ್ಕೃತ ಪಾಠ ಕಲಿಯಲು. ಈಗಲೂ ಪೂರ್ತಿ ಅಮರಕೋಶ ಹೇಳುವಷ್ಟು ಅಮರ ನಿರ್ಜರದೇವ ಜ್ಞಾಪಕದಲ್ಲಿತ್ತು. ಅಲ್ಲಿಂದ ಎಂಟು ಗಂಟೆಗೆ ವಾಪಸ್ ಬಂದು, ತಿಂಡಿ ತಿಂದು ಹತ್ತು ಗಂಟೆಗೆ ಹತ್ತಿರದ ಶಾಲೆಗೆ ಓಡಿದರೆ ಮಧ್ಯಾಹ್ನ ಒಂದು ಘಂಟೆಗೆ ಊಟಕ್ಕೆ ವಾಪಸ್. ಶಾಲೆಯಿಂದ ನಾಲ್ಕು ಗಂಟೆಗೆ ವಾಪಸಾದರೆ ಐದು ಗಂಟೆಗೆ ಮತ್ತೆ ಹಿಂದಿ ಕ್ಲಾಸು, ರಾತ್ರಿ ಮಲಗುವ ವೇಳೆಗೆ ಸುಸ್ತಾಗಿ ಅದೆಂಥ ನಿದ್ರೆ.

ಮುಂದೆ ಕಾಲೇಜಿನ ದಿನಗಳಲ್ಲೂ ಈ ದಿನಚರಿ ಏನೂ ಬದಲಾಗಿರಲಿಲ್ಲ. ತಾನು ಡಿಗ್ರಿ ಓದುತ್ತಿದ್ದಾಗ ವಸುಮತಿ ಬೆಳಗ್ಗೆ 6 ರಿಂದ 8 ಗಂಟೆ ಟುಟೋರಿಯಲ್ ನಲ್ಲಿ 10 ಮತ್ತು 12ನೇ ಕ್ಲಾಸಿನ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದಳು. ಮತ್ತೆ 9 ರಿಂದ ಸಂಜೆಯ ತನಕ ಕಾಲೇಜು.

ಎಪ್ಪತ್ತರಾಚೆಯಲ್ಲೂ ಚಿಕ್ಕಪ್ಪನಿಟ್ಟ ಹೆಸರು ಸಾರ್ಥಕವಾಗಿದೆ ಅನಿಸಿ ನಗುವಂತಾಯಿತು. ಎಚ್ಚರವಾಗಿದ್ರೂ ಏಳದೆ, ಸುಮ್ಮನೆ ನಗುತ್ತಾ ಮಲಗಿದ್ದ ಹೆಂಡತಿಯನ್ನು ನೋಡಿ ಶ್ರೀಧರ, "ಏನು ಅಮ್ಮಾವರು ಕಾಫಿ ಕೊಡೊ ಯೋಚನೆ ಇಲ್ಲವೇ. ನಾನು ಕೆಲಸಕ್ಕೆ ಇವತ್ತು ಸ್ವಲ್ಪ ಬೇಗ ಹೋಗಬೇಕು" ಅಂತ ಎಚ್ಚರಿಸಿದ. "ಕಾಫಿ ತಂದೆ" ಅಂತ ದಡಬಡ ಎದ್ದು ಅಡುಗೆಮನೆ ಕಡೆ ಓಡಿದಳು ವಸು. ಕೈ ಯಾಂತ್ರಿಕವಾಗಿ ಕೆಲಸ ಮಾಡುತ್ತಿದ್ದರೂ ಮನಸ್ಸು ಜೀವನದ ಗತಿಯನ್ನು ಮೆಲುಕು ಹಾಕುತ್ತಿತ್ತು.

ಮದುವೆಯ ನಂತರವೂ ತಪ್ಪಿರಲಿಲ್ಲ ಈ "ಸಿಕ್ಕಾಪಟ್ಟೆ ಬ್ಯುಸಿ" ಜೀವನ. ಅಂದು ಐದು ದಶಕಗಳ ಹಿಂದೆ, ನವವಧುವಿಗೆ ಆದೇಶಗಳ ಪಟ್ಟಿ. ಸೂರ್ಯ ಹುಟ್ಟುವ ಮುಂಚೆ ಮನೆ ಮುಂದೆ ರಂಗವಲ್ಲಿ ಹಾಕಿರಬೇಕು, ಒಲೆಗೆ ಸೌದೆ ತುಂಬಿ ಅಗ್ನಿ ಸ್ಪರ್ಶ ಆಗಬೇಕು, ಸ್ನಾನಮಾಡದೆ ತಿಂಡಿ ಅಡುಗೆ ಕೆಲಸ ನಿಷಿದ್ಧ. ಈಗಿನ ಪೀಳಿಗೆಗೆ ಇದೆಲ್ಲಾ ಹೇಳಿದ್ರೆ, ನೆನೆಸಿಕೊಂಡು ನಗುವಂತಾಯಿತು.

ತನಗೆ ಕಾಲೇಜಿನಲ್ಲಿ ಲೆಕ್ಚರರ್ ಕೆಲಸ ಸಿಕ್ಕಿದ ದಿನ ಶುಭವಾರ್ತೆ ಹೇಳುತ್ತಲೇ ಅತ್ತೆಯ ಬಾಯಿಂದ ಬಂದ ಮಾತು ಇಂದೂ ನೆನಪಿನಲ್ಲಿತ್ತು. "ನಿನಗೆ ಕಾಲೇಜಿನಲ್ಲಿ ಕೆಲಸ ಸಿಕ್ಕಿದ್ದು ಸಂತೋಷನೇ ಆದರೆ ನೀನು ಅಲ್ಲಿ ಲೆಕ್ಚರರ್, ಇಲ್ಲಿ ನಾನು ಅಡುಗೆಯವಳಲ್ಲ, ಬೆಳಗ್ಗೆ ಎಲ್ಲಾ ಮಾಡಿಟ್ಟು ಹೋಗಬೇಕು. ನಂಗೂ ವಯಸ್ಸಾಗುತ್ತಿದೆ, ಕೆಲಸ ಜಾಸ್ತಿ ಮಾಡೋಕೆ ಆಗಲ್ಲ".

ಒಂದು ನಿಮಿಷ ತಬ್ಬಿಬಾಗಿತ್ತು ವಸುಗೆ. ಸುಧಾರಿಸಿಕೊಂಡು "ಆಯ್ತುಮ್ಮ" ಅಂತ ಸಮಾಧಾನವಾಗಿ ಉತ್ತರ ನೀಡಿದ್ದಳು. ಕ್ರಮಬದ್ಧವಾಗಿ ಶಿಸ್ತಿನ ಜೀವನದ ಪಾಠ ಕಲಿತದ್ದು ಅತ್ತೆಯಿಂದಲೇ ಅನಿಸುತ್ತಿತ್ತು ಹಲವಾರು ಬಾರಿ.

ಇಬ್ಬರ ಮಕ್ಕಳ ಆರೈಕೆ, ಕ್ಯಾರಿಯರ್ ಗಳ ಸಿದ್ಧತೆ, ತಾನು ಕಾಲೇಜಿಗೆ ಹತ್ತು ಗಂಟೆಯೊಳಗೆ ತಲುಪುವ ಗಡಿಬಿಡಿ. ಆ ಸಮಯದಲ್ಲಿ ತರಕಾರಿ ಹೆಚ್ಚುವುದು, ಕಾಯಿ ತುರಿಯುವುದು ಈ ಕೆಲಸಗಳಿಗೆ ಸಹಾಯ ಮಾಡುತ್ತಿದ್ದ ಅತ್ತೆಯ ಸ್ವಭಾವ ನಿಧಾನವಾಗಿ ಅರ್ಥವಾಗಿತ್ತು. ತಾನು ಕಾಲೇಜಿಗೆ ಹೊರಡುವ ಗಡಿಬಿಡಿಯಲ್ಲಿದ್ದಾಗ ಕ್ಯಾರಿಯರ್ ಕೈಗಿಡೋದು, ಕಾಲೇಜಿನಿಂದ ಬಂದಾಗ ಕಾಫಿ ಮುಂದಿಡುವುದು, ಸೂಕ್ಷ್ಮವಾಗಿ ಅವರ ಪ್ರೀತಿ ಪರಿಚಯಿಸಿ, "ವಜ್ರಾದಪಿ ಕಠೋರಾಣಿ ಮೃದುನಿ ಕುಸುಮಾದಪಿ" ಉಕ್ತಿ ನೆನಪಾಗುತ್ತಿತ್ತು.

ನಂತರದ ದಿನಗಳು ಕನಸಿನಂತೆ ಸರಿದು ಹೋಗಿದ್ದವು. ಮಗ, ಮಗಳ ಮದುವೆ ನಾಲ್ಕು ಮೊಮಕ್ಕಳ ಬಾಣಂತನ, ಆರೈಕೆ ಸುಧಾರಿಸಿ, ಸಂಗೀತ, ಸಾಹಿತ್ಯ, ಯೋಗಾಭ್ಯಾಸ ಅಂತ ತನ್ನದೇ ಹವ್ಯಾಸಗಳನ್ನು ಬೆಳೆಸಿಕೊಂಡ "ಸಿಕ್ಕಾಪಟ್ಟೆ ಬ್ಯುಸಿ"ಗೆ ಜೀವನದ ಗತಿ ಬದಲಾಗಲೇ ಇಲ್ಲ.

ಕೆಲಸಕ್ಕೆ ಹೋಗುತ್ತಿದ್ದ ದಿನಗಳಲ್ಲಿ ಒಂದು ದಿನ ಎಂಟು ಘಂಟೆವರೆಗೂ ನಿದ್ದೆ ಮಾಡಲೇಬೇಕು ಅಂತ ಕಾಣ್ತಾ ಇದ್ದ ಕನಸು ನನಸಾಗಲೇ ಇಲ್ಲ. ಈಗ ಪುರುಸೊತ್ತಿದ್ದರೂ ಐದಾರು ಗಂಟೆಯ ನಂತರ ನಿದ್ದೆ ಬರದೆ ಹಾಸಿಗೆಯ ಮೇಲಿರಲು ಆಗದಿರುವುದೇ ವಿಪರ್ಯಾಸ.

ಚಿಕ್ಕಂದಿನಿಂದ ರೂಡಿಸಿಕೊಂಡ ಜೀವನದ ಶಿಸ್ತು ಇಂದು ಜೀವನೋಲ್ಲಾಸಕ್ಕೆ ಬುನಾದಿ ಹಾಕಿತ್ತು.

ತನ್ನ ಇಂದಿನ ದಿನಚರಿ, ಮೇಲಿರುವ ಚಿಕ್ಕಪ್ಪ ನೋಡಿ, "ಏ ಸಿಕ್ಕಾಪಟ್ಟೆ ಬ್ಯುಸಿ, ನಾನಿಟ್ಟ ಹೆಸರು ಸಾರ್ಥಕ ಆಯ್ತು ಕಣೆ ನಿನಗೆ" ಅಂತ ನಗ್ತಾ ಇರಬಹುದೇನೋ ಅನಿಸುತ್ತಿತ್ತು ಒಮ್ಮೊಮ್ಮೆ ವಸುಮತಿಗೆ.

***

ಸ್ವಚ್ಛಂದದಾನಂದ

– ಕೆ.ಆರ್.ಎಸ್. ಮೂರ್ತಿ

ಸ್ವಚ್ಛಂದ ಮನಸು ಕೊಡು ಹೇ ಮಹಾದೇವ
ಈ ಜೀವಕಾನಂದ ಸಿಗುವಂತೆ ದೇವ

ಸೆರೆಹಿಡಿದ ಸರಪಳಿಯ ತೆಗೆದುಬಿಡೊ ದೇವs
ಮನಸೆಂದು ನಗುನಗುತ ಇರುವಂತೆ ದೇವ

ಬಲವಿರುವ ರೆಕ್ಕೆಗಳ ನೀಡೊ ಮಹದೇವ
ಬಾನಿನಗಲವನು ಅಳೆವಂತೆ ದೇವ

ಗರುಡ ದೃಷ್ಟಿಯ ಜೊತೆಗೆ ದೃಢತೆ ಕೊಡು ದೇವ
ಜಗರೂಪ ಸೂಕ್ಷ್ಮಗಳ ತಿಳಿಸುತಲಿ ದೇವ

ಅರಿವೆಂಬುದೇನೆಂದು ನಾನರಿಯೆ ದೇವ
ಅನುಭವಕೆ ಬದುಕೆಂದು ತಿಳಿದಿಹೆನು ದೇವ

ಹಗಲೆಂಬ ಹೊತ್ತಿನಲಿ ಬಹುತರವು ದೇವ
ಕತ್ತಲಿನ ಬುತ್ತಿಯಲಿ ಬೆರಗಿಹುದು ದೇವ

ಬಾನಿಗೆಲ್ಲಿದೆ ಎಲ್ಲೆ ಎನ್ನುವರು ದೇವ
ಅಂಚಿಲ್ಲ ಸಂಚಿಲ್ಲ ಎನ್ನುವರು ದೇವ

ಬಹುದೂರ ಬಹುದೂರ ಹಾರುವೆನು ದೇವ
ಮಿಂಚದುವೆ ಎಲ್ಲಿಹುದು ನೀ ತೋರು ದೇವ

ಸ್ವಚ್ಛಂದ ಮನಸು ಕೊಡು ಹೇ ಮಹಾದೇವs
ಈ ಜೀವಕಾನಂದ ಸಿಗುವಂತೆ ದೇವ

***

ಸೃಷ್ಟಿಸಿರಿಯ ಕಂದ ನಾನು!

– ಕೆ.ಆರ್.ಎಸ್. ಮೂರ್ತಿ

ಸೃಷ್ಟಿಸಿರಿಯ ಕಂದ ನಾನು
ಸಂಭ್ರಮಿಸುತ ಧರೆಯೊಳು
ಅಮಿತ ವಿಸ್ಮಯವೆ ಇರಲು
ಧನ್ಯಭಾವ ಮನದೊಳು

ಕೋಟಿ ಕೋಟಿ ಜೀವರಾಶಿ
ಪೋಟಿ ಪೋಟಿ ಚಂದಕೆ
ಕೋಟಿ ಕೋಟಿ ದಿನಗಳುರುಳಿ
ಮಿದುಳು ಬಲಿತುದಂದಕೆ

ಗಗನ, ಕಡಲು, ನೆಲದ ಒಡಲು
ನೀಲಗೋಲ ವಿಸ್ಮಯ
ಸರಳವಿಹುದೆ ಸುಲಭವಿಹುದೆ
ಜಗದ ರಂಗದಭಿನಯ?

ಹಗಲು ರಾತ್ರಿ ಸುಳಿವ ಗಾಳಿ
ತನುವ ತಣಿಸು ತಂಪಿಗೆ
ಹಿಮವ ತೊಟ್ಟ ಶಿಖರ ಸಾಲು
ಸೆಳೆದು ಮನವ ಮೌನಕೆ

ಗುಡುಗು ಸಿಡಿಲು ಮೋಡ ಮಳೆಯು
ಭಾನು ಭುವಿಯ ಆಟಕೆ
ಹೊನ್ನ ಬೆಳಕಿನಲ್ಲಿ ಮೊಳಗು
ಹಸಿರ ಹರವು ಸೊಗಸಿಗೆ

ಪುಟ್ಟ ಹೆಜ್ಜೆಯಲ್ಲಿ ಎಲ್ಲ
ಚಂದ ಕಾಣು ಕಣ್ಣಿಗೆ
ದಿಟ್ಟ ನಿಲುವಿನಲ್ಲಿ ಜಗವು
ನಿಲುಕು ಸ್ವಲ್ಪ ಅರಿವಿಗೆ

ಮನುಜಗೆಷ್ಟು ನಂದವಿಹುದು
ಜಗದ ಚಂದ ತಿಳಿಸಲು
ಚಿತ್ರ ಬರೆದು ಕವಿತೆ ಹೆಣೆದು
ರಾಗದಲ್ಲಿ ಪಾಡಲು!

ಬೆಳ್ಳಿಮೋಡ ಬಣ್ಣಬಿಲ್ಲು
ಅರಳು ಮೊಗವೊ ಬೆರಗಿಗೆ
ಅರಿವು ಅರ್ಥ ಸತ್ಯವರೆಸೆ
ಇಡುವ ಹೆಜ್ಜೆ ಒಳಿತಿಗೆ


***

ಕೃತಿ ಪರಿಚಯ

"ಮೆಟಾಮಾರ್ಫಾಸಿಸ್"

ಫ್ರಾನ್ಜ್ ಕಾಫ್ಕಾ ಬರೆದ ಅದ್ಭುತ ಕಾದಂಬರಿ

- ವೆಂಕಟೇಶ ಕಾಮತ್, ಉಡುಪಿ



ಹಿಂದೊಮ್ಮೆ ನಾನು ಈ ವೇದಿಕೆಯ ದಾಸೋಹದಲ್ಲಿ ಜೋಸೆಫ್ ಹೆಲ್ಲರ್ನ 'ಕ್ಯಾಚ್ 22' ಕೃತಿಯ ಬಗ್ಗೆ ಪ್ರಸ್ತುತಿ ಮಾಡಿದ್ದೆ. ಈಗ ಫ್ರಾನ್ಜ್ ಕಾಫ್ಕಾ ಬರೆದಿರುವ "ದಿ ಮೆಟಾಮಾರ್ಫಾಸಿಸ್" ಎಂಬ ಕಾದಂಬರಿಯ ಬಗ್ಗೆ ತಿಳಿಸಬಯಸುತ್ತೇನೆ.

'ಮೆಟಾಮಾರ್ಫಾಸಿಸ್' ಕಾದಂಬರಿಯನ್ನು ಫ್ರಾನ್ಜ್ ಕಾಫ್ಕ (1883-1924) ಜರ್ಮನ್ ಭಾಷೆಯಲ್ಲಿ ಬರೆದದ್ದು 1915ರಲ್ಲಿ.

1883ರಲ್ಲಿ ಪ್ರಾಗ್ ಎಂಬಲ್ಲಿ ಕಾಫ್ಕಾ ದಂಪತಿಗಳಿಗೆ ಜನಿಸಿದ ಆರು ಮಕ್ಕಳಲ್ಲಿ ಹಿರಿಯನಾದ ಫ್ರಾನ್ಜ್ ಕಾಫ್ಕಾ ಬದುಕಿದ ಅವಧಿ ಬರೀ 40 ವರುಷ, 11 ತಿಂಗಳು. ಉಳಿದ ಮಕ್ಕಳ ಪೈಕಿ ಅವಳಿ ಗಂಡುಮಕ್ಕಳು ಫ್ರಾನ್ಜ್‌ಗೆ ಏಳು ವರುಷವಾಗುವ ಮೊದಲೇ ತೀರಿಕೊಂಡರೆ, ತಂಗಿಯರಾದ 'ಎಲ್ಲಿ', 'ವಲ್ಲಿ' ಮತ್ತು 'ಒಟ್ಲಾ' 1942-43ರಲ್ಲಿ ಎರಡನೇ ಮಹಾಯುದ್ಧದ ಭೀಕರ ನಾಝಿ ಹತ್ಯಾಕಾಂಡದಲ್ಲಿ ಬಲಿಯಾದರು. ಫ್ರಾಂಜ್ ಕಾಫ್ಕ ಬರೆದುದ್ದರಲ್ಲಿ ಶೇಕಡಾ 90ರಷ್ಟು ಆತ ಸಿಟ್ಟು ಮತ್ತು ಖಿನ್ನತೆಯಲ್ಲಿ ಸುಟ್ಟು ಹಾಕಿದರೂ ಉಳಿದ ಶೇಕಡಾ 10ರಲ್ಲಿ ಸಹಾ ಬಹಳಷ್ಟು ನಾಶವಾಗಿ ಉಳಿದ ಕೆಲವು ಕೃತಿಗಳು ಜನಪ್ರಿಯತೆ ಗಳಿಸಿ ಸಾಹಿತ್ಯದ ಹೊಸ ಆಯಾಮವನ್ನು ರಚಿಸಿದವು.

ಮೆಟಾಮಾರ್ಫಾಸಿಸ್ ಕೇವಲ 70-80 ಪುಟಗಳ ನೀಳ್ಗತೆಯಂತಿದ್ದರೂ ಒಂದು ಕಾದಂಬರಿ ಎಂದು ಜಗತ್ ಪ್ರಸಿದ್ಧಿ ಪಡೆದಿದೆ. ಕಷ್ಟ-ಕ್ಲಿಷ್ಟಗಳ ಸಂಘರ್ಷಿತ ಸಂದರ್ಭಕ್ಕೆ ಆಂಗ್ಲ ಡಿಕ್ಷನರಿಯಲ್ಲಿ ಕಫ್ಕಾಎಸ್ಕ್ (Kafkaesque) ಎಂಬ ಶಬ್ದವನ್ನು ಅಳವಡಿಸಲಾಯಿತು. ಇದರ ಬಳಕೆಯೊಡನೆ ಕಫ್ಕಾಇಯನ್, ಕಫ್ಕಟ್ರಾಪ್ (Kafkaiaņ Kafkatrap) ಎಂಬ ಇತರ ಶಬ್ದಗಳು ಬಂದಿವೆ. ಮೆಟಾಮಾರ್ಫಾಸಿಸ್ ಕಾದಂಬರಿ ಪ್ರಪಂಚದ ಬಹಳಷ್ಟು ಭಾಷೆಗಳಲ್ಲಿ ಪ್ರಕಟಗೊಂಡಿದೆ. ಬರೀ ಆಂಗ್ಲಭಾಷೆಯಲ್ಲೇ ಇದರ 20ಕ್ಕೂ ಹೆಚ್ಚಿನ ವಿವಿಧ ಭಾಷಾಂತರದ ರೂಪಗಳು ಇವೆ. ಇದರ ಮೊದಲ ವಾಕ್ಯದ ಅರ್ಥವನ್ನು ಬೇರೆ ಬೇರೆ ಗೂಡಾರ್ಥಗಳೊಂದಿಗೆ ಒಂದು ಕೀಟವನ್ನು ಬಹಳ ಕಡೆ ಕೋಕ್ರೋಚ್ (Cockroach) ಜಿರಳೆ ಎಂದು ಕರೆದರೆ ಅದನ್ನು ಅಸಹ್ಯಕಾರಿ ಕೀಟ ಒಂದು ವೇರ್ಮಿನ್ ಎಂದು ಹಲವರು. ಮೆಟಾಮಾರ್ಫಾಸಿಸ್ ಒಂದು ರೂಪಾಂತರ ಕ್ರಿಯೆ. ಒಂದು ಹುಳು ಚಿಟ್ಟೆಯಾಗಿ ಸಂಪೂರ್ಣ ಮಾರ್ಪಾಡುಗೊಳ್ಳುವುದು ಎಂಬಂತೆ ಇಲ್ಲಿ ಕಥಾನಾಯಕ ಗ್ರೆಗರ್ ಸಂಸ ಒಂದು ಬೆಳಿಗ್ಗೆ ಎಂದಿನಂತೆ ತನ್ನ ಆಫೀಸಿಗೆ ಹೋಗಲು ತಡವಾಗುತ್ತದೆ ಎಂದು ಏಳಲು ಪ್ರಯತ್ನಿಸುವಾಗ ತಾನು ಒಂದು ದೊಡ್ಡ ಜಿರಳೆಯಾಗಿ ರೂಪಾಂತರಗೊಂಡಿರುವುದನ್ನು ಅರಿಯುತ್ತಾನೆ. ಅವನ ದೃಷ್ಟಿಕೋನ ಅವನ ತಂದೆ ತಾಯಿ ತಂಗಿಯವರ ಕಣ್ಣುಗಳಲ್ಲಿ ಬದಲಾಗುವ ಪರಿಸ್ಥಿತಿ, ಮೌಲ್ಯಗಳು. ಕೆಲವೇ ಪಾತ್ರಗಳು, ಸನ್ನಿವೇಶಗಳು. ಆದರೆ ವಿವಿಧ ಕೋನಗಳಿಂದ ಚರ್ಚಿತ ವಿಷಯಗಳಾಗಿ ಈ ಬಗ್ಗೆ ಬಹಳಷ್ಟು ಮುಂದಿನ ಸಾಹಿತಿಗಳು ಅಧ್ಯಯನ ನಡೆಸಿರುವರು. ನಾಯಕನ ರೂಪಾಂತರ ದೈಹಿಕ ಹಾಗೂ ಮಾನಸಿಕವೆಂದಾದರೆ ಆತನ ತಂಗಿ ಗ್ರೇಟೆ ಆತನನ್ನು ಮೊದಲ ಗಳಿಗೆ ಕನಿಕರ ಪ್ರೀತಿಯಿಂದ ಅವನಿಗೆ ಹಣ್ಣು ಒದಗಿಸಿ ಆತ

ಕೀಟರೂಪದಲ್ಲಿ ಕೊಳೆತ ಹಣ್ಣನ್ನು ಹೆಚ್ಚು ಪ್ರೀತಿಸುತ್ತಾನೆಂದು ಅರಿತು ಒದಗಿಸುತ್ತಾಳೆ. ಸಂಸಾರದಲ್ಲಿ ಸಂಪಾದಿಸುವ ವ್ಯಕ್ತಿಯ ಪ್ರಾಮುಖ್ಯತೆ ಅವನಿಲ್ಲದಾಗ ಮಿಕ್ಕ ಅವಲಂಬಿತ ಮೂವರ ಜೀವನದ ಮಾರ್ಪಾಡು, ತಂಗಿಯ ಬದಲಾಗುವ ಭಾವನೆಗಳು ಮಾರ್ಮಿಕವಾಗಿವೆ. ಇದು ಒಂದು ಚಂದಮಾಮ ಮಾಟ ಮಂತ್ರಗಳ ಕಥೆಯಂತೆ ಮೇಲ್ನೋಟಕ್ಕೆ ಕಂಡರೂ ಇದರ ಸಾಲುಗಳಲ್ಲಿ ನಾಯಕನ ಆಂತರ್ಯ, ಅಂದಿನ ಸಮಾಜದ ಜಂಜಾಟಗ ಳೊಡನೆ ಬದುಕು, ಆಗಿನ ಒಂದನೇ ಮಹಾಯುದ್ಧದ ಸಮಯದ (1914–18) ಪರಿಸ್ಥಿತಿ ಬದಲಾವಣೆಗಳನ್ನು ಪ್ರತಿಬಿಂಬಿಸುತ್ತವೆ.



"ಮೆಟಾಮಾರ್ಫಾಸಿಸ್" ಕೃತಿಯನ್ನು ಟ್ರಾನ್ಸ್‌ಫಾರ್ಮೇಶನ್ ಎಂಬ ಹೆಸರಿನಲ್ಲೂ ಅನುವಾದ ಮಾಡಲಾಗಿದೆ. ಕಳೆದ ಒಂದು ಶತಮಾನದ ಅವಧಿಯಲ್ಲಿ ಮಿಲಿಯಗಟ್ಟಲೆ ಪ್ರಕಟಗೊಂಡು ವಿಶ್ವವಿದ್ಯಾಲಯಗಳಲ್ಲಿ ಬಹುಚರ್ಚಿತ ವಿಷಯವಾಗಿದೆ. ಈ ಸಣ್ಣ ಕಾದಂಬರಿ ಮೂರು ಅಧ್ಯಾಯಗಳು ಮತ್ತು ಕೇವಲ ಐದು ಪಾತ್ರಗಳನ್ನೊಳಗೊಂಡಿದೆ. ಮೊದಲು ನಾಯಕ ಗ್ರೆಗೊರ್ (Gregor) ಹಂಸ ಆದರೆ ನಂತರ ತಂಗಿ ಗ್ರೇಟ್ (Grete).

ಎರಡು ಪಾತ್ರಗಳಾದ ಗ್ರೆಗೊರ್‌ನ ತಂದೆ-ತಾಯಿಯರನ್ನು ಕಾಫ್ಕ ಮಿಸ್ಟರ್ ಸಂಸ ಹಾಗೂ ಮಿಸ್ಸೆಸ್ ಸಂಸ ಎಂದೇ ಹೆಸರಿಸಿದ್ದಾನೆ. ಈ ನಾಲ್ವರು ಒಂದು ಸಮಾಜದ ಸಣ್ಣ ಸಂಸಾರದ ಗಂಡ ಹೆಂಡತಿ ಮಗ ಮಗಳು ಎಂಬ ಸಾಂಕೇತಿಕ ವ್ಯಕ್ತಿಗಳಾದರೆ ಕೊನೆಯ ಪಾತ್ರ "ದಿ ಚಾರ್ ವುಮನ್" ಒಬ್ಬ ಕೆಲಸದವಳು. ಇವಳು ಬಡ ವಿಧವೆ, ಮೊದಲ ಕೆಲಸದವಳು ಗ್ರೆಗೊರ್‌ನ ಕೀಟ ರೂಪಾಂತರದ ನಂತರ ಹೆದರಿ ಕೆಲಸ ಬಿಟ್ಟಾಗ ಬಂದವಳು. ಆಕೆಗೆ ಗ್ರೆಗೊರ್ ನ ಆಕಾರ ರೂಪ ಆತ ಮನುಷ್ಯನೋ ಕೀಟವೋ ಯಾವುದೂ ಮಹತ್ತರವಾದ ವಿಷಯವಲ್ಲ. ಆಕೆ ಅದೊಂದು ಸಾಮಾನ್ಯ ಸಂಗತಿಯಂತೆ ತನ್ನ ಕರ್ತವ್ಯವನ್ನು ಯಾವುದೇ ಭಾವನೆಗಳಿಲ್ಲದೆ ಮಾಡುವವಳೆಂದು ತೋರಿಸಲಾಗಿದೆ. ಆಕೆಯನ್ನು ಮನೆಯ ತಂಗಿ ಹಾಗೂ ತಂದೆಯನ್ನು ಬಿಟ್ಟರೆ ಗ್ರೆಗೊರನೊಂದಿಗೆ ಹೆಚ್ಚಿನ ಸಾಂಗತ್ಯ ಹೊಂದಿದವಳು ಹಾಗೂ ಅವಳ ದೃಷ್ಟಿಯಲ್ಲಿ ರೂಪಾಂತರ ಒಂದು ಸಾಮಾನ್ಯ ಸಂಗತಿ ಎಂಬಂತೆ ತೋರಿಸಲಾಗಿದೆ. ಇದಲ್ಲದೆ ಸತ್ತ ಗ್ರೆಗೊರನನ್ನ ಮೊದಲು ಗಮನಿಸುವವಳು ಮತ್ತು ಗ್ರೆಗೊರನ ದೇಹವನ್ನು ಅಂತ್ಯಕ್ರಿಯೆ ಅಥವಾ ಕೊನೆಗೊಳಿಸುವವಳು ಈ ಚಾರ್ ವುಮನ್ ಎಂದು ಬರೆಯಲಾಗಿದೆ. ಬದಲಾವಣೆ ರೂಪಾಂತರ ಗ್ರೆಗೊರ್ ಒಬ್ಬನದೇ ಆದರೂ, ಉಳಿದ ನಾಲ್ವರ ಹಾಗೂ ಸುತ್ತಮುತ್ತಲಿನ ಜನರ ದೃಷ್ಟಿಕೋನ, ಮಾನಸಿಕ ತುಮುಲಗಳು ಆ ದಿನಗಳಲ್ಲಿ ಒಮ್ಮೆ, ಮತ್ತೊಮ್ಮೆ, ಮಗದೊಮ್ಮೆ ಯೋಚಿಸಿ ಜಿಜ್ಞಾಸೆಗೆ ಒಳಪಟ್ಟ ವಿಷಯವಾಗಿದೆ.

ಕಾಫ್ಕ ಸಾಯುವ ನಂತರದವರೆಗೂ ಅವರ ಬರಹಗಳು ಗಮನ ಸೆಳೆದದ್ದು ವಿರಳ. ಅವರ ಜೀವಿತಾವಧಿಯಲ್ಲಿ ಅವರು ಪ್ರಕಟಿಸಿದ್ದು ಕೇವಲ ಕೆಲವೇ ಸಣ್ಣ ಕಥೆಗಳನ್ನು. ಮೆಟಾಮಾರ್ಫಾಸಿಸ್ ಅನ್ನು (ಸಣ್ಣ) ಕಾದಂಬರಿ ಎಂದು ಪರಿಗಣಿಸದಿದ್ದಲ್ಲಿ, ಅವರು ತಮ್ಮ ಯಾವುದೇ ಕಾದಂಬರಿಗಳನ್ನು ತಮ್ಮ ಜೀವಿತದಲ್ಲಿ ಬರೆದು ಮುಗಿಸಲಿಲ್ಲ. ಅವರ ಸಾವಿಗೆ ಮುನ್ನ, ಕಾಫ್ಕ ತಮ್ಮ ಸ್ನೇಹಿತ ಹಾಗೂ ಸಾಹಿತ್ಯ ನಿರ್ವಾಹಕ ಮ್ಯಾಕ್ಸ್ ಬ್ರಾಡ್‌ಗೆ ಹೀಗೆ ಬರೆದರು: "ಆತ್ಮೀಯ ಮ್ಯಾಕ್ಸ್, ನನ್ನ ಕೊನೆಯ ಕೋರಿಕೆ– ನಾನು ಬಿಟ್ಟುಹೋಗುವಂತಹ ಎಲ್ಲವನ್ನೂ... ಡೈರಿಗಳು, ಹಸ್ತಾಕ್ಷರಗಳು, ಕಾಗದಗಳು (ನನ್ನ ಸ್ವಂತದ್ದು ಹಾಗೂ ಇತರರದು), ಚಿತ್ರಗಳು ಹಾಗೂ ಇತ್ಯಾದಿಗಳ ರೂಪದಲ್ಲಿ... ಅವುಗಳನ್ನು ಓದದೆಯೇ ಸುಡತಕ್ಕದ್ದು." ಕಾಫ್ಕರ ಬಯಕೆಯನ್ನು ಬ್ರಾಡ್ ಅವಗಣಿಸಿದರು. ತಾನು ಹೇಗೂ ಆ ಕೋರಿಕೆಗಳನ್ನು ಮನ್ನಿಸುವುದಿಲ್ಲವೆಂದು ಕಾಫ್ಕರು ತಿಳಿದೇ ಹಾಗೆ ತನಗೇ ಹೇಳಿದುದೆಂದು ಅವರು ಅಭಿಪ್ರಾಯಪಟ್ಟರು. ಬ್ರಾಡ್ ಹಾಗೆಂದು ಕಾಫ್ಕರಿಗೆ ಹೇಳಿಯೂ ಆಗಿತ್ತು. ಅವರ ಪ್ರಿಯತಮೆ ಡೋರಾ ಡಯಾಮಂಟ್ ಸಹ ಅವರ ಕೋರಿಕೆಗಳನ್ನು ಅವಗಣನೆಮಾಡಿ, ಗುಪ್ತವಾಗಿ 20 ನೋಟ್‌ಬುಕ್ಕುಗಳು ಮತ್ತು 35 ಕಾಗದಗಳನ್ನು ಎತ್ತಿಟ್ಟು ಕೊಂಡಿದ್ದರು. 1933ರಲ್ಲಿ ಅವುಗಳನ್ನು ಗೆಸ್ಟಾಪೋದವರು ವಶಪಡಿಸಿಕೊಂಡರು. ಕಾಫ್ಕರ ಈ ಪತ್ತೆಯಾಗದ ಕಾಗದ ಗಳಿಗಾಗಿ ಈಗಲೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹುಡುಕಾಟ ಸಾಗಿದೆ. ವಾಸ್ತವವಾಗಿ ಬ್ರಾಡ್ ತಮ್ಮ ವಶದಲ್ಲಿರುವ ಕಾಫ್ಕರ ಬಹುತೇಕ

ಕೃತಿಗಳ ಪ್ರಕಾಶನದ ಮೇಲ್ವಿಚಾರಣೆ ವಹಿಸಿದರು. ಈ ಕೃತಿಗಳು ಬೇಗನೆ ಗಮನ ಸೆಳೆಯಲಾರಂಭಿಸಿ ಉತ್ತಮ ವಿಮರ್ಶೆಗಳನ್ನೂ ಗಳಿಸಿದವು.

ಝುಕ್‌ನಲ್ಲಿ ಮಿಲೇನಾ ಜೆಸೆನ್ಸ್ಕಾಗೆ ಬರೆದ ಹಲವು ಕಾಗದಗಳ ಹೊರತು, ಕಾಫ್ಕರ ಎಲ್ಲಾ ಪ್ರಕಟಿತ ಕೃತಿಗಳೂ ಜರ್ಮನ್ ಭಾಷೆಯಲ್ಲಿ ಬರೆದವು.


***



ನವರಾತ್ರಿ – ಮನೆಮನೆಯಲ್ಲೂ ಬೊಂಬೆ ಹಬ್ಬ – ಡಾ.ಶುಭಶ್ರೀ ಪ್ರಸಾದ್ ನಿವಾಸ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ

ಅಧ್ಯಕ್ಷೀಯ ಅನಿಸಿಕೆಗಳು



- ಹ.ವಾ.ಶ್ರೀಪ್ರಕಾಶ್

ವೇದಿಕೆಯ ಎಲ್ಲಾ ಆತ್ಮೀಯ ಸದಸ್ಯರಿಗೂ ಹೃತ್ಪೂರ್ವಕ ನಮಸ್ಕಾರ.

ಮಿತ್ರರೂ ಸಾಹಿತ್ಯದ ದಾಸೋಹದ ಸಂಚಾಲಕರೂ ಆದ ಶ್ರೀ ಕೆ.ಎನ್.ಮಹಾಬಲರವರು ಈ ಬಾರಿ ದಾಸೋಹದ ಅಧ್ಯಕ್ಷತೆ ವಹಿಸಿ ಅಂದಾಗ ಇಲ್ಲೆವೆನ್ನಲಾಗಲಿಲ್ಲ. ಎಲ್ಲರ ಲೇಖನಗಳನ್ನು ಪರಾಂಬರಿಸುವ ಯಾವ ಅರ್ಹತೆ ನನಗೆ ಇಲ್ಲದಿದ್ದರೂ ಔಪಚಾರಿಕವಾಗಿ ಅಧ್ಯಕ್ಷತೆ ವಹಿಸಲು ಸಂತೋಷವೆನಿಸಿದೆ.

ಶ್ರೀಮತಿ ಕಮಲಾಕ್ಷಿಯವರು ವೇದಿಕೆಗೆ ನನ್ನನ್ನು ಸೊಗಸಾಗಿ ಪರಿಚಯಿಸಿದ್ದಾರೆ. ಅವರಿಗೆ ಧನ್ಯವಾದಗಳು.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನವಾಗಿರುವ ಈ ವೇದಿಕೆಯ ಮೂಲ ಭಾರತೀಯ ಸ್ಟೇಟ್ ಬ್ಯಾಂಕಿನ ಬೆಂಗಳೂರು ನಗರ ಶಾಖೆಯ ಕನ್ನಡ ಸಂಘ. ಇದರೊಂದಿಗೆ ನನಗೆ ಸುಮಾರು 46 ವರ್ಷದ ನಂಟು. ಅಂದಮೇಲೆ ಅದರ ಬಗ್ಗೆ ಏನು ಗೊತ್ತಿದೆ ಅಂತ ಸ್ವಲ್ಪ ಹೇಳಬೇಕಲ್ಲ. ಲೇಖನ ಓದುವ ಸಮಯದಲ್ಲಿ ಪೀಠಿಕೆಯಾಗಿ ಇದನ್ನು ಹೇಳಬಯಸುತ್ತೇನೆ.

ಅದೊಂದು ದಿನ ಪಾ. ರಾಜಗೋಪಾಲ ಅವರ ಜೊತೆ ಕನ್ನಡ ಸಂಘಕ್ಕೆ ಕಾಲಿಟ್ಟೆ. ಬೆಂ.ಶ್ರೀ. ರವೀಂದ್ರರವರು ಚಂದದ ಬಣ್ಣದ ಕಾಗದಗಳನ್ನು ಕೊಟ್ಟು ಬಂದಿರುವ ಲೇಖನಗಳನ್ನು ಅದರಲ್ಲಿ ಬರೆಯಲು ಹೇಳಿದರು. ಆಗ ನನ್ನ ಅಕ್ಷರ ಚೆನ್ನಾಗಿತ್ತು. 'ಮಂದಾರ' ಸಾಹಿತ್ಯ ಸಂಚಿಕೆಯ ಹಸ್ತಪ್ರತಿ ತಯಾರಾಗುತ್ತಿತ್ತು. ಅದರ ಮುಂದಿನ ವರ್ಷದಿಂದ ಅದು ಮುದ್ರಣವಾಯಿತು. ನಗರ ಶಾಖೆಯಲ್ಲಿ ಕನ್ನಡ ಸಂಘದಲ್ಲಿ ಮೇ.ಕೃ.ಅನಂತಸ್ವಾಮಿ, ರವೀಂದ್ರ, ಪಾ.ರಾಜಗೋಪಾಲ, ಮಿರ್ಲೆ ಸುದರ್ಶನ, ಜಿ.ಎನ್. ನರಸಿಂಹಮೂರ್ತಿ, ಬಿ.ಎಸ್.ಚಂದ್ರಶೇಖರ್, ಜಯರಾಮ, ಸುರೇಶ ಶಣೈ ಮುಂತಾದ ಸಾಹಿತ್ಯಾಸಕ್ತರು ಸಂಜೆ ಸೇರುತ್ತಿದ್ದೆವು ನಗರ ಶಾಖೆ ಚಟುವಟಿಕೆಗಳ ಆಗರವಾಗಿತ್ತು. ನಗರ ಶಾಖೆಯ ನೆನಪುಗಳೇ ಸುಂದರ. ರಾಜ್ಯೋತ್ಸವ ಅಂದರೆ ನಮಗೆ ಭಾರೀ ಹಬ್ಬ. ಭಾಂಗ್ರಾ ಡ್ಯಾನ್ಸ್ , ನಾಟಕ, ಜಾನಪದ ನೃತ್ಯ ಅಂತ ಸಂಭ್ರಮಿಸುತ್ತಾ ಇದ್ದೆವು. ಪಿ.ಕಾಳಿಂಗರಾವ್, ಶಿವರಾಮ ಕಾರಂತ, ಹಾ.ಮಾ.ನಾಯಕ್, ವಿಶುಕುಮಾರ್ ಮುಂತಾದ ದಿಗ್ಗಜರನ್ನು ಭೇಟಿಯಾಗುವ, ಅವರ ಮಾತು ಕೇಳುವ ಅವಕಾಶ ದೊರಕಿತ್ತು.
.

ನಮ್ಮ ಬ್ಯಾಂಕಿನ ನಗರ ಶಾಖೆ ಅನೇಕ ಪ್ರತಿಭಾವಂತರ ಗೂಡಾಗಿತ್ತು. ವಿವಿಧ ಸಂಸ್ಥೆಗಳು ನಡೆಸುವ ಅಂತರಬ್ಯಾಂಕ್ ನಾಟಕ, ಸಂಗೀತ ಮತ್ತಿತರ ಸ್ಪರ್ಧೆಗಳಿಗೆ ಹೋಗಿ ಬಹುಮಾನ ದೋಚಿಕೊಂಡು ಬರುತ್ತಿದ್ದೆವು. ಶ್ರೀವಲ್ಲಿ, ನಂದಗೋಪಾಲ, ಸೂರ್ಯಪ್ರಕಾಶ್ ಮುಂತಾದ ಗಾಯಕರಿದ್ದರು. ಏಕಪಾತ್ರಾಭಿನಯ, ಚರ್ಚಾಸ್ಪರ್ಧೆಗಳಲ್ಲಿ ನುರಿತವರಿದ್ದರು. ಡಾ. ಎಲ್. ಹನುಮಂತಯ್ಯನವರೊಂದಿಗೆ ಎರಡು ಮೂರು ಕಡೆಗೆ ಪರ-ವಿರೋಧವಾಗಿ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿದ ನೆನಪು ಇನ್ನೂ ಇದೆ. ಒಮ್ಮೆ ನಾವು ಪಡೆದ ಬಹುಮಾನವನ್ನೆಲ್ಲ ನಗರ ಶಾಖೆಯ ಕ್ಯಾಂಟೀನಿನಲ್ಲಿ ಜೋಡಿಸಿಟ್ಟು ಸಂಭ್ರಮಿಸಿದ್ದೆವು.

ಕನ್ನಡ ಸಂಘದಿಂದ ಸಮನ್ವಯ ಸಮಿತಿ ಸ್ಥಾಪನೆಯಾಯ್ತು. 'ಬ್ಯಾಂಕಿಂಗ್ ಪ್ರಪಂಚ' ಬಂತು. ವಾರ್ಷಿಕ ಸಂಚಿಕೆಯಾದ 'ಮಂದಾರ' ಮತ್ತು 'ಬ್ಯಾಂಕಿಂಗ್ ಪ್ರಪಂಚ' ಸಂಚಿಕೆಗಳಿಗೆ ಕೆಲವರು ಜಾಹೀರಾತು ಸಂಗ್ರಹಿಸುತ್ತಿದ್ದರು. ಬ್ಯಾಂಕಿಂಗ್ ಕಮ್ಮಟಗಳು ನಡೆದವು. ಇದರ ಹಿಂದೆ ತೆರೆಮರೆಯಲ್ಲಿ ಶ್ರಮಿಸಿದವರು ಬಹಳ ಮಂದಿ. ಪ್ರಾಚಾರ್ಯ ಎಚ್ಚೆಸ್ಕೆಯವರ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದ ಬ್ಯಾಂಕಿಂಗ್ ಕಮ್ಮಟಗಳಲ್ಲಿ ಇತರ ಬ್ಯಾಂಕಿನವರೂ ಭಾಗವಹಿಸುತ್ತಿದ್ದರು. 'ಬ್ಯಾಂಕಿಂಗ್ ಪ್ರಪಂಚ'

ನಿಯತಕಾಲಿಕವು ಬ್ಯಾಂಕಿಂಗ್ ಕುರಿತಂತೆ ಕನ್ನಡ ಭಾಷೆಯ ಮೊದಲ ಪತ್ರಿಕೆ. ಇದರ ಪ್ರೂಫ್ ಹಿಡಿದು ರೈಲಿನಲ್ಲಿ ಅನೇಕ ಬಾರಿ ಮೈಸೂರಿನ ಎಚ್ಚೆಸ್ಕೆಯವರ ಮನೆಗೆ ರಾತ್ರಿ ಕೊಟ್ಟು ಬೆಳಿಗ್ಗೆ ತಂದ ನೆನಪುಗಳಿವೆ.

ಕನ್ನಡದಲ್ಲಿ ಬ್ಯಾಂಕಿಂಗ್, ಬ್ಯಾಂಕಿಂಗ್ ನಿಘಂಟು, ಕರ್ನಾಟಕದಲ್ಲಿ ಬ್ಯಾಂಕುಗಳ ಹುಟ್ಟು ಮತ್ತು ಬೆಳವಣಿಗೆ, ಬ್ಯಾಂಕು ಮತ್ತು ಭಾಷೆ ಹಾಗೂ ಬ್ಯಾಂಕಿಂಗ್ ಹೆಜ್ಜೆ ಗುರುತುಗಳು, ಭಾರತದಲ್ಲಿ ಬ್ಯಾಂಕಿಂಗ್ ಕೆಲವು ಚಿಂತನೆಗಳು, ಪದನಿಧಿ, ಮುಂತಾದ ಬ್ಯಾಂಕಿಂಗ್ ವಿಷಯಕ್ಕೆ ಸಂಬಂಧಿಸಿದ ಅತ್ಯುತ್ತಮ ಕೃತಿಗಳು ಸಮನ್ವಯ ಸಮಿತಿಯಿಂದ ಪ್ರಕಟವಾದವು. ಮುಂದೆ ವಾಟ್ಸಾಪ್ ಮಾಧ್ಯಮ ಸಾಹಿತ್ಯಕ ಪ್ರಸ್ತುತಿಗಳಿಗೆ ವರದಾನವಾಗಿ ಬಂದಿತು.

ಸಮನ್ವಯ ಸಮಿತಿ ಕನ್ನಡವೇ ಸತ್ಯ ವಾಟ್ಸಾಪ್ ಬಳಗ ಆರಂಭವಾಯಿತು. ಕ್ರಮೇಣ ಮೈಸೂರು ಬ್ಯಾಂಕಿನ ಕನ್ನಡ ಬಳಗದ ಸದಸ್ಯರು ಹಾಗೂ ಇತರ ಬ್ಯಾಂಕಿಗರು ಮಾತ್ರವಲ್ಲದೆ ವಿವಿಧ ಕ್ಷೇತ್ರಗಳ ಅನೇಕ ಸಾಹಿತ್ಯಾಸಕ್ತರೂ ಈ ವಾಟ್ಸಾಪ್ ಬಳಗಕ್ಕೆ ಸೇರಿ ಈಗ ಇದೊಂದು ಪ್ರತಿಷ್ಠಿತ ಸಾಹಿತ್ಯಿಕ ವೇದಿಕೆಯಾಗಿದೆ. ಇದರಲ್ಲಿ ಪ್ರತಿನಿತ್ಯವೂ ಬಹುಬಗೆಯ ಸಾಹಿತ್ಯಕ ಬರಹಗಳ ಪ್ರಸ್ತುತಿ, ಕನ್ನಡ ನುಡಿಯ ಸೇವೆ, ನಿತ್ಯೋತ್ಸವ ನಡೆಯುತ್ತಿದೆ.

ಸಮನ್ವಯ ಸಮಿತಿ ವೇದಿಕೆಯಿಂದ ಸಾಹಿತ್ಯ ಸಂಚಿಕೆ, ಸಾಹಿತ್ಯ ಧಾರೆ, ಸಾಹಿತ್ಯ ಮಕರಂದ, ಸಾಹಿತ್ಯ ಮಂದಾರ, ಸಾಹಿತ್ಯ ಸಿರಿ ಸಂಚಿಕೆಗಳು ಹೊರಬಂದಿವೆ. 'ಸರಸಮ್ಮನ ಸತ್ಕಾರ ಸರಪಳಿಗೆ ನಮಸ್ಕಾರ' ಎಂಬ ಕವನ ಸರಪಳಿ ಮತ್ತು ವೇದಿಕೆಯ 27 ಸದಸ್ಯರುಗಳಿಂದ ರಚಿತವಾದ 'ಪಲ್ಲಟ' ಖೋ ಕಾದಂಬರಿ ರಚನೆ ವೇದಿಕೆಯ ವಿಭಿನ್ನ ಪ್ರಯತ್ನಗಳು. ಎಚ್ಚೆಸ್ಕೆ ಅಕ್ಷರ ನಮನ, ಸಣ್ಣ ಕಥಾ ಶ್ರಾವಣ, ಪುಟ್ಟ ಕಥೆ ಶ್ರಾವಣ ಅಭಿಯಾನಗಳಲ್ಲಿ ಅನೇಕರು ಸ್ವರಚಿತ ಸಾಹಿತ್ಯ ರಚಿಸಿದುದು ಕನ್ನಡ ಸಾಹಿತ್ಯ ಲೋಕದಲ್ಲಿ ದಾಖಲೆಗಳನ್ನೇ ನಿರ್ಮಿಸಿದೆ. ಸಾಹಿತ್ಯ ದಾಸೋಹ, ಎಚ್ಚೆಸ್ಕೆ ಬೆಳಕು, ತಿಂಗಳ ಬೆಳಕು ಕಾರ್ಯಕ್ರಮಗಳಲ್ಲಿ ವಿಶಿಷ್ಟ ಉಪನ್ಯಾಸಗಳು ಕೂಡಾ ಏರ್ಪಾಡಾಗುತ್ತಾ ಬಂದಿವೆ. ಹೀಗೆ ಕಾರ್ಯಕ್ರಮಗಳ ಸರಮಾಲೆಯೇ ಇದೆ.

ಶ್ರೀ ಹು.ವಾ. ಶ್ರೀಪ್ರಕಾಶ

ಮೂಲತಃ ಮಲೆನಾಡಿನವರಾದ ಶ್ರೀ ಹು.ವಾ. ಶ್ರೀಪ್ರಕಾಶ ಅವರು ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲೂಕಿನ ದೂಬಳ ಗ್ರಾಮದ ಹುಲ್ಸೆ ವಾಸುದೇವಯ್ಯ ಹಾಗೂ ಕಮಲಮ್ಮನವರ ಪುತ್ರ. ಆರಂಭದಲ್ಲಿ ಹುಲ್ಸೆ, ನಂತರ ಮಂಗಳೂರು, ಹುಬ್ಬಳ್ಳಿ ಮತ್ತು ಮೈಸೂರಿನಲ್ಲಿ ಶಿಕ್ಷಣ ಪಡೆದ ಇವರು ಬಿ.ಎಸ್‌ಸಿ ಪದವೀಧರರು.

ಭಾರತೀಯ ಸ್ಟೇಟ್ ಬ್ಯಾಂಕಿನ ಉದ್ಯೋಗಕ್ಕೆ ಸೇರಿ, ಕಾರವಾರ, ಬೀಳಗಿ, ಚಿಕ್ಕಮಗಳೂರು, ಕುದುರೆಮುಖ, ಮೈಸೂರು, ತುಮಕೂರು, ಹೊಸಕೋಟೆ ಮತ್ತು ಬೆಂಗಳೂರಿನಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿಯ ನಂತರ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ.

ಸಾಹಿತ್ಯ, ಯಕ್ಷಗಾನ, ನಾಟಕ, ಯೋಗ, ಆಧ್ಯಾತ್ಮ, ಪ್ರವಾಸಗಳಲ್ಲಿ ಆಸಕ್ತಿಯುಳ್ಳ ಶ್ರೀಪ್ರಕಾಶ್, ತಮ್ಮ ನಿವೃತ್ತಿಯ ನಂತರ ಜ್ಯೋತಿಷ್ಯ ಕಲಿಕೆಯಲ್ಲಿ ತೊಡಗಿಸಿಕೊಂಡು ಅಡ್ವಾನ್ಸ್ ಡಿಪ್ಲೊಮಾ ಪಡೆದಿದ್ದಾರೆ. ಇವರ 'ಪ್ರೀತಿಯ ಹೂಗೊಂಚಲು' ಎಂಬ ಕವನ ಸಂಕಲನ ಮತ್ತು 'ನನ್ನ ಪ್ರೀತಿಯ ಮಲೆನಾಡು' ಎಂಬ ಅಂಕಣ ಬರಹಗಳ ಸಂಗ್ರಹದ ಕೃತಿಗಳು ಬಿಡುಗಡೆಯಾಗಿವೆ.

ಕಳೆದ ನಾಲ್ಕು ದಶಕಗಳಿಂದಲೂ ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘ ಹಾಗೂ ಸಮನ್ವಯ ಸಮಿತಿಯ ವಿವಿಧ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಶ್ರೀಪ್ರಕಾಶ್ ಅವರು, ಬಹುತೇಕ ದಾಸೋಹಗಳಲ್ಲಿ ಭಾಗವಹಿಸಿ ಕತೆ, ಕವನ, ಪ್ರಬಂಧ ಮುಂತಾದ ಬರಹಗಳನ್ನು ಪ್ರಸ್ತುತಪಡಿಸಿದ್ದಾರೆ. ವೇದಿಕೆಯ 'ಕವಿಮನ' ಅಂಕಣವನ್ನು ಕಳೆದ ಹಲವು ವರ್ಷಗಳಿಂದ ಯಶಸ್ವಿಯಾಗಿ ನಿರ್ವಹಿಸುತ್ತಿರುವ ಶ್ರೀಪ್ರಕಾಶ್, ಎಲ್ಲರ ಮನ್ನಣೆಗೆ ಪಾತ್ರರಾಗಿದ್ದಾರೆ.

***

ಇಷ್ಟೇ ಅಲ್ಲದೆ, 'ಸಾಹಿತ್ಯ ದಾಸೋಹ' ಹೆಸರಿನ ಯೂಟ್ಯೂಬ್ ನಲ್ಲಿ ವೇದಿಕೆಯ ಎಲ್ಲ ಕಾರ್ಯಕ್ರಮಗಳೂ ವೀಕ್ಷಣೆಗೆ ಲಭ್ಯವಿವೆ. ಈಗ ಸಮನ್ವಯ ಸಮಿತಿಯದೇ ಜಾಲತಾಣ (ವೆಬ್ ಸೈಟ್) ಬೇರೆ ಇದೆ. ಸಾಹಿತ್ಯ ದಾಸೋಹದಲ್ಲಿ ವಿವಿಧ ಲೇಖಕರು ಪ್ರಸ್ತುತಪಡಿಸಿದ ಕತೆ, ಕವನ, ಪ್ರಬಂಧ ಮುಂತಾದ ಬರಹಗಳನ್ನೊಳಗೊಂಡ 'ಸಾಹಿತ್ಯ ದಾಸೋಹ' ಸಂಚಿಕೆ ಪ್ರತಿ ತಿಂಗಳೂ ಪ್ರಕಟವಾಗುತ್ತಿದೆ. ವೇದಿಕೆಯ ಹಲವಾರು ವಿಭಿನ್ನ ಬಗೆಯ ಚಟುವಟಿಕೆಗಳು ತಂತ್ರಜ್ಞಾನದ ನೆರವಿನಲ್ಲಿ ಬೆಳಕು ಕಾಣುತ್ತಿವೆ.

ಈ ಎಲ್ಲ ಚಟುವಟಿಕೆಗಳ ಹಿಂದೆ ಸೂತ್ರಧಾರಿಯಾಗಿರುವುದು ಶ್ರೀ ಬೆಂ.ಶ್ರೀ.ರವೀಂದ್ರರವರು, ನಮ್ಮೆಲ್ಲರ ಪ್ರೀತಿಯ ಹೆಡ್‌ಮಾಸ್ತ್ರು.

ಅನೇಕ ವಿದ್ವಾಂಸರು, ಚಿಂತಕರು ನಮ್ಮ ವೇದಿಕೆಯಲ್ಲಿದ್ದಾರೆ. ವೇದಿಕೆಯಲ್ಲಿ ಪ್ರಸ್ತುತವಾಗುವ ಬರಹಗಳು ವೈವಿಧ್ಯಮಯ ವಾಗಿರುತ್ತವೆ. ಲೇಖಕರ ಭಾವನೆ, ಚಿಂತನೆ ಮತ್ತು ಅವರ ಶಬ್ದ ಸಂಗ್ರಹ ಇತ್ಯಾದಿ ಎಲ್ಲ ವ್ಯಕ್ತವಾಗುತ್ತವೆ. ಈ ವೇದಿಕೆಯ ಮೂಲಕ ಬೆಳಕಿಗೆ ಬಂದ ಕೆಲವರು ತಮ್ಮದೇ ಪುಸ್ತಕಗಳನ್ನು ಪ್ರಕಟಿಸಿದ್ದರೆ, ಇನ್ನು ಕೆಲವರು ಆಗಾಗ್ಗೆ ವಿವಿಧ ಪತ್ರಿಕೆಗಳಲ್ಲಿ ಅಂಕಣಗಳು, ಕತೆ, ಕವನ, ಪ್ರಬಂಧ ಮುಂತಾದುವುಗಳನ್ನು ಬರೆಯುತ್ತಿರುವುದು ಹೆಮ್ಮೆಯ ವಿಷಯ.

ಹೀಗೆ ಎಲ್ಲರೂ ಚಟುವಟಿಕೆಯಿಂದ ಇರುವಾಗ ನಾನೂ ಏನಾದರೂ ಮಾಡದಿದ್ದರೆ ಹೇಗೆ ಎಂದು ಅನಿಸಿದಾಗ, ಈ ಹಿಂದೆ ಶ್ರೀ ಬಿ.ಎಸ್.ಚಂದ್ರಶೇಖರ್ ಅವರು ಆರಂಭಿಸಿ, ಶ್ರೀ ಕೆ.ಎನ್.ಮಹಾಬಲರವರು ಮುಂದುವರೆಸಿದ 'ಕವಿಮನ' ಅಂಕಣವನ್ನು ನಾನೀಗ ಮುಂದುವರಿಸಿ ನಡೆಸುತ್ತಿದ್ದೇನೆ. 'ಕವಿಮನ'ಕ್ಕೆ ಸಾಮಾನ್ಯವಾಗಿ ವಿಜಯ್ ಕುಮಾರ್ ಸುರತ್ಕಲ್, ವಿಠಲ್ ಇಜೇರಿ, ರಘುರಾಂ ಎನ್.ವಿ., ಶಂಕರರಾವ್, ಮಾಲತಿ ಶ್ರೀನಿವಾಸನ್, ಗಿರಿಜಾರಾಜ್, ಕಮಲಾಕ್ಷಿ, ರಂಗೋಪಂತ್ ನರಸಿಂಗರಾವ್ ಮುಂತಾದವರು ಸ್ಪಂದಿಸುತ್ತಾರೆ. ಇವರ ಸ್ಪಂದನೆ ಬಾರದಿದ್ದರೆ ಹುಡುಕುವಂತಾಗುತ್ತದೆ.

ಇಂದಿನ ದಾಸೋಹದಲ್ಲಿ ವೈವಿಧ್ಯಮಯ ಲೇಖನಗಳನ್ನು ಪ್ರಸ್ತುತಪಡಿಸಿದ ಎಲ್ಲ ಲೇಖಕ, ಲೇಖಕಿಯರಿಗೂ ನನ್ನ ಅಭಿನಂದನೆಗಳು. ಕಥೆ, ಕವನ. ಲೇಖನಗಳೆಲ್ಲ ಚೆನ್ನಾಗಿದ್ದವು. ಎಲ್ಲದರ ಬಗ್ಗೆ ಎರಡೆರಡು ಮಾತುಗಳಲ್ಲಿ ನನ್ನ ಅನಿಸಿಕೆ ಹೇಳಬಯಸುತ್ತೇನೆ.

~ ಗಣಪತಿ ಹೆಗಡೆಯವರು ತಮ್ಮ ಲೇಖನದಲ್ಲಿ 'ಕನ್ನಡ ಸಮಾಸ'ಗಳ ಬಗ್ಗೆ ಉದಾಹರಣೆ ಸಹಿತ ಬಹಳ ಸೊಗಸಾಗಿ ತಿಳಿಸಿದ್ದಾರೆ. ಇವರಿಂದ ಉತ್ತಮ ವ್ಯಾಕರಣ ಗ್ರಂಥವನ್ನು ನಿರೀಕ್ಷಿಸಬಹುದು.
~ ಸ್ನೇಹಾ ಶಶಿಧರ್ ಅವರ 'ಮರಳಿ ಅರಳು' 40ರ ವಿದುರ ಯುವಕನ ಸುಪ್ತ ಪ್ರೇಮ ಕತೆ. ತನ್ನ ಆಲೋಚನೆ ಸರಿಯಲ್ಲ ಅಂದುಕೊಂಡವನಿಗೆ ಕೊನೆಗೆ ಅವಳಿಗೆ ಆಸರೆಯಾಗುವ ಅವಕಾಶ ಒದಗಿಬರುವ ತಿರುವು ಕಥೆಯಲ್ಲಿ ಚೆನ್ನಾಗಿ ಮೂಡಿಬಂದಿದೆ.
~ ಪೂರ್ಣಿಮಾ ಭಗವಾನರು ದೈವದ ನೆಲೆಯ ಬಗೆಗೆ ಶಾಸನ, ಪುರಾಣ, ಜಾನಪದ ಎಲ್ಲವನ್ನು ಆಧರಿಸಿ ಶ್ರೀ ಸಾಲಿ ರಾಮಚಂದ್ರರಾಯರು ಬರೆದ ಬೃಹತ್ ಗ್ರಂಥ 'ತಿರುಪತಿ ತಿಮ್ಮಪ್ಪ' ಕೃತಿಯನ್ನು ಪರಿಚಯಿಸಿ ಅನೇಕ ಮಾಹಿತಿ ಒದಗಿಸಿದ್ದಾರೆ. ಉತ್ತಮ ಲೇಖನ.
~ ಎನ್.ವಿ. ರಘುರಾಮ್ ಅವರ 'ನನ್ನ ಮದುವೆ' ಕಥೆಯಲ್ಲಿ ಮೂರನೇ ತರಗತಿಗೇ ಓದಿಗೆ ತರ್ಪಣ ನೀಡಿ ಮನೆ ಕೆಲಸ ನಿರ್ವಹಿಸುವ ಮುಗ್ಧ ಹುಡುಗಿಗೆ ಕೊನೆಗೂ ದೊರೆಯುವುದು ಎರಡನೇ ಹೆಂಡತಿಯಾಗುವ ದೌರ್ಭಾಗ್ಯ. ಕುತೂಹಲಕಾರಿಯಾದ ನಿರೂಪಣೆ ಇದೆ. ಉತ್ಪ್ರೇಕ್ಷೆ ಇಲ್ಲ. ಅಂತ್ಯ ಮನಮುಟ್ಟುವಂತಿದೆ.
~ ಎಲ್. ಗಿರಿಜಾ ರಾಜ್ ಅವರ 'ಯಾರಿವನು ತೇಜಸ್ವಿ' ಕತೆಯಲ್ಲಿ ಒಳ್ಳೆಯ ಆರಂಭವಿದ್ದು, ದೇವರು ನೆನಪಿನ ಶಕ್ತಿ ಕೊಟ್ಟ, ಕಹಿ ನೆನಪು ಬಾಧಿಸುತ್ತದೆ, ಅವರವರ ಸ್ಥಳ ಬಂದಾಗ ಇಳಿಯಬೇಕು ಎಂಬ ಧ್ವನಿಪೂರ್ಣ ಸಾಲುಗಳಿವೆ.
~ ಕೆ.ಎನ್.ಮಹಾಬಲರವರ, ಮಾರುಕಟ್ಟೆಯಲ್ಲಿ ಸೀಳುಕಾಯಿ ಸ್ವಾಮಿ ಎಂದು ಕರೆಸಿಕೊಳ್ಳುತ್ತಿದ್ದ 'ಸರ್ವ ಕುತೂಹಲಿ ಡಾಕ್ಟರ್ ಕೃಷ್ಣಾನಂದ ಕಾಮತ್' ರವರ ಪರಿಚಯ ಲೇಖನ ಸಂಕ್ಷಿಪ್ತವಾಗಿ ಸೊಗಸಾಗಿದೆ. ಇವರ ಕವನವಾಗಲಿ ಲೇಖನವಾಗಲಿ ತೂಕ ಹಾಕಿದಂತೆ, ಒಂದು ಪದ ಹೆಚ್ಚು ಅಥವಾ ಕಡಿಮೆಯಾಗದಂತೆ ಇರುತ್ತದೆ.

~ ಕಮಲಾಕ್ಷಿ ಸಿ.ಆರ್. ಅವರು ತಮ್ಮ 'ಆರತಿ ಮಂಗಳಾರತಿ' ಎಂಬ ಲೇಖನದಲ್ಲಿ ಆರತಿಯ ಮಹತ್ವ ತಿಳಿಸಿ ಕೊಟ್ಟಿದ್ದಾರೆ. ಜ್ಯೋತಿಯ ಬೆಳಕಲ್ಲಿ ದೇವರು ಚೆಂದ. ಆರತಿ ಪದದ ಉಗಮದ ಬಗ್ಗೆ ಚಿಂತಿಸಿದ್ದಾರೆ. ಧನಾತ್ಮಕತೆ ತರುವ ಮಂಗಳಾರತಿಯ ಬಗ್ಗೆ ಒಳ್ಳೆಯ ಮಾಹಿತಿ ನೀಡಿದ್ದಾರೆ.

~ ಶೀಲಾ ಅರಕಲಗೂಡು ಅವರು 'ಗಣಪಗೆ ಬೇಡಿಕೆ' ಮತ್ತು 'ಯಾರು ಹೆಚ್ಚು' ಎಂಬ ಎರಡು ಉತ್ತಮ ಕವನಗಳನ್ನು ನೀಡಿದ್ದಾರೆ. ಗಣಪಗೆ ಬೇಡಿಕೆ ದ್ವಿತೀಯ ಅಕ್ಷರ ಪ್ರಾಸ ಇರುವ ಸುಂದರ ರಚನೆ. ಮತ್ತೊಂದು ಕವನದಲ್ಲಿ ತಂದೆ ರಕ್ಷೆ, ತಾಯಿ ಮಮತೆ ಹೀಗೆ ಎರಡು ಕೈ. ಎರಡು ಕಣ್ಣು ಇವುಗಳಲ್ಲಿ ಯಾರು ಹೆಚ್ಚು ಎಂದು ಹೇಳುವುದು? ಉತ್ತಮ ಸಂದೇಶ ನೀಡುವ ಕವನ 'ಯಾರು ಹೆಚ್ಚು'

~ ನಾಗರತ್ನ ಚಂದ್ರಶೇಖರ್ ಅವರು 'ಆನೆಗಳ ಘೂ ಘೂ ಮತ್ತು ಅದರ ಕಾಗದಗಳು' ಎಂಬ ಲೇಖನದಲ್ಲಿ ಶ್ರೀಲಂಕಾದಲ್ಲಿ ಆನೆಗಳ ಘೂ ಘೂ ಅಂದ್ರೆ ಆನೆಯ ಲದ್ದಿಯಿಂದ ಕಾಗದ ತಯಾರಿಸುವ ಮಾಹಿತಿಯನ್ನು ವಿವರವಾಗಿ ನೀಡಿದ್ದಾರೆ. ಆನೆಗಳ ಅನಾಥಾಶ್ರಮ ಕುತೂಹಲಕಾರಿಯಾಗಿದೆ. ಇದೊಂದು ಮಾಹಿತಿಪೂರ್ಣ ಪ್ರವಾಸ ಕಥನ.

~ ಅನ್ನಪೂರ್ಣ ಸುಬ್ಬರಾವ್ ಅವರು 'ಗುಡಿಮಲ್ಲಂ'ನಲ್ಲಿರುವ ಕ್ರಿಸ್ತಪೂರ್ವ ಮೂರನೇ ಶತಮಾನದ ಶಿವನ ದೇವಾಲಯವನ್ನು ಚೆನ್ನಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಪರಶುರಾಮನ ಕಥೆಯ ಮುಂದುವರಿದ ಭಾಗ ಕುತೂಹಲಕಾರಿಯಾಗಿದೆ.

~ ಕೆ.ಎನ್.ಭಗವಾನ್ ಅವರು ತಮ್ಮ 'ಹೀಗೊಂದು ಎಡವಟ್ಟು' ಲೇಖನದಲ್ಲಿ ತಾವು ಹೈದರಾಬಾದ್ ಪ್ರವಾಸಕ್ಕೆ ಹೊರಟಾಗ ಸೂಟ್‌ಕೇಸ್ ಬಿಟ್ಟುಹೋಗಿ ಆದ ಆತಂಕ, ಅವಾಂತರದ ಚಿತ್ರಣವನ್ನು ಸೊಗಸಾಗಿ ಮಾಡಿಕೊಟ್ಟಿದ್ದಾರೆ.

~ ಮಾಧುರಿ ಕೃಷ್ಣ ಅವರ 'ಬಿಗ್ ಝೀರೋ– ಅಕ್ಕ ತಮ್ಮ ಇಬ್ಬರೂ' ಎಂಬ ಲೇಖನದಲ್ಲಿ ಬಡಪೆಟ್ಟಿಗೆ ಹುಡುಗಿ ಒಪ್ಪಿಕೊಳ್ಳದ ಸೋದರಳಿಯನಿಗೆ ಹುಡುಗಿ ತೋರಿಸಲು ಇವರು ಮಾಡುವ ಪ್ಲಾನ್, ಅಲ್ಲಿ ಹೋದಾಗ ಬೇರೆಯೇ ಸೀನ್ ಉದ್ಭವಿಸಿ ಇವರ ಯೋಜನೆ ತಲೆಕೆಳಗಾಗುತ್ತದೆ. ಇದೊಂದು ಲವಲವಿಕೆಯಿಂದ ಓದಿಸಿಕೊಳ್ಳುವ ಬರಹ

~ ಎಂ.ಎಸ್.ನರಸಿಂಹಮೂರ್ತಿ ಅವರ 'ಕಾಣೆಯಂತೆ ಮಾಯವಾದನು' ಹಾಸ್ಯ ಲೇಖನದಲ್ಲಿ ಗಂಭೀರ ವಿಷಯವಿದೆ. ಉದ್ಘಾಟಕರ ತರಾತುರಿ ಸಂಘಟಕರಿಗೆ ಅದೆಷ್ಟು ಬೇಸರ ತರುತ್ತದೆಂಬುದನ್ನು ಹಾಸ್ಯದಲ್ಲಿ ಹೇಳಿದ್ದಾರೆ. ಆರ್ಥಿಕ ಲಾಭ ಮಾತ್ರ ನೋಡುವ ರಾಜಕಾರಣಿಗಳು ತರಾತುರಿಯಲ್ಲಿ ಉದ್ಘಾಟಿಸಿ ಹೋಗಿಬಿಡುತ್ತಾರೆ. ಟೈಮಿಗೂ ನಾಯಕರಿಗೂ ಆಗಿ ಬರೋದಿಲ್ಲ ಎನ್ನುತ್ತಾ, ಅಕ್ಕ ಸಮ್ಮೇಳನದ ಅದ್ದೂರಿ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ.

~ ರತ್ನ ಮೂರ್ತಿಯವರ 'ಷಣ್ಮುಖ ದಂಡಕ' ಅದ್ಭುತ ಶಬ್ದ ಪಾಂಡಿತ್ಯ ರಚನಾ ವಿಧಾನದಿಂದ ಬೆರಗುಗೊಳಿಸುತ್ತದೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಇವರು ನುರಿತವರು.

~ ಮಾಲತಿ ಶ್ರೀನಿವಾಸನ್ ರವರ 'ಸಿಕ್ಕಾಪಟ್ಟೆ ಬ್ಯುಸಿ' ಬದುಕಿನ ಹಿನ್ನೋಟ ನೀಡುವ ಉತ್ತಮ ಬರಹ.

~ ಕೆ.ಆರ್.ಎಸ್.ಮೂರ್ತಿಯವರ ಎರಡು ಕವನಗಳಲ್ಲಿ, 'ಸೃಷ್ಟಿ ಸಿರಿಯ ಕಂದ ನಾನು' ಕವನ ಲಯಬದ್ಧವಾಗಿದ್ದು, ಸೃಷ್ಟಿಗೆ ಧನ್ಯತಾ ಭಾವ ಹೇಳುವಂತಿದೆ. ಎರಡನೆಯ ಕವನ 'ಸ್ವಚ್ಛಂದದಾನಂದ' ಅರ್ಥಪೂರ್ಣ ಪ್ರಾರ್ಥನೆಯಾಗಿದೆ

~ ವೆಂಕಟೇಶ ಕಾಮತ್ ಅವರು 'ಮೆಟಾಮಾರ್ಫಸಿಸ್' ಎಂಬ ಉತ್ತಮ ಲೇಖನ ನೀಡಿದ್ದಾರೆ. ಕಾಫ್ಕನ ಬಗ್ಗೆ ನೀಡಿರುವ ಮಾಹಿತಿ ಮನಮುಟ್ಟುತ್ತದೆ. ಜಿರಳೆಯಾಗಿ ರೂಪಾಂತರಗೊಳ್ಳುವ ಕ್ರಿಯೆ ಧ್ವನಿಪೂರ್ಣವಾಗಿದೆ.

ಲೇಖನ. ಕಥೆ. ಕವನ, ಪ್ರವಾಸ ಕಥನಗಳಿಂದ ಇಂದಿನ ದಾಸೋಹಕ್ಕೆ ಲೇಖಕರು ವಿಶೇಷ ಮೆರಗು ತಂದಿದ್ದಾರೆ. ತಮ್ಮ ಲೇಖನವನ್ನು ಓದಿ ಇಂದಿನ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಎಲ್ಲ ಲೇಖಕರಿಗೂ ಅಭಿನಂದನೆಗಳು.

ಇಂದಿನ ಸಾಹಿತ್ಯ ದಾಸೋಹ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವ ಅವಕಾಶ ನೀಡಿದ್ದಕ್ಕಾಗಿ ವೇದಿಕೆಯ ಸಂಚಾಲಕರಿಗೆ ಮತ್ತು ಸದಸ್ಯರೆಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು.

***

ನವರಾತ್ರಿ – ಮನೆಮನೆಯಲ್ಲೂ ಬೊಂಬೆ ಹಬ್ಬ – ಡಾ. ಶುಭಶ್ರೀ ಪ್ರಸಾದ್ ಅವರ ನಿವಾಸ



ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ,
1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 229 ನಡೆದ ದಿನಾಂಕ: 14 ಸೆಪ್ಟೆಂಬರ್ 2024
ಸಂಚಿಕೆಯ ಬಿಡುಗಡೆ ದಿನಾಂಕ: 20 ಅಕ್ಟೋಬರ್ 2024 – ಭಾನುವಾರ

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)